ಮಂಗಳ ಪ್ರಭಾತ



ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿ

ವಲ್ಲಭನಿಕೇತನ, ಬೆಂಗಳೂರು-560001

ಮಂಗಳ ಪ್ರಭಾತ

ಗಾಂಧೀಜಿ

ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿ
ವಲ್ಲಭನಿಕೇತನ, ಕುಮಾರಪಾರ್ಕ್ ಪೂರ್ವ
ಬೆಂಗಳೂರ-560 001

MANGALA PRABHATA (Gandhi's letters on Ashram Observances)
Edited by Gandhi Granthamala Editorial Board and Published by
Karnatak Sarvodaya Sahitya Samithi, Vallabha Niketan,
Kumarapark East, Bangalore-560 001

2000 Copies—April 1994

ಬೆಲೆ : 5/- ಐದು ರೂಪಾಯಿ

ಮುದ್ರಕರು :
ರಾಜ್‌ಕಮಲ್ ಪ್ರೆಸ್
ಅರಳೀಪೇಟೆ, ಬೆಂಗಳೂರು-560 053
ಫೋನ್ ನಂ. 620650

ಪ್ರಕಾಶಕರ ಮಾತು

ಗಾಂಧೀಜಿ ತಮ್ಮ ಜೀವನ-ದರ್ಶನದ ಸಾರಸರ್ವಸ್ವವನ್ನು ಏಕಾದಶ ವ್ರತಗಳಲ್ಲಿ ತಿಳಿಸಿರುತ್ತಾರೆ. ಯರವಾಡ ಜೈಲಿನಿಂದ ಪ್ರತಿ ಮಂಗಳವಾರ ಆಶ್ರಮವಾಸಿಗಳಿಗೆ 'ವ್ರತವಿಚಾರ' ಎಂಬ ವಿಷಯವಾಗಿ ಪತ್ರಗಳನ್ನು ಬರೆಯುತ್ತಿದ್ದರು. ಆ ಪತ್ರಗಳ ಸಂಗ್ರಹವೇ **'ಮಂಗಳ ಪ್ರಭಾತ'** ಎಂದು ಪುಸ್ತಕರೂಪದಲ್ಲಿ ಪ್ರಕಟವಾಗಿದೆ.

ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿಯು ವಿನೋಬಾ ಜನ್ಮ ಶತಾಬ್ದಿ ಸಂದರ್ಭದಲ್ಲಿ 'ಮಂಗಳ ಪ್ರಭಾತ'ವನ್ನು ಪುನರ್ ಮುದ್ರಿಸಿ ಜನತೆಯಲ್ಲಿ ರಚನಾತ್ಮಕ ಕಾರ್ಯಕರ್ತರಲ್ಲಿ ಗಾಂಧಿ ವಿಚಾರಧಾರೆಯನ್ನು ಜಾಗೃತಗೊಳಿಸುವ ದೃಷ್ಟಿಯಿಂದ ಪ್ರಕಟಿಸಿದೆ.

ಶ್ರೀ ರಂಗನಾಥ ರಾಮಚಂದ್ರ ದಿವಾಕರರು ಈ ಕಿರುಹೊತ್ತಿಗೆಗೆ ಮುನ್ನುಡಿಯನ್ನು ಬರೆದು ಕೊಟ್ಟು ಹರಸಿದ್ದಾರೆ. ಇದಕ್ಕಾಗಿ ನಾವು ಅವರಿಗೆ ಹೃತ್ಪೂರ್ವಕ ವಂದನೆಗಳನ್ನರ್ಪಿಸುತ್ತೇವೆ.

ಸತ್ಯವ್ರತ
ಅಧ್ಯಕ್ಷರು
ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿ

1-4-1994
ಬೆಂಗಳೂರು

ಇದಲ್ಲದೆ. ದೇವರು ಇಲ್ಲ, ಎಂದು ಹೇಳುವ ನಾಸ್ತಿಕರುಂಟು. ಆದರೆ ತಾವು ತಮ್ಮ ಪಂಚೇಂದ್ರಿಯಗಳ ಮೂಲಕ, ತಮ್ಮ ಮನಸ್ಸು ಬುದ್ಧಿಗಳ ಮೂಲಕ ಕಂಡುಂಡದ್ದನ್ನು ನಾಸ್ತಿಕ ಶಿರೋಮಣಿಗಳು ಕೂಡ ಅಲ್ಲಗಳೆಯಲಾರರು ! ಈ ರೀತಿ ನೋಡಿದರೂ ಸತ್ಯಕ್ಕೆ ತನಗೆ ಪ್ರತ್ಯಕ್ಷವಾದ ಮಾತಿಗೆ, ವಸ್ತುವಿಗೆ, ತನ್ನ ಅನುಭವಕ್ಕೆ ಬಂದ ಸತ್ಯಕ್ಕೆ ಪ್ರಪ್ರಥಮ ಸ್ಥಾನ ದೊರಕುವುದು. ಆ ರೀತಿ ಗಾಂಧಿ ಅವರು ಸತ್ಯಕ್ಕೆ ಸರ್ವೋಚ್ಚ ಸ್ಥಾನವನ್ನು ಕೊಟ್ಟರು. ಆಶ್ರಮದ ವ್ರತಗಳಲ್ಲಿ ಅದಕ್ಕೆ ಅಗ್ರಸ್ಥಾನವನ್ನು ಕಲ್ಪಿಸಿದರು.

ಮಾನವಪ್ರಾಣಿಗೆ ಆಗುವ ಸತ್ಯಾನುಭವಗಳನ್ನು ವಿಂಗಡಿಸಬೇಕಾದರೆ ಕಾಯಿಕ, ವಾಚಕ, ಮಾನಸಿಕ ಎಂಬ ಸ್ತರಗಳನ್ನು ವಿವರಿಸಬಹುದು, ಅಥವಾ ಮಾನವನಲ್ಲಿರುವ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯ ಕೋಶಗಳಲ್ಲಿ ಅನುಭವಕ್ಕೆ ಬರುವ ಸತ್ಯಗಳನ್ನು ವಿಂಗಡಿಸಿ ಹೇಳಬಹುದು. ಅವೆಲ್ಲ ತ್ರಿಕಾಲದಲ್ಲಿರುವ ಅಚ್ಚಳಿಯದ ಸತ್ಯದ ಪ್ರತಿಬಿಂಬಗಳು ಮಾತ್ರ.

ಇನ್ನು ಸತ್ಯದ ಪ್ರತ್ಯಕ್ಷ ಪ್ರತೀತಿಗೆ ಹಾಗೂ ಸತ್ಯವನ್ನೇ ಹಿಂಬಾಲಿಸಿ ಕಾಯಾ-ವಾಚಾ-ಮಾನಸಾ ಆಚರಣೆ ಮಾಡಬೇಕಾದರೆ ಮಾರ್ಗ ಯಾವುದು? ಗಾಂಧಿ ಅವರು ತಮ್ಮ ಜೀವನದ ಉದ್ದಕ್ಕೂ ಬಂದ ಆಧಾರದ ಮೇಲೆ ಅಹಿಂಸೆಯೇ ಆ ಮಾರ್ಗ ಎಂದು ಸಾರಿದ್ದಾರೆ. ಏಕಾತ್ಮತ್ವದ ಭಾವನೆ ಪರಿಪೂರ್ಣವಾಗಿ ಮೈಯುಂಡು ಅದರಿಂದಲೇ ಪ್ರೇರಿತರಾದವರು ಪೂರ್ಣ ಅಹಿಂಸೆಯನ್ನು ಪಾಲಿಸಬಲ್ಲರು. ಯಾಕೆಂದರೆ ನಾವೆಲ್ಲರೂ ಜೀವಿಸುವದು ಕೂಡ ಒಂದು ಬಗೆಯ ಹಿಂಸೆಯೇ ಸರಿ. ಯಾಕೆಂದರೆ ನಾವು ಜೀವಿಸುವುದು ಸಹ ಇತರ ಜೀವಗಳ ಸ್ಥಾನವನ್ನು ನಾವು ಆಕ್ರಮಿಸಿದಂತೆ ! ಇದನ್ನೆಲ್ಲ ಗಾಂಧಿ ಬಹಳ ಸೂಕ್ಷ್ಮವಾಗಿ ವಿವರಿಸಿದ್ದಾರೆ. ಹಿಂಸೆ ಯಾವುದೇ ರೂಪದಲ್ಲಿ ಕಾಯಿಕ, ಮಾನಸಿಕ, ವಾಚಕ ಸತ್ಯಾಗ್ರಹಿಗೆ ಸಲ್ಲದು. ಭಾರತದಲ್ಲಿ ಅಹಿಂಸೆಯ ಪರಂಪರೆ ವೈದಿಕಕಾಲಕ್ಕೂ ಆಚೆಗಿನದು. ಶ್ರಮಣ ಸಂಸ್ಕೃತಿಯಲ್ಲಿ ಅಹಿಂಸೆಗೆ ಆದ್ಯಸ್ಥಾನ. ಅದೇ ರೀತಿ ಜೈನ–ಬೌದ್ಧ ಸಂಸ್ಕೃತಿಗಳೂ ಅಹಿಂಸೆಗೆ ಎಲ್ಲಕ್ಕೂ ಹೆಚ್ಚು ಮಹತ್ವ ಕೊಟ್ಟಿವೆ. ನಾವು ಸನಾತನ ಎಂದು ಹೇಳುವ ಹಿಂದೂಧರ್ಮವು ಕೂಡ ಜೈನ–ಬೌದ್ಧ ಸಂಸ್ಕೃತಿಗಳಿಂದ ಅಹಿಂಸೆಯ

ಸೂಕ್ಷ್ಮ ಪಾಠಗಳನ್ನು ಕಲಿತುಕೊಂಡಿದೆ. ನಾವು ಈಗ ಅಹಿಂಸೆಯು ಅರ್ಥದಲ್ಲಿ 'ನಾನ್-ಹ್ವಾಯೆಲನ್ಸ್' ಶಬ್ದವನ್ನು ಉಪಯೋಗಿಸುತ್ತೇವೆ. ಆದರೆ ಆ ಆಂಗ್ಲ ಶಬ್ಧದಿಂದ ಅಹಿಂಸೆಯು ದರ್ಶನ ಆಗದು. ನಾವು 'ಅಹಿಂಸಾ' ಶಬ್ದ ವನ್ನೇ ಉಪಯೋಗಿಸಬೇಕು. ನಾನೊಮ್ಮೆ ಗಾಂಧಿಯವರ ಮುಂದೆ ಈ ಪ್ರಶ್ನೆಯನ್ನು ಎತ್ತಿದ್ದೆ. ಏಕಾತ್ಮತ್ವದ ಭಾವನೆಗಾಗಿ ನಾವು ಅಹಿಂಸೆಗೆ ಪರ್ಯಾಯವಾಗಿ 'ಲವ್ಹ' ಶಬ್ದವನ್ನು ಉಪಯೋಗಿಸಬಹುದಲ್ಲವೆ ? ಎಂದು ಕೇಳಿದ್ದೆ. ಅದಕ್ಕೆ ಅವರು ತಟ್ಟನೆ ಕೊಟ್ಟ ಉತ್ತರ : 'ಲವ್ಹ' ಎಂಬುದಕ್ಕೆ ಯೋಗರೂಢಿಯಿಂದ ಬೇರೆ ಅರ್ಥಗಳು ಹೊಂದಿಕೊಂಡಿವೆ. ನನಗೆ 'ಅಹಿಂಸಾ' ಶಬ್ದವೇ ಇಷ್ಟ'. ಅವರು ಅಂದದ್ದು ಅಕ್ಷರಶಃ ಸತ್ಯ. ಪರಂಪರೆ ಯಿಂದ, ಮೂರು ಸಾವಿರ ವರಷಗಳ ಸಂಸ್ಕಾರ-ಆಚರಣೆಗಳ ಮೂಲಕ ಅಹಿಂಸೆಗೆ ಬಂದ ಗಾಂಭೀರ್ಯ-ಗೌರವಗಳು ಇತರ ಶಬ್ದಗಳಿಗೆ ಬರುದ ಬಗೆ ಯಾವುದು ?

ಕೇವಲ ಸಾಮಾನ್ಯ ವಾವಹಾರಿಕ ಹಾಗೂ ನೈತಿಕ ದೃಷ್ಟಿಯಿಂದ ನೋಡಿದರೂ ಸತ್ಯ-ಅಹಿಂಸೆಯು ಜೋಡು ಅಥವಾ ಯುಗುಲ ಬಹಳ ಮಹತ್ವದೆಂದು ಕಂಡುಬರುವದು. ಯಾವದೇ ಎರಡು ವ್ಯಕ್ತಿಗಳು ಅಥವಾ ಗುಂಪುಗಳು ಸಹಕಾರದಿಂದ ಪರಸ್ಪರ ಲಾಭಕ್ಕಾಗಿ, ಪ್ರಗತಿಗಾಗಿ ಕೂಡಿ ನಡೆಯಬೇಕಾದರೆ, ಅಥವಾ ಯಾವದಾದರೊಂದು ಕಾರ್ಯವನ್ನು ಸಾಧಿಸ ಬೇಕಾದರೆ ಆ ಇಬ್ಬರಲ್ಲಿ ಇಲ್ಲವೆ ಗುಂಪುಗಳಲ್ಲಿ ಸತ್ಯ-ಅಹಿಂಸೆಗಳೇ ಸಹಾಯಕ ಉಪಕಾರಕ, ಕಾರ್ಯಸಾಧಕ. ಇಬ್ಬರೂ ಸತ್ಯ-ಅಹಿಂಸೆಗಳಿಂದ ಪ್ರೇರಿತರಾಗಿ ನಡೆಯುವರೆಂಬ ಭರವಸೆ ಪರಸ್ಪರರಿಗೆ ಇಲ್ಲದಿದ್ದರೆ, ಸಹಕಾರ-ಸಹಯೋಗ ಗಳು ಅಶಕ್ಯಪ್ರಾಯ. ರಶಿಯಾ-ಅಮೇರಿಕಾ ಇವರಿಬ್ಬರ ನಡುವೆ ಸತ್ಯ-ಅಹಿಂಸೆಗಳ ಪರಸ್ಪರ ವಿಶ್ವಾಸವು ಪೂರಾ ಹಾರಿಹೋಗಿದೆ ! ಅಣವಿಕ ಯುದ್ಧವು ಪ್ರಾರಂಭವಾದರೆ ಮಾನವಕುಲವೇ ಇಲ್ಲದಂತಾಗುವದು. ಈ ಪೃಥ್ವೀ ತಲದ ಮೇಲೆ ಯಾವ ಜೀವಜಂತುಗಳೂ ಸುರಕ್ಷಿತವಾಗಿ ಜೀವಿ ಸುವುದು ದುಃಸಾಧ್ಯ !

ಬ್ರಹ್ಮಚರ್ಯೆ ಎಂದೊಡನೆ ಈ ವತ್ರವು ಬರೀ ಲೈಂಗಿಕ ಸಂಯಮಕ್ಕೆ ಹಾಗು ಪುರುಷರಿಗೆ ಮಾತ್ರ ಸಂಬಧಿಸಿದ್ದು ಎಂಬ ತಪ್ಪು ತಿಳಿವಳಿಕೆ ಇದೆ. ಅದನ್ನು ಗಾಂಧೀ ಸರಿಪಡಿಸಿದ್ದಾರೆ,

ಇದಲ್ಲದೆ. ದೇವರು ಇಲ್ಲ, ಎಂದು ಹೇಳುವ ನಾಸ್ತಿಕರುಂಟು. ಆದರೆ ತಾವು ತಮ್ಮ ಪಂಚೇಂದ್ರಿಯಗಳ ಮೂಲಕ, ತಮ್ಮ ಮನಸ್ಸು ಬುದ್ಧಿಗಳ ಮೂಲಕ ಕಂಡುಂಡದ್ದನ್ನು ನಾಸ್ತಿಕ ಶಿರೋಮಣಿಗಳು ಕೂಡ ಅಲ್ಲಗಳೆಯಲಾರರು ! ಈ ರೀತಿ ನೋಡಿದರೂ ಸತ್ಯಕ್ಕೆ ತನಗೆ ಪ್ರತ್ಯಕ್ಷವಾದ ಮಾತಿಗೆ, ವಸ್ತುವಿಗೆ, ತನ್ನ ಅನುಭವಕ್ಕೆ ಬಂದ ಸತ್ಯಕ್ಕೆ ಪ್ರಪ್ರಥಮ ಸ್ಥಾನ ದೊರಕುವುದು. ಆ ರೀತಿ ಗಾಂಧಿ ಅವರು ಸತ್ಯಕ್ಕೆ ಸರ್ವೋಚ್ಚ ಸ್ಥಾನವನ್ನು ಕೊಟ್ಟರು. ಆಶ್ರಮದ ವ್ರತಗಳಲ್ಲಿ ಅದಕ್ಕೆ ಅಗ್ರಸ್ಥಾನವನ್ನು ಕಲ್ಪಿಸಿದರು.

ಮಾನವಪ್ರಾಣಿಗೆ ಆಗುವ ಸತ್ಯಾನುಭವಗಳನ್ನು ವಿಂಗಡಿಸಬೇಕಾದರೆ ಕಾಯಿಕ, ವಾಚಕ, ಮಾನಸಿಕ ಎಂಬ ಸ್ತರಗಳನ್ನು ವಿವರಿಸಬಹುದು, ಅಥವಾ ಮಾನವನಲ್ಲಿರುವ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯ ಕೋಶಗಳಲ್ಲಿ ಅನುಭವಕ್ಕೆ ಬರುವ ಸತ್ಯಗಳನ್ನು ವಿಂಗಡಿಸಿ ಹೇಳಬಹುದು. ಅವೆಲ್ಲ ತ್ರಿಕಾಲದಲ್ಲಿರುವ ಅಚ್ಚಳಿಯದ ಸತ್ಯದ ಪ್ರತಿಬಿಂಬಗಳು ಮಾತ್ರ.

ಇನ್ನು ಸತ್ಯದ ಪ್ರತ್ಯಕ್ಷ ಪ್ರತೀತಿಗೆ ಹಾಗೂ ಸತ್ಯವನ್ನೇ ಹಿಂಬಾಲಿಸಿ ಕಾಯಾ-ವಾಚಾ-ಮಾನಸಾ ಆಚರಣೆ ಮಾಡಬೇಕಾದರೆ ಮಾರ್ಗ ಯಾವುದು? ಗಾಂಧಿ ಅವರು ತಮ್ಮ ಜೀವನದ ಉದ್ದಕ್ಕೂ ಬಂದ ಆಧಾರದ ಮೇಲೆ ಅಹಿಂಸೆಯೇ ಆ ಮಾರ್ಗ ಎಂದು ಸಾರಿದ್ದಾರೆ. ಏಕಾತ್ಮತ್ವದ ಭಾವನೆ ಪರಿಪೂರ್ಣವಾಗಿ ಮೈಯುಂಡು ಅದರಿಂದಲೇ ಪ್ರೇರಿತರಾದವರು ಪೂರ್ಣ ಅಹಿಂಸೆಯನ್ನು ಪಾಲಿಸಬಲ್ಲರು. ಯಾಕೆಂದರೆ ನಾವೆಲ್ಲರೂ ಜೀವಿಸುವದು ಕೂಡ ಒಂದು ಬಗೆಯ ಹಿಂಸೆಯೇ ಸರಿ. ಯಾಕೆಂದರೆ ನಾವು ಜೀವಿಸುವುದು ಸಹ ಇತರ ಜೀವಗಳ ಸ್ಥಾನವನ್ನು ನಾವು ಆಕ್ರಮಿಸಿದಂತೆ ! ಇದನ್ನೆಲ್ಲ ಗಾಂಧಿ ಬಹಳ ಸೂಕ್ಷ್ಮವಾಗಿ ವಿವರಿಸಿದ್ದಾರೆ. ಹಿಂಸೆ ಯಾವುದೇ ರೂಪದಲ್ಲಿ ಕಾಯಿಕ, ಮಾನಸಿಕ, ವಾಚಕ ಸತ್ಯಾಗ್ರಹಿಗೆ ಸಲ್ಲದು. ಭಾರತದಲ್ಲಿ ಅಹಿಂಸೆಯ ಪರಂಪರೆ ವೈದಿಕಕಾಲಕ್ಕೂ ಆಚೆಗಿನದು. ಶ್ರಮಣ ಸಂಸ್ಕೃತಿಯಲ್ಲಿ ಅಹಿಂಸೆಗೆ ಆದ್ಯಸ್ಥಾನ. ಅದೇ ರೀತಿ ಜೈನ-ಬೌದ್ಧ ಸಂಸ್ಕೃತಿಗಳೂ ಅಹಿಂಸೆಗೆ ಎಲ್ಲಕ್ಕೂ ಹೆಚ್ಚು ಮಹತ್ವ ಕೊಟ್ಟಿವೆ. ನಾವು ಸನಾತನ ಎಂದು ಹೇಳುವ ಹಿಂದೂಧರ್ಮವು ಕೂಡ ಜೈನ-ಬೌದ್ಧ ಸಂಸ್ಕೃತಿಗಳಿಂದ ಅಹಿಂಸೆಯ

ಸೂಕ್ಷ್ಮ ಪಾಠಗಳನ್ನು ಕಲಿತುಕೊಂಡಿದೆ. ನಾವು ಈಗ ಅಹಿಂಸೆಯು ಅರ್ಥದಲ್ಲಿ 'ನಾನ್-ಹ್ವಾಯೆಲನ್ಸ್' ಶಬ್ದವನ್ನು ಉಪಯೋಗಿಸುತ್ತೇವೆ. ಆದರೆ ಆ ಆಂಗ್ಲ ಶಬ್ಧದಿಂದ ಅಹಿಂಸೆಯು ದರ್ಶನ ಆಗದು. ನಾವು 'ಅಹಿಂಸಾ' ಶಬ್ದವನ್ನೇ ಉಪಯೋಗಿಸಬೇಕು. ನಾನೊಮ್ಮೆ ಗಾಂಧಿಯವರ ಮುಂದೆ ಈ ಪ್ರಶ್ನೆಯನ್ನು ಎತ್ತಿದ್ದೆ. ಏಕಾತ್ಮತ್ವದ ಭಾವನೆಗಾಗಿ ನಾವು ಅಹಿಂಸೆಗೆ ಪರ್ಯಾಯವಾಗಿ 'ಲವ್ಹ್' ಶಬ್ದವನ್ನು ಉಪಯೋಗಿಸಬಹುದಲ್ಲವೆ ? ಎಂದು ಕೇಳಿದ್ದೆ. ಅದಕ್ಕೆ ಅವರು ತಟ್ಟನೆ ಕೊಟ್ಟ ಉತ್ತರ : 'ಲವ್ಹ್' ಎಂಬುದಕ್ಕೆ ಯೋಗರೂಢಿಯಿಂದ ಬೇರೆ ಅರ್ಥಗಳು ಹೊಂದಿಕೊಂಡಿವೆ. ನನಗೆ 'ಅಹಿಂಸಾ' ಶಬ್ದವೇ ಇಷ್ಟ'. ಅವರು ಅಂದದ್ದು ಅಕ್ಷರಶಃ ಸತ್ಯ. ಪರಂಪರೆಯಿಂದ, ಮೂರು ಸಾವಿರ ವರಷಗಳ ಸಂಸ್ಕಾರ-ಅಚರಣೆಗಳ ಮೂಲಕ ಅಹಿಂಸೆಗೆ ಬಂದ ಗಾಂಭೀರ್ಯ-ಗೌರವಗಳು ಇತರ ಶಬ್ದಗಳಿಗೆ ಬರುದ ಬಗೆ ಯಾವುದು ?

ಕೇವಲ ಸಾಮಾನ್ಯ ವ್ಯಾವಹಾರಿಕ ಹಾಗೂ ನೈತಿಕ ದೃಷ್ಟಿಯಿಂದ ನೋಡಿದರೂ ಸತ್ಯ-ಅಹಿಂಸೆಯು ಜೋಡು ಅಥವಾ ಯುಗುಲ ಬಹಳ ಮಹತ್ವದೆಂದು ಕಂಡುಬರುವದು. ಯಾವದೇ ಎರಡು ವ್ಯಕ್ತಿಗಳು ಅಥವಾ ಗುಂಪುಗಳು ಸಹಕಾರದಿಂದ ಪರಸ್ಪರ ಲಾಭಕ್ಕಾಗಿ, ಪ್ರಗತಿಗಾಗಿ ಕೂಡಿ ನಡೆಯುಬೇಕಾದರೆ, ಅಥವಾ ಯಾವದಾದರೊಂದು ಕಾರ್ಯವನ್ನು ಸಾಧಿಸಬೇಕಾದರೆ ಆ ಇಬ್ಬರಲ್ಲಿ ಇಲ್ಲವೆ ಗುಂಪುಗಳಲ್ಲಿ ಸತ್ಯ-ಅಹಿಂಸೆಗಳೇ ಸಹಾಯಕ ಉಪಕಾರಕ, ಕಾರ್ಯಸಾಧಕ. ಇಬ್ಬರೂ ಸತ್ಯ-ಅಹಿಂಸೆಗಳಿಂದ ಪ್ರೇರಿತರಾಗಿ ನಡೆಯುುವರೆಂಬ ಭರವಸೆ ಪರಸ್ಪರರಿಗೆ ಇಲ್ಲದಿದ್ದರೆ, ಸಹಕಾರ-ಸಹಯೋಗಗಳು ಅಶಕ್ಯಪ್ರಾಯ. ರಶಿಯಾ-ಅಮೇರಿಕಾ ಇವರಿಬ್ಬರ ನಡುವೆ ಸತ್ಯ-ಅಹಿಂಸೆಗಳ ಪರಸ್ಪರ ವಿಶ್ವಾಸವು ಪೂರಾ ಹಾರಿಹೋಗಿದೆ ! ಅಣವಿಕ ಯುದ್ಧವು ಪ್ರಾರಂಭವಾದರೆ ಮಾನವಕುಲವೇ ಇಲ್ಲದಂತಾಗುವದು. ಈ ಪೃಥ್ವೀ ತಲದ ಮೇಲೆ ಯಾವ ಜೀವಜಂತುಗಳೂ ಸುರಕ್ಷಿತವಾಗಿ ಜೀವಿಸುವುದು ದುಃಸಾಧ್ಯ !

ಬ್ರಹ್ಮಚರ್ಯೆ ಎಂದೊಡನೆ ಈ ವ್ರತವು ಬರೀ ಲೈಂಗಿಕ ಸಂಯಮಕ್ಕೆ ಹಾಗು ಪುರುಷರಿಗೆ ಮಾತ್ರ ಸಂಬಧಿಸಿದ್ದು ಎಂಬ ತಪ್ಪು ತಿಳಿವಳಿಕೆ ಇದೆ. ಅದನ್ನು ಗಾಂಧೀ ಸರಿಪಡಿಸಿದ್ದಾರೆ,

ಬ್ರಹ್ಮಚರ್ಯ ಅಂದರೆ ಬ್ರಹ್ಮದರ್ಶನ–ಬ್ರಹ್ಮಪ್ರಾಪ್ತಿ ಎಂಬ ಆಧ್ಯಾತ್ಮಿಕ ಗುರಿಯನ್ನು ಮುಟ್ಟಲು ಕೈಕೊಂಡ ಮಾರ್ಗ–ಸಾಧನೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಪುರಾತನ ಕಾಲದಲ್ಲಿ ಸ್ತ್ರೀ-ಪುರುಷರಿಬ್ಬರಿಗೂ ಉಪನಯನ ಸಂಸ್ಕಾರದ ಪದ್ಧತಿ ರೂಢಿಯಿತ್ತು ಎಂದು ಮಹರ್ಷಿ ದೈವರಾತರು ಹೇಳುತ್ತಿದ್ದರು. ಉಪನಯನದ ಕಾಲಕ್ಕೆ ಬ್ರಹ್ಮಚರ್ಯದ ವ್ರತವನ್ನು ಸ್ವೀಕರಿಸುವದು ಕ್ರಮ ಪ್ರಾಪ್ತವಾಗಿತ್ತು. ಈ ಮಾತನ್ನು ಹೇಳುವಾಗ ಗೀತೆಯ, 'ಬ್ರಹ್ಮಾರ್ಪಣಂ ಬ್ರಹ್ಮಹವಿಃ ಬ್ರಹ್ಮಾಗ್ನೌ ಬ್ರಹ್ಮಣಾ ಹುತಮ್ । ಬ್ರಹ್ಮೈವ ತೇನ ಗಂತವ್ಯಂ ಬ್ರಹ್ಮಕರ್ಮಸಮಾಧಿನಾ ॥ ಎಂಬ ಶ್ಲೋಕವು ನೆನಪಿಗೆ ಬರುವದು. ಅದುದರಿಂದ ಬ್ರಹ್ಮಚರ್ಯೆಯ ಅರ್ಥವು ಅತ್ಯಂತ ವ್ಯಾಪಕವಿರುವದನ್ನು ಗಾಂಧೀ ಸ್ಪಷ್ಟಪಡಿಸಿದ್ದಾರೆ. ಜೀವನ ಸರ್ವಸ್ವವೂ ಆಧ್ಯಾತ್ಮಿಕ ಧ್ಯೇಯ ಸಾಧನೆಗೆ ಮುಡಿಪಾಗಿರಬೇಕು ಎಂಬುದೇ ಇದರ ಅರ್ಥ.

'ಅಸ್ವಾದ' ವ್ರತ ಅಂದರೆ ಮುಖ್ಯತಃ ನಾಲಿಗೆ ರುಚಿ ಎಂಬುದನ್ನು ಸಂಯಮಿಸಬೇಕು ಎಂದರ್ಥ. ಶಬ್ದ-ರೂಪ–ರಸ-ಗಂಧ–ಸ್ಪರ್ಶ ಎಂಬ ಅನುಭವಗಳನ್ನು ಪಡೆಯಲು, ಕಿವಿ–ಕಣ್ಣು–ನಾಲಿಗೆ-ಮೂಗು-ಮೈ (ತ್ವಚೆ) ಈ ಪಂಚೇಂದ್ರಿಯಗಳನ್ನು ಪ್ರಾಣಿಮಾತ್ರರಿಗೆ ನಿಸರ್ಗವೇ ಕೊಟ್ಟಿದೆ. ಆಯಾ ಇಂದ್ರಿಯಗಳು ಆಯಾ ಪದಾರ್ಥಗಳಲ್ಲಿಯ ರುಚಿ-ರಸಗಳನ್ನು ಅನುಭವಿಸುವವು. ಆದರೆ ಆ ರುಚಿ–ರಸಗಳಿಗೆ ಮಾರುಹೋಗಕೂಡದು. ತನು-ಮನ–ಧನಗಳಿಗೆ ಆರೋಗ್ಯಕರವಾದುದನ್ನು ಮಾತ್ರ ಹಾಗೂ ಅವಶ್ಯಕ ಪ್ರಮಾಣದಲ್ಲಿ ಮಾತ್ರ ಅನುಭೋಗಿಸಬೇಕು. ಅಂದರೆ ಬ್ರಹ್ಮಚರ್ಯ ಪಾಲನೆಗೆ ಅನುಕೂಲವಾಗುವದು, ಆಧ್ಯಾತ್ಮಿಕ-ಮಾರ್ಗಕ್ರಮಣಕ್ಕೆ ಸಹಾಯಕವಾಗುವದು ಎಂದು ಗಾಂಧೀ ಪ್ರತಿಪಾದಿಸಿರುವರು. ಇದು ಅನುಭವಸಿದ್ಧವಾದ ಮಾತು ಎಂದು ಎಲ್ಲರೂ ಹೇಳಬಲ್ಲರು.

'ಅಸ್ತೇಯ' ವ್ರತ ಅಂದರೆ 'ಕಳ್ಳತನ' ಮಾಡದೆ ಇರುವ ವ್ರತ. ಇದಕ್ಕೆ ಗಾಂಧೀ ಬಹಳ ಸೂಕ್ಷ್ಮಾರ್ಥವನ್ನು ಕಲ್ಪಿಸಿದ್ದಾರೆ. ಆದರ ತಾತ್ಪರ್ಯವೇನೆಂದರೆ, ಮಾನವನು ಸ್ವಾರ್ಥವನ್ನು ಬದಿಗಿಟ್ಟು ಪರಾರ್ಥವನ್ನು ಸಾಧಿಸುವುದರಲ್ಲಿಯೇ ನಿಮಗ್ನನಾಗಿರಬೇಕು ಎಂಬುದು. ಪರಾರ್ಥವನ್ನೇ ಧ್ಯೇಯ

ವಾಗಿಟ್ಟುಕೊಂಡು ನಡೆದರೆ ಸ್ವಾರ್ಥವು ತನ್ನಿಂದ ತಾನೇ ಹಿಂಜರಿಯುವದು ಹಾಗೂ ಅಸ್ತೇಯ ವ್ರತಕ್ಕೆ ಸಾಧಕವಾಗುವದು.

'ಅಸಂಗ್ರಹ' ಎಂಬ ವ್ರತವು ಪ್ರತ್ಯೇಕವಾಗಿ ಹೇಳಲ್ಪಡದೇ ಇದ್ದರೂ ಅದು ಅಸ್ತೇಯವ್ರತದ ಅಂಗವೇ ಎಂದು ಹೇಳಬಹುದು. ತನ್ನ ಚರಿತಾರ್ಥಕ್ಕೆ ಹಾಗೂ ತಾನು ಲೋಕಸೇವೆಯನ್ನು ಮಾಡಲು ಸಮರ್ಥನಾಗಲು ಎಷ್ಟು ಬೇಕೋ ಅಷ್ಟನ್ನೇ ಕಾಲಕಾಲಕ್ಕೆ ಪಡೆದು ಉಳಿದುದನ್ನೆಲ್ಲ ಪರಾರ್ಥಕ್ಕಾಗಿಯೇ ಮೀಸಲಿಡುವದು. ಅದನ್ನು ತನಗಾಗಿ ಸಂಗ್ರಹಿಸದೇ ಇರುವದೇ ಅಸಂಗ್ರಹ ಎನಿಸುವದು. ಅಸಂಗ್ರಹ ಶಬ್ದದ ಬದಲು 'ಅಪರಿಗ್ರಹ' ಶಬ್ದವೂ ರೂಢವಿರುವದು. ಗಾಂಧೀ ಅದನ್ನೇ ಉಪಯೋಗಿಸಿರುವರು.

ಅಹಿಂಸೆ, ಸತ್ಯ, ಅಸ್ತೇಯ. ಬ್ರಹ್ಮಚರ್ಯ, ಅಪರಿಗ್ರಹ ಅಥವಾ ಅಸಂಗ್ರಹ ಈ ವ್ರತಗಳು ಪ್ರಸಿದ್ಧ ಜೈನ ತೀರ್ಥಂಕರರೆನಿಸಿದ ಶ್ರೀ ಪಾರ್ಶ್ವನಾಥರ ಕಾಲದಿಂದಲೂ ಪ್ರಚಾರದಲ್ಲಿವೆ. ಶ್ರೀ ಮಹಾವೀರ ತೀರ್ಥಂಕರರಿಗಿಂತ 250 ವರ್ಷ ಮೊದಲು ಶ್ರೀ ಪಾರ್ಶ್ವನಾಥರಿದ್ದರು ಎಂದು ಹೇಳಲಾಗುತ್ತದೆ. ಇದರ ಅರ್ಥ ಏನಂದರೆ ಈ ವ್ರತಗಳು ಕನಿಷ್ಟ 3000 ವರುಷಗಳ ಆಚೆನಿಂದ ಭಾರತದಲ್ಲಿ ಪ್ರಚಲಿತವಿರುವವು. ಆ ಕಾಲದಿಂದ ಈ ವ್ರತಗಳನ್ನು ಆಚರಿಸುವವರು ಈ ದೇಶದಲ್ಲಿದ್ದರು. ಈ ವತ್ರಗಳು ಬರೀ ಗ್ರಂಥಸ್ಥವಿರಲಿಲ್ಲ. ವಿಚಾರ, ಉಚ್ಚಾರ, ಆಚಾರ ಈ ಮೂರೂ ಆಯಾಮುಗಳಲ್ಲಿ ಈ ವ್ರತಗಳಿಗೆ ಶ್ರೇಷ್ಠ ಸ್ಥಾನವಿತ್ತು. ನೈತಿಕ, ಧಾರ್ಮಿಕ. ಆಧ್ಯಾತ್ಮಿಕ ಮಾರ್ಗಗಳಲ್ಲಿ ಮುಂದುವರಿಯಬೇಕಾದರೆ ಈ ವ್ರತಗಳ ಪಾಲನೆ ಅವಶ್ಯ ಎಂದು ಭಾವಿಸಲಾಗಿತ್ತು. ಇವು ಬರೀ ಸಾಧುಸಂತರಿಗೆ ಇಲ್ಲವೆ ಪೀಠಸ್ಥ ಮಠಾಧಿಪತಿಗಳಿಗೆ ಮಾತ್ರ ಸೀಮಿತವಿರಲಿಲ್ಲ. ಮಾನವಮಾತ್ರರು ಆಧ್ಯಾತ್ಮಿಕ ಮಾರ್ಗದಲ್ಲಿ ಪ್ರಗತಿ ಹೊಂದಬೇಕಾದರೆ ಇವುಗಳ ಪರಿಪಾಲನೆ ಅತ್ಯವಶ್ಯ ಎಂಬ ಮನವರಿಕೆ ರೂಢವಾಗಿತ್ತು.

ವ್ರತಗಳು ಆವಶ್ಯವೇ ಎಂಬ ಪ್ರಶ್ನೆಯನ್ನು ಗಾಂಧೀ ಅವರು ಎತ್ತಿ, ಅದಕ್ಕೆ ಸರಿಯಾದ, ಸಮರ್ಪಕವಾದ, ಮನವರಿಕೆ ಆಗುವಂಥ ಉತ್ತರವನ್ನು ತಾವೇ ಕೊಟ್ಟಿದ್ದಾರೆ. ಯಾವದೊಂದು ವ್ರತವನ್ನು ಕೈಕೊಳ್ಳಬೇಕೆಂಬ ನಿರ್ಧಾರಕ್ಕೆ ಮನುಷ್ಯನು ಬಂದರೆ ಅದನ್ನು ಕಾಯಾವಾಚಾಮನಸಾ ಪಾಲಿಸು

ದೃಢಭಾವ ಉಂಟಾಗಬೇಕಾದರೆ ಆಯಾ ವ್ರತವನ್ನು ಜಾಹೀರ ರೀತಿಯಿಂದ ಕೈಗೊಳ್ಳುವದು ಅವಶ್ಯ ಎಂದು ಗಾಂಧೀ ಪ್ರತಿಪಾದಿಸಿದ್ದಾರೆ. ಸ್ವಭಾವತಃ ಮಾನವನ ಮನಸ್ಸು ಚಂಚಲ, ಅತ್ತಿತ್ತ ಹೊಯ್ದಾಡುವದು ಅದರದೊಂದು ದುರ್ಗುಣವೇ ಎಂದು ಹೇಳಬಹುದು. ಅದನ್ನು ವ್ರತವೆಂಬ ಬಂಧನದಿಂದ ಕಟ್ಟದಿದ್ದರೆ ಅದು ತನ್ನ ಸ್ವಭಾವಕ್ಕನುಸರಿಸಿ ಮಂಗನಂತೆ ಮರದಿಂದ ಮರಕ್ಕೆ ಹಾರಾಡುತ್ತ ಹೋಗುವದು. ತಮ್ಮ ಸ್ವಂತ ಅನುಭವದಿಂದಲೇ ಈ ಮಾತನ್ನು ಗಾಂಧೀ ಪ್ರತಿಪಾದಿಸಿದ್ದಾರೆ. ಅವರ ಆತ್ಮಚರಿತ್ರೆಯಲ್ಲಿ ಈ ವಿಷಯ ಸ್ಪಷ್ಟವಾಗಿ ಎದ್ದು ಕಾಣುವದು.

'ನವನವೋನ್ಮೇಷಶಾಲಿನಿ ಪ್ರತಿಭಾ' ಎಂದು ಕವಿಗಳ ಕಾವ್ಯ ಪ್ರತಿಭೆಯನ್ನು ವರ್ಣಿಸುವ ರೂಢಿ ಇದೆ. ನಿತ್ಯವೂ ಹೊಸ ಹೊಸದನ್ನು ಕಂಡು ಅದನ್ನು ಸುಂದರವಾದ ಭಾಷೆಯಲ್ಲಿ ಬಣ್ಣಿಸುವುದು ಕವಿಗಳ ವೈಶಿಷ್ಟ್ಯ. ಪರಂಪರಾಗತವಾಗಿ ಭಾರತೀಯ ಸಂಸ್ಕೃತಿಯ ಪ್ರವಾಹದೊಡನೆ ಹರಿಯುತ್ತ ಬಂದ ವ್ರತಗಳಂತೂ ಸರಿಯೆ, ಆದರೆ ಗಾಂಧೀ ಮಾನವಮಾತ್ರರ ಪ್ರಾಪಂಚಿಕ, ವ್ಯವಹಾರಿಕ, ಆರ್ಥಿಕ, ಸಾಮಾಜಿಕ, ಧಾರ್ಮಿಕ, ರಾಜಕೀಯ ಮುಂತಾದ ಎಲ್ಲ ವಿಷಯಗಳಲ್ಲಿಯೂ ಸತ್ಯ-ಅಹಿಂಸಾತತ್ವಗಳ ಆಧಾರದಿಂದಲೇ ಎಲ್ಲರೂ ನಡೆಯಬೇಕೆಂದು ಹಟ ತೊಟ್ಟವರು. ಆದುದರಿಂದ ಆ ರೀತಿ ಎಲ್ಲವೂ, ಎಲ್ಲರೂ ನಡೆಯಬೇಕಾದರೆ, ಯಾವ ವ್ರತಗಳು ಆವಶ್ಯಕವೋ ಅವುಗಳನ್ನು ಶೋಧಿಸಿ ಅವನ್ನು ರೂಢಿಯಲ್ಲಿ ತಂದರು. ಇದು ಅವರ ಪ್ರತಿಭಾಶಕ್ತಿಯ ಪ್ರಭಾವ.

ಭಾರತವು ಶತಕಾನುಶತಕಗಳಿಂದ ಬಗೆಬಗೆಯ ಪಾರತಂತ್ರ್ಯಗಳಲ್ಲಿ ಕೊಳೆಯುತ್ತಿತ್ತು. ಬ್ರಿಟಿಷರು ತಮ್ಮ 150 ವರುಷಗಳ ಆಡಳಿತದಿಂದ ಭಾರತೀಯರ ಸತ್ವವನ್ನೇ ಹೀರಿದ್ದರೆನ್ನಬಹುದು. ಯಾಕೆಂದರೆ, ಇಲ್ಲಿಯ ಸಂಸ್ಕೃತಿಯನ್ನು ಅಳಿಸಿ ಪಾಶ್ಚಾತ್ಯ ಸಂಸ್ಕೃತಿಯನ್ನೇ ಇಲ್ಲಿಯ ಜನರ ಮೇಲೆ ಅವರು ಹೇರುವದರಲ್ಲಿ ತಕ್ಕಮಟ್ಟಿಗೆ ಮುಂದರಿದಿದ್ದರು. ಅದಕ್ಕಾಗಿ ಗಾಂಧೀ ತಮ್ಮದೇ ರೀತಿಯಲ್ಲಿ ಸತ್ಯಾಗ್ರಹ ಮಾರ್ಗದಿಂದ ಸ್ವಾತಂತ್ರ್ಯ ದೊರಕಿಸುವ ಮಾರ್ಗವನ್ನು 1920ರಿಂದ ರೂಢಿಸಿದರು. ಭಾರತವು ತನ್ನದೇ ಆದ ಸ್ವಭಾವ ಸ್ವಧರ್ಮಕ್ಕನುಸರಿಸುತ್ತ ಮುಂದುವರಿಯಬೇಕೆಂಬುದೇ ಅವರ

ಆಗ್ರಹ. ಆದುದರಿಂದ ಅವರು ಪೂರ್ವ ಪರಂಪರೆಗೆ ಸಲ್ಲದ ಐದು ವ್ರತಗಳಿಗೆ ಅಂದರೆ ಅಹಿಂಸೆ-ಸತ್ಯ–ಅಸ್ತೇಯ-ಬ್ರಹ್ಮಚರ್ಯ-ಅಪರಿಗ್ರಹ ಇವುಗಳೊಡನೆ ಆರು ಹೊಸ ವ್ರತಗಳನ್ನು ಜೋಡಿಸಿದರು. ಹೀಗೆ ಒಟ್ಟಿಗೆ ಹನ್ನೊಂದು ವ್ರತಗಳು. ಆ ಆರು ವ್ರತಗಳು ಯಾವವೆಂದರೆ, ಅಭಯ, ಶರೀರಶ್ರಮ, ಸ್ಪರ್ಶಭಾವನೆ ಅಥವಾ ಅಸ್ಪೃಶ್ಯತಾ ನಿವಾರಣೆ, ಸರ್ವಧರ್ಮ ಸಮಭಾವ, ಸ್ವದೇಶೀ ಮತ್ತು ಅಸ್ವಾದ.

ಅಸ್ವಾದ ; ಯಾವುದೇ ಇಂದ್ರಿಯದ ರಸರುಚಿಗಳಿಗೆ ಮಾರುಹೋಗದೆ, ಶರೀರ ಮನಭಾವಗಳ ಆರೋಗ್ಯಕ್ಕೆ ಎಷ್ಟು ಬೇಕೋ ಅಷ್ಟೇ ಸೇವಿಸುವುದೇ ಅಸ್ವಾದವ್ರತ ಎನಿಸುವದು. ಇದು ವಿಶೇಷತಃ ಬ್ರಹ್ಮಚರ್ಯೆಯ ಪಾಲನೆಗೆ ಉಪಕಾರಕ ಎಂದು ಮೇಲೆ ಹೇಳಲಾಗಿದೆ.

ಇನ್ನು ಅಭಯ ಎಂಬ ವ್ರತವು ಬಹಳ ಮಹತ್ವದ್ದು. ಒಂದು ರೀತಿ ನೋಡಿದರೆ ಅಭಯ ಎಂಬುದು ನಮ್ಮ ಆತ್ಮನ ಅಮರತ್ವದಲ್ಲಿಯ ಶ್ರದ್ಧೆಯ ಪರೀಕ್ಷೆಯೆ ಸರಿ. ನಾನು ಎಂಬುದು ದೇಹವಲ್ಲ, ಪ್ರಾಣವಲ್ಲ, ಮನಸ್ಸಲ್ಲ ; ಆದರೆ ಅಮರ ಆತ್ಮವೇ ನಾನು, ಎಂಬ ಶ್ರದ್ಧೆ ಉಳ್ಳವನಿಗೆ ಭಯ ಎಂಬ ಸುಂಕ ತಟ್ಟದು. ಧನ–ಧಾನ್ಯ, ದೇಹ-ಪ್ರಾಣ-ಮನ ಇವುಗಳ ಮೇಲೆ ಯಾವ ಅನುವು-ಆಪತ್ತುಗಳು ಬಂದೊದಗಿದರೂ ಆತ್ಮನ ಅಮರತ್ವದಲ್ಲಿ ವಿಶ್ವಾಸವಿದ್ದವನು ಎಂದೆಂದಿಗೂ ಭಯಪಡಲಾರ. ತನ್ನ ಧರ್ಮವನ್ನೇ ಆಚರಿಸುತ್ತ ಅವನು ಮುಂದೆ ಸಾಗುವನು. ಒಂದು ರೀತಿ ನೋಡಿದರೆ ಅಭಯ ಎಂಬುದು ನಮ್ಮ ಆಧ್ಯಾತ್ಮಿಕತೆಯ ಪರೀಕ್ಷೆ ಎನ್ನಬಹುದು.

ಶರೀರ ಶ್ರಮಕ್ಕೆ ಒಂದು ವ್ರತದ ಸ್ಥಾನವನ್ನು ಗಾಂಧೀ ಅವರು ಕಲ್ಪಿಸಿದರು. ಭಾರತೀಯರ ಸಾಮಾನ್ಯ ಮನಃಸ್ಥಿತಿಯನ್ನು ಪರೀಕ್ಷಿಸಿಯೇ ಅವರು ಹೀಗೆ ಮಾಡಿದರು. ಅದಕ್ಕೆ ಅವರು 'ಬ್ರೆಡ್ ಲೇಬರ್' ಅಂದರೆ ಹೊಟ್ಟೆ ಪಾಡಿಗಾಗಿ ಮಾಡುವ ಶ್ರಮ ಎಂಬ ಪರ್ಯಾಯವಾಚಕ ಶಬ್ದವನ್ನು ಉಪಯೋಗಿಸಿದ್ದಾರೆ. ಭಾರತೀಯರು ಸಾಮಾನ್ಯವಾಗಿ ಸೋಮಾರಿಗಳು. ಅಲ್ಲದೆ ಕೈ ಕಾಲು–ಮೈ ಅಲ್ಲಾಡಿಸಿ ದುಡಿಯುವದು ಕೀಳು ಎಂಬ ಒಂದು ತಪ್ಪು ಭಾವನೆ ನಮ್ಮವರಲ್ಲಿ ಮನೆ ಮಾಡಿದೆ. ಇಷ್ಟೇ ಅಲ್ಲ ಶರೀರಶ್ರಮ ಅವಶ್ಯವಿದ್ದ ಕೆಲಸಗಳೆಲ್ಲ ಕೀಳು, ಕಡಿಮೆ ತರಹದ್ದು ಎಂಬ ಭಾವನೆ ಪ್ರಚ

ಲಿತವಿದೆ. ಅದರಲ್ಲಿಯೂ ಸ್ವಚ್ಛತೆ, ಮಲ ಮೂತ್ರಾದಿಗಳನ್ನು ಬಳಿಯು ವದು, ಈ ಕೆಲಸಗಳನ್ನು ಮಾಡುವವರು ಜನ್ಮತಃ ಹೀನರು, ಅಸ್ಪೃಶ್ಯರು ಎಂಬ ಭಾವನೆ ಒಡಮೂಡಿದೆ. ಈ ಅಪಧ್ಧ ಭಾವನೆಗಳನ್ನು ರೂಢಿ ರೀತಿ ಗಳನ್ನು ಅಲ್ಲಗೆಳೆಯಲು ಗಾಂಧೀ ಅವರು ಸ್ವತಃ ಈ ಹೀನ ಎನಿಸಿರುವ ಕೆಲಸ ಗಳನ್ನು ಮಾಡುತ್ತಿದ್ದರು. ಇಷ್ಟೇ ಅಲ್ಲ. ಮಾನವ ಮಾತ್ರರು, ಅವರು ಯಾವದೇ ಕೆಲಸ ಕಾರ್ಯಗಳನ್ನು ಮಾಡುತಿರಲಿ ಅವರು ಜನ್ಮತಃ ಅಸ್ಪೃಶ್ಯರು ಎನಿಸಲಾರರು. ಆಯಾ ಕೆಲಸಗಳನ್ನು ಮಾಡಿದ ಬಳಿಕ ಸ್ವಚ್ಛತೆಗಾಗಿ, ಆರೋಗ್ಯಕ್ಕಾಗಿ ಸ್ನಾನಾದಿಗಳನ್ನು ಮಾಡಿ ಅವರು ಎಲ್ಲರಲ್ಲಿಯೂ ಬೆರೆತು ಪ್ರಪಂಚವನ್ನು ಸಾಗಿಸಲು ಅರ್ಹರು. ಮಾನವ ಮಾತ್ರರನ್ನು ಆ ರೀತಿ ಸ್ಪೃಶ್ಯರು ಎಂಬ ಭಾವನೆಯಿಂದ ಅವರೊಡನೆ ವರ್ತಿಸುವುದೇ ಸ್ಪೃಶ್ಯಭಾವನೆ ಅಥವಾ ಅಸ್ಪೃಶ್ಯತಾ ನಿವಾರಣೆ ಎನಿಸುವದು. ಮಾನವನು ಶರೀರತಃ ಶ್ರಮ ಮಾಡುವುದು ಅವನ ಆರೋಗ್ಯಕ್ಕೆ ಸಹ ಅವಶ್ಯಕ. ಆದ್ದುದರಿಂದ ಒಂದೆಡೆ ಕುಳಿತು ಬುದ್ಧಿಯ ಕೆಲಸ ಮಾಡುವದು ಎಷ್ಟು ಮಹತ್ವದ್ದೋ ಅಷ್ಟೇ ಕೈಯಲ್ಲಿ ಕಸಬರಿಗೆ ಹಿಡಿದುಕೊಂಡು ಕಸ ಬಳಿಯುವುದು ಮಹತ್ವದ್ದು. ಮಾನವ ಸಮಾಜ ಎಂಬುದು ಸಹಕಾರ–ಸಹಯೋಗಗಳ ಮೂಲಕ ಸುಸೂತ್ರವಾಗಿ ಜೀವಿಸಿ ವಿಕಾಸಗೊಳ್ಳಲು ಯಾವ ಯಾವ ಕೆಲಸ ಕಾರ್ಯಗಳು ಅವಶ್ಯವೋ ಅವೆಲ್ಲವೂ ಪವಿತ್ರ ಕರ್ತವ್ಯಗಳೇ, ಧರ್ಮ ಜೀವನಕ್ಕೆ ಉಪಕಾರವೇ ಸರಿ.

ಸರ್ವ ಧರ್ಮ ಸಮಭಾವನೆಯನ್ನು ಕುರಿತು ಗಾಂಧೀ ಅವರು ಹೇಳಿದ ಅನುಭವಗಳು ಬಹಳ ಮನದಟ್ಟಾಗುವಂಥವು. ಒಬ್ಬೊಬ್ಬರೂ ತಮ್ಮ ಧರ್ಮಕ್ಕೆ ಅಂಟಿಕೊಂಡಿದ್ದರೂ ಬೇರೆಬೇರೆ ಧರ್ಮದವರು ಒಂದೇ ಮನೆಯಲ್ಲಿ, ಊರಲ್ಲಿ, ದೇಶದಲ್ಲಿ ಪರಸ್ಪರ ಸಹಕಾರದಿಂದ ಬಾಳಿ ಬೆಳೆಯಬೇಕಾದರೆ ಸರ್ವಧರ್ಮಸಮ ಭಾವ ಎಂಬ ವ್ರತವು ಅವಶ್ಯ. ಗಾಂಧೀ ಧರ್ಮಾಂತರಕ್ಕೆ ವಿರುದ್ಧ ಇದ್ದರು ; ಇಷ್ಟೇ ಅಲ್ಲ, ಅದೊಂದು ಬಗೆಯ ಧರ್ಮಾಂಧತೆ ; ಧರ್ಮ ಕ್ಷೇತ್ರದಲ್ಲಿ ಸಾಮ್ರಾಜ್ಯವನ್ನು ಸ್ಥಾಪಿಸಿಸಬೇಕೆಂಬ ಲವಲವಿಕೆ ಅದು, ಎಂಬ ಅಭಿ ಪ್ರಾಯ ಅವರದು. ಅಂಥ ಉಚ್ಚ-ನೀಚ ಎಂಬ ಭಾವನೆಗಳಿಗೆ ಧರ್ಮ ವಿಷಯಗಳಲ್ಲಿ ಎಡೆ ಇರಕೂಡದು. ಮೇಲಾಗಿ ಇತರರ ಧರ್ಮಗಳನ್ನು ತಿಳಿದು

ಕೊಳ್ಳುವ ಲವಲವಿಕೆಯೂ ನಮ್ಮಲ್ಲಿರಬೇಕೆಂದು ಗಾಂಧೀ ಭಾವಿಸಿದ್ದರು. ಈ ಎಲ್ಲ ಮಾತುಗಳು ಸಾಧಿಸಬೇಕಿದ್ದರೆ ಸರ್ವ ಧರ್ಮ ಸಮಭಾವ ವ್ರತವು ಅತ್ಯಾವಶ್ಯಕ. ಅನೇಕ ಧರ್ಮದವರು ನಾಗರಿಕರೆನಿಸಿ ಈ ಭಾರತದಲ್ಲಿ ಬಂಧು ಭಾವದಿಂದ, ಸಹಜೀವನವನ್ನು ನಡೆಸಬೇಕಾದ ಪಕ್ಷದಲ್ಲಿ ಈ ವ್ರತ ಒಂದು ಮಹಾ ಮಂತ್ರದಷ್ಟು ಉಪಯುಕ್ತ.

ಸ್ವದೇಶಿವ್ರತ ಎಂಬುದು ಮಾನವನ ಆರ್ಥಿಕ ಜೀವನಕ್ಕೆ ಅವಶ್ಯಕ ಎಂದು ಗಾಂಧೀ ಅಭಿಪ್ರಾಯಪಟ್ಟಿದ್ದರು. ಆದರೆ ಆ ವ್ರತದ ಅರ್ಥವನ್ನು ವಿಂಗಡಿಸಿ ಹೇಳುವಾಗ ಅವರು ಅದನ್ನು ನೆರೆಹೊರೆಯವರೊಡನೆ ಆರ್ಥಿಕ ವ್ಯವಹಾರವನ್ನು ಯಾವ ರೀತಿ ಪೂರೈಸಬೇಕು ಎಂಬುದನ್ನು ಸ್ಪಷ್ಟಪಡಿಸುತ್ತಿದ್ದರು. ಆರ್ಥಿಕ ಜೀವನದಲ್ಲಿ ನೆರೆಹೊರೆಯವರೊಡನೆ ಸಹಕಾರ–ಸಹಯೋಗ ಯಾವ ಬಗೆಯಲ್ಲಿ ಇರುವದು ಇಷ್ಟ ಎಂಬುದನ್ನು ಅವರು ವಿವರಿಸಿರುವರು.

ಈ ಎಲ್ಲ ವ್ರತಗಳ ಬಗ್ಗೆ ವಿಚಾರ ಮಾಡುವಾಗ ವ್ರತ ಎಂಬುದು ಮಾನವನ ಪ್ರಗತಿಗೆ, ಅವನ ಉತ್ಕ್ರಾಂತಿ–ಉನ್ನತಿಗಳಿಗೆ ಅವಶ್ಯಕವಾದ ಸಾಧನೆ ಎಂಬುದನ್ನು ನಾವು ಲಕ್ಷಿಸುವದು ಅವಶ್ಯ. ಬರೀ ಗಿಳಿಪಾಠದಂತೆ ಅವುಗಳ ಉಚ್ಚಾರದಿಂದ ಯಾವ ಲಾಭವೂ ಆಗದು. ಈ ವ್ರತಗಳೊಡನೆ ನಾವು ಆ ಬಗೆಯ ಆಟವನ್ನು ಹೂಡಿದರೆ ನಾವು ಡಾಂಭಿಕ ಶಿರೋಮಣಿಗಳು ಎಂಬ ಬಿರುದಿಗೆ ಮಾತ್ರ ಪಾತ್ರರಾಗುವೆವು. ಪ್ರತಿಯೊಂದು ವ್ರತದ ಆಳವನ್ನೂ ತಿಳಿದು ಅದನ್ನು ಕಾಯಾವಾಚಾಮನಸಾ ನಾವು ಹೇಗೆ ಪಾಲಿಸಬಲ್ಲೆವು ಎಂಬುದನ್ನು ಧ್ಯಾನಪೂರ್ವಕವಾಗಿ ನಿರ್ಣಯಿಸಿ ಅದರಂತೆ ವರ್ತಿಸುತ್ತ ಹೋಗುವುದಲ್ಲಿಯೇ ಅವುಗಳ ಸಾರ್ಥಕ್ಯ, ವ್ರತಿಯ ಸಾರ್ಥಕ, ಹಾಗೂ ಮಾನವರ ಜೀವನದ ಸಾರ್ಥಕ್ಯ ಅಳವಟ್ಟಿದೆ.

ಈ ವಿಷಯದ ಮಹತ್ವವನ್ನು ಚನ್ನಾಗಿ ಅರಿತುಕೊಂಡು ಸರ್ವೋದಯ ಸಂಘದವರು ಇವುಗಳನ್ನು ಪುನರ್ಮುದ್ರಿಸುವ ಸಾಹಸವನ್ನು ಕೈಕೊಂಡದ್ದು ಅಭಿನಂದನೀಯವು. ಕರ್ನಾಟಕಸ್ಥರು ಈ ಪ್ರಯತ್ನವನ್ನು ಸ್ವಾಗತಿಸಿ ಇದರ ಪೂರ್ಣ ಲಾಭವನ್ನು ಪಡೆಯಲು ಮುಂದಾದರೆ ಅದು ಎಲ್ಲರಿಗೂ ಶ್ರೇಯಸ್ಕರ.

ಮದುರಾ
4–2–1985

ರಂಗನಾಥ ದಿವಾಕರ

1. ಸತ್ಯ

ಬೆಳಗಿನ ಪ್ರಾರ್ಥನೆಯಾದ ಮೇಲೆ
೨೨-೭-೧೯೩೦

ನಮ್ಮ ಸಂಸ್ಥೆಯ ಮೂಲವೇ ಸತ್ಯದ ಆಗ್ರಹ. ಆದುದರಿಂದ ಸತ್ಯ-ವನ್ನೇ ಮೊದಲು ತೆಗೆದುಕೊಳ್ಳುತ್ತೇನೆ.

'ಸತ್ಯ' ಎಂಬ ಶಬ್ದ ಸತ್‌ನಿಂದ ಹುಟ್ಟಿದೆ. ಸತ್ ಎಂದರೆ ಇರುವುದು ಸತ್ಯ ಎಂದರೆ ಇರುವಿಕೆ. ಸತ್ಯವಲ್ಲದೆ ಮತ್ತಾವುದೂ ಇಲ್ಲವೇ ಇಲ್ಲ. ಆದುದರಿಂದಲೇ ಪರಮೇಶ್ವರನ ನಿಜವಾದ ಹೆಸರು ಸತ್ ಅಥವಾ ಸತ್ಯ. ಈ ಕಾರಣದಿಂದ, ಪರಮೇಶ್ವರ ಸತ್ಯ ಎನುವುದಕ್ಕಿಂತ ಸತ್ಯವೇ ಪರಮೇಶ್ವರ ಎಂಬುದೇ ಹೆಚ್ಚು ಉಪಯುಕ್ತ. ರಾಜರಿಲ್ಲದೆ ದಳಪತಿಗಳಿಲ್ಲದೆ ನಮ್ಮ ವ್ಯವಹಾರ ನಡೆಯದು. ಇದರಿಂದ ಪರಮೇಶ್ವರ ಎಂಬ ಹೆಸರು ಹೆಚ್ಚು ರೂಢಿಯಾಗಿ ಬಿಟ್ಟಿದೆ. ಮುಂದೆಯೂ ಹೆಚ್ಚು ರೂಢಿಯಲ್ಲಿದ್ದೀತು. ಆದರೆ ವಿಚಾರಮಾಡಿ ನೋಡಿದರೆ 'ಸತ್' ಎಂಬುದೇ ಅಥವಾ 'ಸತ್ಯ'ವೇ ನಿಜವಾದ ಹೆಸರು, ಅದೇ ಪೂರ್ಣ ಅರ್ಥವನ್ನು ಕೊಡುತ್ತದೆ ಎಂಬುದು ತಿಳಿಯುತ್ತದೆ.

ಇನ್ನು, ಸತ್ಯವಿದ್ದಲ್ಲಿ ಜ್ಞಾನ-ಶುದ್ಧ ಜ್ಞಾನ–ಇದ್ದೇ ಇದೆ. ಸತ್ಯವಿಲ್ಲದಲ್ಲಿ ಶುದ್ಧ ಜ್ಞಾನ ಸಂಭವವೇ ಅಲ್ಲ. ಆದುದರಿಂದಲೇ ಈಶ್ವರನ ಹೆಸರಿನ ಜೊತೆಗೆ 'ಚಿತ್' ಅಥವಾ ಜ್ಞಾನಶಬ್ದವನ್ನು ಜೋಡಿಸಿದೆ. ಸತ್ಯಜ್ಞಾನವಿದ್ದಲ್ಲಿ ಆನಂದವಿದ್ದೇ ಇರುತ್ತದೆ ಯಾವಾಗಲೂ. ಅಲ್ಲಿ ಶೋಕ ಇರಲೇ ಅರದು. ಅಲ್ಲದೆ, ಸತ್ಯ ಶಾಶ್ವತವಾದುದರಿಂದ ಆನಂದವೂ ಶಾಶ್ವತವೇ. ಈ ಕಾರಣದಿಂದಲೇ ನಾವು ಈಶ್ವರನನ್ನು ಸಚ್ಚಿದಾನಂದ ಎಂಬ ಹೆಸರಿನಿಂದ ಅರಿತುಕೊಂಡಿದ್ದೇವೆ.

ಈ ಸತ್ಯದ ಆರಾಧನೆಗಾಗಿಯೇ ನಮ್ಮ ಅಸ್ತಿತ್ವ. ನಮ್ಮ ಪ್ರವೃತ್ತಿ ಪ್ರತಿಯೊಂದು ಆರಾಧನೆಗಾಗಿಯೇ ಆಗಬೇಕು. ನಾವು ಬಿಡುವ-ತೆಗೆದುಕೊಳ್ಳುವ ಉಸಿರು ಪ್ರತಿಯೊಂದೂ ಅದಕ್ಕೇ ಆಗಬೇಕು. ಹೀಗೆ ಮಾಡಲು ಕಲಿತರೆ, ಉಳಿದೆಲ್ಲ ನಿಯಮಗಳೂ ತಾವಾಗಿಯೇ ಪ್ರಯತ್ನವಿಲ್ಲದೆಯೆ ಕೈ

ಗೂಡುತ್ತವೆವುಗಳ ಪಾಲ. ಆನೆಯೂ ಸುಲಭವಾಗಿರುತ್ತದೆ. ಸತ್ಯದ ವಿನಾ ಜೀವನನಿಯಮ ಯಾವುದನ್ನೂ ಸರಿಯಾಗಿ ಪಾಲಿಸಲಾಗುವುದಿಲ್ಲ.

ಸಾಧಾರಣವಾಗಿ ಸತ್ಯವೆಂದರೆ 'ನಿಜವನ್ನು ಹೇಳುವುದು' ಎಂದು ಮಾತ್ರ ತಿಳಿಯುತ್ತಾರೆ. ಆದರೆ ನಾವು ಸತ್ಯ ಶಬ್ದವನ್ನು ವ್ಯಾಪಕಾರ್ಥದಲ್ಲಿ ಪ್ರಯೋಗಿಸುತ್ತೇವೆ. ವಿಚಾರದಲ್ಲಿ, ವಾಣಿಯಲ್ಲಿ, ಆಚಾರದಲ್ಲಿ, ಸತ್ಯವೇ ಇರಬೇಕು. ಈ ಸತ್ಯವನ್ನು ಸಂಪೂರ್ಣವಾಗಿ ಅರಿತವನಿಗೆ ಈ ಲೋಕದಲ್ಲಿ ಅರಿತುಕೊಳ್ಳಬೇಕಾದುದು ಇನ್ನೇನೂ ಇಲ್ಲ. ಸತ್ಯದಲ್ಲಿ ಸಂಪೂರ್ಣ ಜ್ಞಾನ ಸಮಾವೇಶವಾಗಿದೆ. ಅದರಲ್ಲಿ ಸಮಾವೇಶವಾಗದುದು ಸತ್ಯವೂ ಅಲ್ಲ, ಜ್ಞಾನವೂ ಅಲ್ಲ. ಅಂಥದರಿಂದ ನಿಜವಾದ ಆನಂದ ಸಿಕ್ಕಿತಾದರೂ ಹೇಗೆ? ಎಂದಿಗೂ ತಪ್ಪದ ಈ ಒರೆಗಲ್ಲಿಗೆ ಉಜ್ಜಿ ನೋಡುವುದನ್ನು ಕಲಿತರೆ-ಯಾವುದು ಮಾಡಲು ಯೋಗ್ಯ, ಯಾವುದಲ್ಲ, ಯಾವುದು ಓದಲು ಯೋಗ್ಯವಲ್ಲ ಎಂಬುದು ಒಡನೆಯೆ ತಿಳಿಯುತ್ತದೆ.

ಆದರೆ ಪರುಸಗಲ್ಲಿನ ಹಾಗಿರುವ, ಕಾಮಧೇನುವಿನಂಥ ಈ ಸತ್ಯ ಲಭಿಸುವುದು ಹೇಗೆ? ಇದಕ್ಕೆ ಉತ್ತರವನ್ನು ಭಗವಂತ ಕೊಟ್ಟಿದ್ದಾನೆ 'ಅಭ್ಯಾಸ-ವೈರಾಗ್ಯಗಳಿಂದ'. ಸತ್ಯಕ್ಕಾಗಿ ಅನನ್ಯಶ್ರದ್ಧೆಯೇ ಅಭ್ಯಾಸ. ಸತ್ಯದ ಹೊರತು ಉಳಿದೆಲ್ಲ ವಸ್ತುಗಳಲ್ಲಿಯೂ ಆತ್ಯಂತಿಕ ಔದಾಸೀನ್ಯವೇ ವೈರಾಗ್ಯ. ಇಷ್ಟಿದ್ದರೂ ಒಬ್ಬನಿಗೆ ಸತ್ಯವಾದುದು ಇನ್ನೊಬ್ಬನಿಗೆ ಅಸತ್ಯವಾಗುವುದನ್ನು ನಾವು ಕಂಡಿದ್ದೇವೆ. ಅದರಿಂದ ಸಾಧಕ ಗಾಬರಿಗೊಳ್ಳಬೇಕಾಗಿಲ್ಲ. ಪ್ರಯತ್ನ ಶುದ್ಧವಾಗಿದ್ದರೆ, ಭಿನ್ನ ಭಿನ್ನವೆಂದು ಕಾಣಬರುವ ಸತ್ಯ ಎಲ್ಲವೂ ಒಂದೇ ಮರದ ಬೇರೆ ಬೇರೆಯಾಗಿ ಕಾಣುವ, ಆ ಲೆಕ್ಕವಿಲ್ಲದ ಎಲೆಗಳ ಹಾಗೆ ಎಂಬುದು ತಿಳಿದುಬರುತ್ತದೆ. ಪರಮೇಶ್ವರನೇ ಬೇರೆ ಬೇರೆ ವ್ಯಕ್ತಿಗಳಿಗೆ ಬೇರೆಬೇರೆಯಾಗಿ ಕಾಣಬಾರನೆ? ಆದರೂ ಪರಮೇಶ್ವರ ಒಬ್ಬನೇ ಎಂದು ನಮಗೆ ಗೊತ್ತಿದೆ. ಸತ್ಯವೆಂಬುದೇ ಪರಮೇಶ್ವರನ ಹೆಸರು. ಆದುದರಿಂದ ಪ್ರತಿಯೊಬ್ಬನೂ ತನಗೆ ಸತ್ಯ ಎಂದು ಏನು ತಿಳಿಯಿತೋ ಅದರಂತೆ ನಡೆದುಕೊಂಡರಾಯಿತು. ಅದರಲ್ಲಿ ಏನೂ ದೋಷವಿಲ್ಲ. ಅಷ್ಟೇ ಅಲ್ಲ, ಹಾಗೆ ನಡೆದುಕೊಳ್ಳಬೇಕಾದುದೇ ಕರ್ತವ್ಯ. ಹಾಗೆ ಸತ್ಯವನ್ನು ಅನುಸರಿಸುವಾಗ ಪ್ರಮಾದವಾದರೂ ಅದು ಸರಿಹೋಗುತ್ತದೆ. ಏಕೆಂದರೆ, ಸತ್ಯ

ಶೋಧನೆಯ ಜೊತೆಯಲ್ಲಿ ತಪಸ್ಸು ಇದ್ದೇ ಇದೆ. ಸ್ವಯಂ ದುಃಖವನ್ನು ಸೈರಿಸಬೇಕಾಗುತ್ತದೆ. ಅದಕ್ಕಾಗಿ ಪ್ರಾಣ ಕೊಡಲೂ ಬೇಕಾಗುತ್ತದೆ. ಆದುದರಿಂದ ಅದರಲ್ಲಿ ಸ್ವಾರ್ಥದ ಗಂಧ ಕೂಡ ಇರದು. ಇಂಥ ನಿಸ್ವಾರ್ಥ ಶೋಧನೆಯನ್ನು ಮಾಡುತ್ತ ಇಂದಿಗೂ ಯಾರೂ ಕಟ್ಟಕಡೆಯವರೆಗೂ ತಪ್ಪು ದಾರಿಯಲ್ಲಿ ಹೋದುದಿಲ್ಲ. ಸ್ವಲ್ಪ ತಪ್ಪು ದಾರಿ ತುಳಿದೊಡನೆಯೆ ಪೆಟ್ಟು ತಿಂದು, ನೇರವಾದ ದಾರಿಗೆ ಬಂದು ಸೇರುತ್ತಾನೆ. ಆದುದರಿಂದ ಸತ್ಯದ ಆರಾಧನೆ ನಿಜವಾದ ಭಕ್ತಿ. ಅದು ಹರಿಯ ದಾರಿ. ಅದರಲ್ಲಿ ಹೇಡಿತನಕ್ಕೆ ಸ್ಥಾನವಿಲ್ಲ, ಸೋಲೆಂಬುದಿಲ್ಲ. ಸಾವನ್ನು ಬದುಕಾಗಿ ಮಾಡುವ, ಮೃತ್ಯುವನ್ನು ಅಮೃತದ ಹೊಸ್ತಿಲಾಗಿಸುವ ಮಂತ್ರ ಅದು.

ಈಗ ನಾವು ಅಹಿಂಸೆಗೆ ತೀರಾ ಹತ್ತಿರ ಬಂದ ಹಾಗಾಯಿತು. ಅದನ್ನು ಮುಂದಿನವಾರ ವಿಚಾರ ಮಾಡೋಣ.

ಈ ಸಂದರ್ಭದಲ್ಲಿ ಹರಿಶ್ಚಂದ್ರ, ಪ್ರಹ್ಲಾದ, ರಾಮಚಂದ್ರ, ಇಮಾಂಹಸನ್, ಇಮಾಂ ಹುಸೇನ್ ಮುಂತಾದವರ ದೃಷ್ಟಾಂತ ವಿಚಾರ ಯೋಗ್ಯ. ಹುಡುಗರು-ಮುದುಕರು, ಗಂಡಸರು-ಹೆಂಗಸರು ನಾವೆಲ್ಲರೂ ಕುಳಿತಾಗ, ನಡೆವಾಗ, ತಿನ್ನುವಾಗ ಕುಡಿವಾಗ, ಆಡುವಾಗ ಮಾಡುವಾಗ, ನಾವು ಮಾಡುವ ಎಲ್ಲದರಲ್ಲಿಯೂ ಸತ್ಯವನ್ನೇ ಅವಲಂಬಿಸಿದರೆ, ಹಾಗೆ ಮಾಡು ಮಾಡುತ್ತ ನಿರ್ದೋಷ ಮರಣವನ್ನು ಪಡೆದು ಸತ್ಯದಲ್ಲಿಯೇ ಲೀನವಾದರೆ ಅದೆಷ್ಟು ಚೆನ್ನಾಗಿ ಇದ್ದೀತು? ಸತ್ಯರೂಪಿ ಪರಮೇಶ್ವರ ನನಗಂತೂ ರತ್ನ ಚಿಂತಾಮಣಿಯಾಗಿ ಕಂಡಿದ್ದಾನೆ. ಎಲ್ಲರಿಗೂ ಹಾಗೆಯೇ ಕಾಣಬರಲಿ.

2. ಅಹಿಂಸೆ

ಮಂಗಳ ಪ್ರಭಾತ, ೨೯-೭-೧೯೩೦

ಸತ್ಯದ ದಾರಿ ಎಷ್ಟು ನೇರೋ ಅಷ್ಟು ಕಡಿದು. ಅಹಿಂಸೆಯದೂ ಹಾಗೆಯೇ. ಕತ್ತಿಯ ಮೊನೆಯ ಮೇಲೆ ತೂಕ ತಪ್ಪದೆ ನಡೆಯುವಂತೆ; ಅಸಿಧಾರಾವ್ರತ. ಸತ್ಯ-ಅಹಿಂಸೆಗಳ ಹಗ್ಗ ಅದಕ್ಕಿಂತ ಸಪುರು. ಇದರ ಮೇಲೆ ನಡೆಯಲು ಇನ್ನೂ ಬಹಳ ಹೆಚ್ಚು ಸಾವಧಾನ ಬೇಕು. ಕೂದಲೆಳೆಯಷ್ಟು

ತಪ್ಪಿತೋ ದೊಪ್ಪೆಂದು ಕೆಳಗೆ ಬೀಳಬೇಕಾದುದೇ. ಕ್ಷಣಕ್ಷಣವೂ ಸಾಧನೆ ಮಾಡಿದರೆಯೆ ಅದರ ದರ್ಶನ ಆಗಬಲ್ಲದು.

ಸತ್ಯದ ಸಂಪೂರ್ಣ ದರ್ಶನ ಈ ಶರೀರಕ್ಕೆ ಸಂಭವವಿಲ್ಲ. ನಮಗೆ ಅದರ ಕಲ್ಪನೆ ಮಾತ್ರ ಸಾಧ್ಯ. ಈ ಕ್ಷಣಿಕ ದೇಹದ ಮೂಲಕ ಶಾಶ್ವತ ಧರ್ಮದ ಸಾಕ್ಷಾತ್ಕಾರ ಅಸಂಭವ. ಆದುದರಿಂದ ಕಟ್ಟಕಡೆಗೆ ಶ್ರದ್ಧೆಯನ್ನೇ ಆಶ್ರಯಿಸ ಬೇಕು.

ಈ ಸಾವುಗುಳಿ ಮೈಯ ಮೂಲಕ ಸಂಪೂರ್ಣ ಸತ್ಯದರ್ಶನ ಸಾಧ್ಯ ವಿಲ್ಲ ಎಂಬುದೇ ಪುರಾತನ ಜಿಜ್ಞಾಸುಗಳಿಗೆ ಅಹಿಂಸೆಯನ್ನು ತೋರಿಸಿ ಕೊಟ್ಟಿರಬೇಕು. ಜಿಜ್ಞಾಸುವಿನ ಮುಂದೆ ಒಂದು ಪ್ರಶ್ನೆ ಬಂದು ನಿಂತಿತು: 'ನನ್ನ ಸಾಧನಾ ಮಾರ್ಗದಲ್ಲಿ ಅಡ್ಡ ಬಂದು ನಿಲ್ಲುವ ಸಂಕಟಗಳನ್ನು ಸೈರಿ ಸಲಿ? ಅದನ್ನು ನಿವಾರಿಸಲು ಮಾಡಬೇಕಾದ ನಾಶವನ್ನು ಮಾಡುತ್ತ ಮುಂಬರಿಯಲಿ ?' ನಾಶ ಮಾಡಿದವನು ಮುಂಬರಿಯ, ಇದ್ದಲ್ಲಿಯೇ ಇರು ತ್ತಾನೆ; ಆದರೆ ಸಂಕಟವನ್ನು ಸೈರಿಸಿದವನು ಮುಂಬರಿಯುತ್ತಾನೆ ಎಂದು ಜಿಜ್ಞಾಸುವಿಗೆ ಕಂಡುಬಂದಿತು. ಮೊಟ್ಟಮೊದಲನೆಯ ಹಿಂಸಾಕಾರ್ಯ ದಲ್ಲಿಯೇ ಅವನಿಗೆ ತಿಳಿಯಿತು ತಾನು ಯಾವ ಸತ್ಯವನ್ನು ಅರಸುತ್ತಿದ್ದಾನೋ ಆ ಸತ್ಯ ಹೊರಗಿಲ್ಲ, ತನ್ನೊಳಗೇ ಇದೆ. ಆದುದರಿಂದ ಅವನು ಹೆಚ್ಚು ಹೆಚ್ಚು ಹಿಂಸೆ ಮಾಡಿದಂತೆಲ್ಲ ಹೆಚ್ಚು ಹೆಚ್ಚು ಹಿಂದೆ ಬಿದ್ದ ! ಸತ್ಯಕ್ಕೆ ಹೆಚ್ಚು ಹೆಚ್ಚು ದೂರವಾದ. ಹೊರಗಿನ ಶತ್ರುವನ್ನು ಇದಿರಿಸಲು ಹೋಗಿ ಒಳಗಿನ ಶತ್ರುವನ್ನು ಮರೆತ.

ಕಳ್ಳರು ನಮ್ಮನ್ನು ಪೀಡಿಸುತ್ತಾರೆ. ನಮ್ಮ ರಕ್ಷಣೆಗೆಂದು ನಾವು ಅವರನ್ನು ದಂಡಿಸುತ್ತೇವೆ, ಶಿಕ್ಷಿಸುತ್ತೇವೆ. ಅವರು ಅಲ್ಲಿಂದ ಓಡಿಹೋದಾರು ಆದರೆ ಮತ್ತೊಂದು ಕಡೆ ಹೋಗಿ ಕನ್ನ ಕೊರೆದಾರು. ಆ ಸ್ಥಳವೂ ನಮ್ಮದೇ, ಆ ಮನೆಯವನೂ ನಮ್ಮ ಹಾಗೆಯೆ ಇನ್ನೊಬ್ಬ ಮನುಷ್ಯ. ಹೀಗೆ ಒಂದು ಕೊನೆಯಿಲ್ಲದ ಸುಳಿಗೆ ಸಿಗುತ್ತೇವೆ ಕಳ್ಳನಿಗೆ ಕಳ್ಳತನ ಒಂದು ಕಸಬು ಎಂಬ ಭಾವನೆ. ಅದರಿಂದ ಕಳ್ಳರ ಕಾಟ ಹೆಚ್ಚುತ್ತದೆ, ತಗ್ಗದು. ಕಟ್ಟಕಡೆಗೆ ಕಳ್ಳರನ್ನು ದಂಡಿಸುವುದಕ್ಕಿಂತ ಸೈರಿಸಿಕೊಳ್ಳುವುದೇ ಲೇಸು ಎನಿಸುತ್ತದೆ. ಈ ಸೈರಣೆಯಿಂದ ಅವರಿಗೆ ಬುದ್ಧಿ ಬಂದರೂ ಬರಬಹುದು.

ನಮ್ಮ ಸ್ಮರಣೆಯಿಂದ ನಮಗಾದರೂ ಕಳ್ಳರು ಬೇರೆ, ನಾವು ಬೇರೆ, ಅಲ್ಲ, ಅವರೂ ನಮ್ಮ ಬಳಗ, ಅವರೂ ನಮ್ಮ ಗೆಳೆಯರು, ಅವರನ್ನು ದಂಡಿಸಬಾರದು ಎಂಬುದು ತಿಳಿಯುತ್ತದೆ. ಆದರೆ ಸುಮ್ಮನೆ ಕಳ್ಳರ ಪೀಡೆಯನ್ನು ಸೈರಿಸುತ್ತ ಹೋಗಬಾರದು. ಅದು ಹೇಡಿತನವಾದೀತು. ಕಳ್ಳರು ನಮ್ಮ ಅಣ್ಣ ತಮ್ಮಂದಿರು ಗೆಳೆಯರು ಎಂದ ಮೇಲೆ ಅವರಿಗೂ ಆ ಭಾವನೆ ಹುಟ್ಟುವಂತೆ ಮಾಡಬೇಕು. ಆದುದರಿಂದ ಅವರನ್ನು ಆತ್ಮೀಯರಾಗುವಂತೆ ಮಾಡಲು ಉಪಾಯವನ್ನು ಕಂಡುಹಿಡಿಯಬೇಕು. ಆ ಕಷ್ಟವನ್ನು ಸೈರಿಸಬೇಕು. ಇದು ಅಹಿಂಸೆಯ ದಾರಿ. ಎಡೆಬಿಡದೆ ದುಃಖವನ್ನು ಸೈರಿಸಬೇಕಾದೀತು. ಕೊನೆಯಿಲ್ಲದ ತಾಳ್ಮೆಯನ್ನು ಕಲಿಯಬೇಕಾದೀತು ಇದರಲ್ಲಿ. ಈ ಎರಡು ಕೆಲಸ ನಡೆದರೆ ಕಳ್ಳ ತನ್ನ ಕೆಟ್ಟ ದಾರಿ ಬಿಡುತ್ತಾನೆ : ನಮಗೆ ಸತ್ಯದ ದರ್ಶನ ಹೆಚ್ಚು ಸ್ಪಷ್ಟವಾಗಿ ಆಗುತ್ತದೆ. ನಾವು ಸ್ವಲ್ಪ ಸ್ವಲ್ಪವಾಗಿ ಜೀವದ ಪಾವಿತ್ರ್ಯವನ್ನು ಸಂಪಾದಿಸುತ್ತೇವೆ. ಈಶ್ವರನ, ಸತ್ಯದ ಮಹಿಮೆಯನ್ನು ಹೆಚ್ಚು ಅರಿತುಕೊಳ್ಳುತ್ತೇವೆ. ಸಂಕಟವನ್ನು ಸೈರಿಸುತ್ತಿದ್ದರೂ ನಮ್ಮ ಶಾಂತಿ-ಸುಖ ಹೆಚ್ಚುತ್ತದೇ ನಮ್ಮೊಳಗೆ ಧೈರ್ಯ-ಸಾಹಸ ಬೆಳೆಯುತ್ತದೆ; ಯಾವುದು ಶಾಶ್ವತ, ಯಾವುದು ಅಶಾಶ್ವತ ಎಂಬ ಭೇದ ನಮಗೆ ಹೆಚ್ಚು ನಿಚ್ಚಳವಾಗಿ ಕಾಣುತ್ತದೆ; ಕರ್ತವ್ಯ-ಅಕರ್ತವ್ಯ ವಿವೇಕ ಮೂಡುತ್ತದೆ. ನಮ್ಮ ಗರ್ವ ಕರಗಿ, ನಮ್ರತೆ ಹೆಚ್ಚುತ್ತದೆ. ಪರಿಗ್ರಹಬುದ್ಧಿ ತನಗೆ ತಾನೇ ಕಡಿಮೆಯಾಗುತ್ತದೆ. ನಮ್ಮ ಒಳಗಿನ ಕೊಳೆ-ಕಡಕು ದಿನೇ ದಿನೇ ಕಡಿಮೆಯಾಗುತ್ತದೆ.

ಅಹಿಂಸೆ ಈಗ ನಾವು ನೋಡುತ್ತಿರುವಷ್ಟು ಸ್ಥೂಲವಸ್ತುವಲ್ಲ. ಯಾವ ಪ್ರಾಣಿಯನ್ನೂ ಕೊಲ್ಲಬಾರದು ಹೊಡೆಯಬಾರದು ಎಂಬುದಂತೂ ಅಹಿಂಸೆಯ ಒಂದು ಅಂಶ ಮಾತ್ರ, ಅಲ್ಪಾಂಶ. ಕೆಟ್ಟ ವಿಚಾರವೇ ಹಿಂಸೆ; ದುಡುಕು, ಅವಸರ ಹಿಂಸೆ; ಸುಳ್ಳಾಡುವುದು ಹಿಂಸೆ; ದ್ವೇಷ ಹಿಂಸೆ; ಪರರಿಗೆ ಕೇಡನ್ನು ಬಯಸುವುದು ಹಿಂಸೆ. ಇಷ್ಟೇ ಅಲ್ಲ, ಜಗತ್ತಿಗೆ ಬೇಕಾದುದನ್ನು ಕೊಟ್ಟುಬಿಡದೆ ನಾವು ತೆಗೆದಿಟ್ಟುಕೊಳ್ಳುವುದೂ ಹಿಂಸೆಯೇ. ಆದರೆ ದಿನವೂ ನಾವು ತಿನ್ನುವುದನ್ನೇ ಜಗತ್ತು ಬೇಡುತ್ತದೆ, ನಾವು ನಿಂತಲ್ಲಿಯೇ ನೂರಾರು ಸೂಕ್ಷ್ಮ ಜೀವಿಗಳಿವೆ. ನಮ್ಮ ಕಾಲಿನ ಕೆಳಗೆ

ಸಿಕ್ಕಿ ಸತ್ತುಹೋಗುತ್ತವೆ. ಆ ಸ್ಥಿತಿ ಅವುಗಳದು.. ಹೀಗಾದರೆ ನಾವೇನು ಮಾಡಬೇಕು ?. ಆತ್ಮಹತ್ಯೆ ಮಾಡಿಕೊಳ್ಳೋಣವೆ ? ಅದರಿಂದ ಪ್ರಯೋಜನವಿಲ್ಲ. ನಮ್ಮ ಆತ್ಮ ಈ ಮೈಗೆ ಅಂಟಿಕೊಂಡಿರುವವರೆಗೆ ಒಂದು ಮೈ ಹೋದರೆ ಇನ್ನೊಂದು ಬರುತ್ತದೆ. ನಮ್ಮ ವಿಚಾರದಲ್ಲಿ ಈ ದೇಹದ ಸಂಸರ್ಗ ತಪ್ಪಿದರೆ, ನಮಗೆ ಮೈಯ ಮೋಹ ಬಿಟ್ಟರೆ, ಮೈಯೂ ನಮ್ಮನ್ನು ಬಿಡುತ್ತದೆ. ಈ ಮೋಹರಹಿತ ಸ್ವರೂಪವೇ ಸತ್ಯನಾರಾಯಣ. ದುಡುಕಿನಿಂದ, ಗಡಿಬಿಡಿಯಿಂದ ಈ ದರ್ಶನ ಆಗದು. ಈ ಮೈ ನಮ್ಮದಲ್ಲ, ನಮಗೆ ಕೊಟ್ಟಿರುವ ಮುಡುಪು. ಅದನ್ನು ಆ ರೀತಿ ಉಪಯೋಗಿಸುತ್ತ ನಾವು ಮುಂಬರಿಯಬೇಕು. ಹೀಗಾದರೆ ಒಂದಲ್ಲ ಒಂದು ದಿನ ನಾವು ಈ ದೇಹದಿಂದ ಬಿಡುಗಡೆಯಾದೇವು.

ಅಹಿಂಸೆಯ ವಿನಾ ಸತ್ಯದ ಶೋಧನೆ ಅಸಂಭವ ಎಂಬುದು ಇಷ್ಟರಿಂದ ಸ್ಪಷ್ಟವಾಗಿರಬೇಕು. ಅಹಿಂಸೆ-ಸತ್ಯಗಳು ಒಂದು ನಾಣ್ಯದ ಎರಡು ಬದಿಗಳಂತೆ, ಅಥವಾ ಎರಡೂ ಕಡೆಯೂ ಏನೂ ಗುರುತು ಮಾಡದ ನಯವಾದ ಬಿಲ್ಲೆಯಂತೆ. ಅದರಲ್ಲಿ ಕೆಳಗೆ ಯಾವುದು, ಮೇಲೆ ಯಾವುದು ? ಎರಡೂ ಒಂದೇ ಸಮ. ಆದರೂ ಅಹಿಂಸೆ ಸಾಧನ, ಸತ್ಯ ಗುರಿ. ಸಾಧನ ನಮ್ಮ ಕೈಯೊಳಗಿನದು. ಆದ್ದರಿಂದಲೇ ಅಹಿಂಸೆ ಪರಮಧರ್ಮ ಎಂದದ್ದು. ಸತ್ಯ ಪರಮೇಶ್ವರ. ಸಾಧನದ ಚಿಂತೆ ನಮಗಿರಲಿ. ಗುರಿಯ ದರ್ಶನ ಎಂದಾದರೊಂದು ದಿನ ಆದೀತು. ಇಷ್ಟೊಂದು ನಿಶ್ಚಯವಾದರೆ ಜಗತ್ತನ್ನೇ ಗೆದ್ದ ಹಾಗೆ.. ನಮ್ಮ ದಾರಿಯಲ್ಲಿ ಎಷ್ಟೇ ಸಂಕಟ ಬರಲಿ. ಬಾಹ್ಯದೃಷ್ಟಿಯಿಂದ ನಮಗೆ ಎಷ್ಟೇ ಸೋಲಾದಂತೆ ಕಾಣಲಿ, ನಾವು ವಿಶ್ವಾಸ ಬಿಡದೆ ಒಂದೇ ಮಂತ್ರವನ್ನು ಜಪಿಸಬೇಕು : ಇರುವುದು ಸತ್ಯವೊಂದೇ, ಅದೊಂದೇ, ಅದೇ ಪರಮೇಶ್ವರ. ಅದರ ಸಾಕ್ಷಾತ್ಕಾರಕ್ಕೆ ಒಂದೇ ದಾರಿ, ಒಂದೇ ಸಾಧನ— ಅಹಿಂಸೆ. ಅದನ್ನು ಎಂದಿಗೂ ಬಿಡೆ. ಯಾವ ಸತ್ಯರೂಪಿ ಪರಮೇಶ್ವರನ ಹೆಸರಿನಲ್ಲಿ ಪ್ರತಿಜ್ಞೆ ಮಾಡಿದೆವೋ ಅವನೇ ಅದನ್ನು ಪಾಲಿಸುವ ಬಲವನ್ನು ಕೊಡಲಿ.

3. ಬ್ರಹ್ಮಚರ್ಯ

ಮಂಗಳ ಪ್ರಭಾತ, ೫–೮–೧೯೩೦

ನಮ್ಮ ವ್ರತಗಳಲ್ಲಿ ಮೂರನೆಯದು ಬ್ರಹ್ಮಚರ್ಯ, ವಾಸ್ತವವಾಗಿ ಎಲ್ಲಾ ವ್ರತಗಳೂ ಸತ್ಯದಿಂದಲೇ ಹುಟ್ಟಿ ಬಂದಿವೆ. ಇವು ಇರುವುದೂ ಸತ್ಯ ವ್ರತಕ್ಕಾಗಿಯೇ. ಸತ್ಯದ ಆಶ್ರಯ ಪಡೆದು ಸತ್ಯವನ್ನೇ ಉಪಾಸನೆ ಮಾಡುವವನು ಮತ್ತಾವುದನ್ನಾದರೂ ಆರಾಧಿಸಿದರೆ, ವ್ಯಭಿಚಾರಿಯಾದಂತೆ. ಹೀಗಿರುವಾಗ ವಿಕಾರದ ಆರಾಧನೆ ಮಾಡುವುದಾದರೂ ಹೇಗೆ ? ಯಾರ ಸಮಸ್ತ ಕಾರ್ಯವೂ ಕೇವಲ ಸತ್ಯದರ್ಶನಕ್ಕಾಗಿಯೇ ಮೀಸಲೋ ಅವನು ಸಂಸಾರ ಮಾಡುತ್ತ, ಸಂತಾನ ಪಡೆಯುತ್ತ ಕಾಲ ಕಳೆಯಲು ಸಾಧ್ಯವೆ ? ಭೋಗ ವಿಲಾಸಗಳ ಮೂಲಕ ಯಾರಿಗೂ ಸತ್ಯ ಪ್ರಾಪ್ತಿಯಾಗಿಲ್ಲ. ಅಂಥ ಒಂದು ದೃಷ್ಟಾಂತ ಇಂದಿನವರೆಗೂ ಇಲ್ಲ.

ಅಹಿಂಸೆಯ ಪಾಲನೆಯನ್ನು ತೆಗೆದುಕೊಂಡರೆ ಬ್ರಹ್ಮಚರ್ಯದ ಹೊರತು ಅಹಿಂಸೆಯ ಪೂರ್ಣ ಪಾಲನೆ ಸಾಧ್ಯವಲ್ಲ ಎಂಬುದು ತಿಳಿಯುತ್ತದೆ. ಅಹಿಂಸೆ ಎಂದರೆ ಸರ್ವವ್ಯಾಪಿ ಪ್ರೇಮ. ಒಬ್ಬ ಗಂಡಸು ಒಬ್ಬ ಹೆಂಗಸಿಗೆ, ಒಬ್ಬ ಹೆಂಗಸು ಒಬ್ಬ ಗಂಡಸಿಗೆ ತಮ್ಮ ಪ್ರೇಮವನ್ನೆಲ್ಲ ಧಾರೆಯೆರೆದರೆ ಉಳಿದವರಿಗೆ ನೀಡಲು ಅವರ ಬಳಿ ಉಳಿಯುವುದೇನು ? ಅದರ ಅರ್ಥ ಇಷ್ಟೇ ತಾನೆ—'ಮೊಟ್ಟ ಮೊದಲು ನಾವಿಬ್ಬರೂ : ಉಳಿದವರ ಮಾತು ಆಮೇಲೆ.' ಪತಿವ್ರತೆಯಾದ ಹೆಂಗಸು ತನ್ನ ಗಂಡನಿಗಾಗಿ, ಪತ್ನೀ ವ್ರತನಾದ ಗಂಡಸು ತನ್ನ ಹೆಂಡತಿಗಾಗಿ ಸರ್ವಸ್ವವನ್ನೂ ಅರ್ಪಿಸಲು ಸಿದ್ಧರಾಗಿರುತ್ತಾರೆ. ಎಂದರೆ ಇವರು ಸರ್ವವ್ಯಾಪಿ ಪ್ರೇಮವನ್ನು ಪಾಲಿಸಲಾರರು ಎಂದು ಸ್ಪಷ್ಟವಾಗುತ್ತದೆ. ಇವರು ಇಡೀ ಸೃಷ್ಟಿಯನ್ನು ತಮ್ಮ ಕುಟುಂಬ ಎಂದು ತಿಳಿಯಲಾರರು. ಇವರಿಗೆ ತಮ್ಮದು ಎಂಬ ಕುಟುಂಬ ಒಂದು ಇದೆಯಲ್ಲ ! ಆ ಕುಟುಂಬ ಎಷ್ಟೆಷ್ಟು ಬೆಳೆದರೆ ಅಷ್ಟಷ್ಟು ಇವರಿಗೆ ಸರ್ವವ್ಯಾಪಿ ಪ್ರೇಮ ಕಡಮೆಯಾಗುತ್ತದೆ. ಇಡೀ ಜಗತ್ತಿನಲ್ಲಿಯೆ ಇದು ನಮಗೆ ಕಾಣಬರುತ್ತಿದೆ. ಆದುದರಿಂದ ಅಹಿಂಸಾ ವ್ರತವನ್ನು ಪಾಲಿಸುವವನು ಮದುವೆಯ ಬಂಧನಕ್ಕೆ ಸಿಗಲಾರ. ಇನ್ನು ವಿವಾಹೇತರ ಭೋಗವಿಕಾರಗಳ ಮಾತೇನು ಬಂತು ?

ಹಾಗಾದರೆ ಮದುವೆಯಾಗಿರುವವರ ಗತಿಯೇನು ? ಅವರಿಗೆ ಸತ್ಯ ಸಾಕ್ಷಾತ್ಕಾರ ಆಗುವುದೇ ಇಲ್ಲವೆ ? ಅವರು ಜಗತ್ತಿಗಾಗಿ ಸರ್ವಾರ್ಪಣ ಮಾಡಲು ಸಾಧ್ಯವೇ ಇಲ್ಲವೆ ? ಅವರಿಗೂ ಒಂದು ದಾರಿಯುಂಟು ; ಮದುವೆಯಾದವರು ಮದುವೆಯಾಗದವರಂತೆ ನಡೆದುಕೊಂಡರಾಯಿತು. ಈ ಸ್ಥಿತಿಯನ್ನು ಸವಿದವರು ಇದಕ್ಕೆ ಸಾಕ್ಷಿ ಹೇಳಬಲ್ಲರು. ಅನೇಕರು ಈ ಪ್ರಯೋಗ ಮಾಡಿ ಸಫಲರಾಗಿದ್ದಾರೆ. ವಿವಾಹಿತ ಸ್ತ್ರೀಪುರುಷರು ತಾವು ಪರಸ್ಪರ ಅಣ್ಣ-ತಂಗಿಯರೆಂದು ತಿಳಿದು ಅದರಂತೆ ನಡೆದರೆ ಎಲ್ಲಾ ತೊಂದರೆಯೂ ತಪ್ಪುತ್ತದೆ. ಲೋಕ ಸೇವೆಗೆ ಅವರು ಬಿಡುವಾಗುತ್ತಾರೆ. ಈ ಜಗತ್ತಿನ ಹೆಂಗಸರೆಲ್ಲರೂ ಅಕ್ಕ ತಂಗಿಯರು, ತಾಯಂದಿರು, ಮಕ್ಕಳು ಎಂಬ ವಿಚಾರ ಒಮ್ಮೆ ಹೊಳೆಯಿತೋ ಒಡನೆಯೇ ಮನುಷ್ಯನನ್ನು ಮೇಲಕ್ಕೆ ಒಯ್ಯುತ್ತದೆ. ಬಂಧನಗಳನ್ನು ಕಡಿದು ಹಾಕುತ್ತದೆ. ಇದರಿಂದ ಗಂಡ ಹೆಂಡರಿಗೆ ಆಗುವ ನಷ್ಟವೇನೂ ಇಲ್ಲ. ಲಾಭವೇ ಆಗುತ್ತದೆ. ಅವರ ಬಂಡವಾಳ ಹೆಚ್ಚುತ್ತದೆ. ಅವರ ಕುಟುಂಬ ಬೆಳೆಯುತ್ತದೆ. ವಿಕಾರವನ್ನು ತೊಳೆದು ಹಾಕಿದುದರಿಂದ ಅವರ ಪ್ರೇಮ ಬಲವಾಗುತ್ತದೆ. ಈ ವಿಕಾರ ಅಳಿದುಹೋದರೆ ಒಬ್ಬರಿಗೊಬ್ಬರು ಹೆಚ್ಚು ಹೆಚ್ಚಾಗಿ ಸೇವೆ ಮಾಡಬಲ್ಲರು. ಅವರ ನಡುವೆ ಜಗಳಕ್ಕೆ ಅವಕಾಶ ಕಡಿಮೆಯಾಗುತ್ತದೆ. ಪ್ರೇಮ ಸ್ವಾರ್ಥದ್ದೂ, ಏಕಾಂಗಿಯಾದುದೂ ಆದರೆ ಅಲ್ಲಿ ಜಗಳವೂ ಹೆಚ್ಚು !

ಮೇಲೆ ಹೇಳಿದ ಪ್ರಧಾನ ವಿಚಾರ ಹೃದಯದಲ್ಲಿ ನಾಟಿದರೆ ಬ್ರಹ್ಮಚರ್ಯದಿಂದ ಆಗಬಹುದಾದ ಶಾರೀರಕ ಲಾಭ, ವೀರ್ಯರಕ್ಷಣೆ ಮೊದಲಾದುವು ಬಹಳ ಗೌಣವಾಗುತ್ತದೆ. ತಿಳಿದೂ ತಿಳಿದೂ ಭೋಗ ವಿಲಾಸಕ್ಕಾಗಿ ವೀರ್ಯವನ್ನು ನಾಶಮಾಡಿಕೊಳ್ಳುವುದು, ಶರೀರವನ್ನು ಹಿಂಡಿ ಹಾಕುವುದು ಎಂಥ ಮೂರ್ಖತನ ? ವೀರ್ಯದ ಉಪಯೋಗ ಗಂಡ-ಹೆಂಡತಿ ಇಬ್ಬರ ಮಾನಸಿಕ, ಶಾರೀರಕ ಶಕ್ತಿಯನ್ನು ಬೆಳೆಸಲಿಕ್ಕೆ ; ವಿಷಯ ಭೋಗದಲ್ಲಿ ಅದನ್ನು ಉಪಯೋಗಿಸುವುದು ಅತ್ಯಂತ ದುರುಪಯೋಗ. ಇಂಥ ದುರುಪಯೋಗದಿಂದ ಅನೇಕ ರೋಗ ಹುಟ್ಟುತ್ತವೆ.

ಎಲ್ಲಾ ವ್ರತಗಳಂತೆ ಬ್ರಹ್ಮಚರ್ಯವೂ ಕಾಯೇನ ವಾಚಾ ಮನಸಾ

ಪಾಲಿಸಬೇಕಾದುದು. ಶರೀರವನ್ನು ಸ್ವಾಧೀನದಲ್ಲಿಟ್ಟುಕೊಂಡಂತೆ ಕಂಡರೂ, ಮನಸ್ಸಿನಲ್ಲಿ ವಿಕಾರವನ್ನೇ ಪೋಷಿಸುವ ಮನುಷ್ಯ ಮೂಢ-ಮಿಥ್ಯಾಚಾರಿ ಎಂದು ಗೀತೆ ಹೇಳಿದೆ. ಎಲ್ಲರಿಗೂ ಇದು ಅನುಭವವಾಗುತ್ತದೆ. ಮನಸ್ಸಿನ ವಿಕಾರವನ್ನು ಹಾಗೆಯೇ ಇರಗೊಟ್ಟು, ಬರೀ ಮೈಯನ್ನು ದಂಡಿಸಿದರೆ ಬಹಳ ಹಾನಿಯಾಗಬಹುದು. ಮನಸ್ಸು ಎಲ್ಲಿಗೆ ಹೋಗುತ್ತದೆಯೋ ಅಲ್ಲಿಗೆ ದೇಹವನ್ನೂ ಅದು ಸೆಳೆದೇ ಸೆಳೆಯುತ್ತದೆ; ತಪ್ಪಿದಲ್ಲ.

ಇಲ್ಲಿ ಒಂದು ಭೇದವನ್ನು ಅರಿತುಕೊಳ್ಳುವುದು ಅಗತ್ಯ. ಮನಸ್ಸನ್ನು ವಿಕಾರವಶ ಮಾಡುವುದು ಒಂದು ವಿಷಯ; ಮನಸ್ಸು ತಾನೆ ನಿಮ್ಮ ಇಷ್ಟವಿಲ್ಲದಿದ್ದರೂ ವಿಕಾರವಶವಾದರೆ ಅದು ಬೇರೆ ವಿಷಯ. ಈ ವಿಕಾರದಲ್ಲಿ ನಾವು ಸಹಾಯ ಮಾಡದಿದ್ದರೆ ಕಟ್ಟಕಡೆಗೆ ನಮ್ಮದೇ ಗೆಲವು.

ನಮಗೆ ಗಳಿಗೆ ಗಳಿಗೆಯಲ್ಲಿಯೂ ಅನುಭವವಾಗುತ್ತದೆ-ಶರೀರವೇನೋ ಸ್ವಾಧೀನದಲ್ಲಿರುತ್ತದೆ, ಮನಸ್ಸು ಸ್ವಾಧೀನದಲ್ಲಿರದು. ಆದುದರಿಂದ ಶರೀರವನ್ನು ಸ್ವಾಧೀನದಲ್ಲಿಟ್ಟುಕೊಂಡು ಮನಸ್ಸನ್ನೂ ವಶಪಡಿಸಿಕೊಳ್ಳುವ ಪ್ರಯತ್ನವನ್ನು ಸತತವೂ ಮಾಡಬೇಕು. ಆಗ ನಾವು ನಮ್ಮ ಕರ್ತವ್ಯವನ್ನು ಮಾಡಿದಂತೆ. ನಾವು ಮನಸ್ಸಿಗೆ ಅಧೀನರಾದೆವೋ, ಶರೀರವೊಂದು ದಿಕ್ಕಿಗೆ ಮನಸ್ಸೊಂದು ದಿಕ್ಕಿಗೆ ಎಳೆಯುತ್ತವೆ. ಮಿಥ್ಯಾಚಾರ ಮೊದಲಾಗುತ್ತದೆ. ಆದರೆ ಮನೋವಿಕಾರವನ್ನು ನಿಗ್ರಹಿಸುತ್ತಿರುವವರೆಗೆ ಶರೀರ—ಮನಸ್ಸುಗಳೆರಡೂ ಜೊತೆಯಾಗಿ ಹೋಗುತ್ತವೆ ಎನ್ನಬಹುದು.

ಬ್ರಹ್ಮಚರ್ಯ ವ್ರತದ ಪಾಲನೆ ಬಹಳ ಕಠಿನ, ಅಸಂಭವವೇ ಎಂದು ಅಭಿಪ್ರಾಯವಿದೆ. ಇದಕ್ಕೆ ಕಾರಣವನ್ನು ಹುಡುಕುವಾಗ ಬ್ರಹ್ಮಚರ್ಯಕ್ಕೆ ಬಹಳ ಸಂಕುಚಿತ ಅರ್ಥ ಮಾಡಿಕೊಂಡಿದ್ದಾರೆ ಜನ ಎಂಬುದು ತಿಳಿಯುತ್ತದೆ. ಜನನೇಂದ್ರಿಯ ವಿಕಾರವನ್ನು ನಿರೋಧಿಸುವುದೇ, ಅದೇ ಬ್ರಹ್ಮಚರ್ಯ ಎಂದು ತಿಳಿದಿದ್ದಾರೆ. ಈ ಅರ್ಥ ಅಪೂರ್ಣ, ತಪ್ಪು. ಸರ್ವೇಂದ್ರಿಯ ನಿರೋಧವೇ ಬ್ರಹ್ಮಚರ್ಯ ಉಳಿದೆಲ್ಲಾ ಇಂದ್ರಿಯಗಳನ್ನೂ ಸ್ವೇಚ್ಛೆಯಾಗಿ ವಿಹರಿಸಲು ಬಿಟ್ಟು ಇದೊಂದೇ ಇಂದ್ರಿಯವನ್ನು ನಿಗ್ರಹಿಸುವ ಪ್ರಯತ್ನ ಮಾಡಿದರೆ ಅದು ನಿಷ್ಫಲವಾಗುತ್ತದೆ. ಇದರಲ್ಲಿ ಸಂದೇಹವಿಲ್ಲ, ಕಿವಿಯಿಂದ

ವಿಕಾರದ ಮಾತನ್ನು ಕೇಳುವುದು. ಕಣ್ಣಿನಿಂದ ವಿಕಾರಜನಕ ದೃಶ್ಯಗಳನ್ನು ನೋಡುವುದು, ನಾಲಗೆಯಿಂದ ವಿಕಾರೋತ್ತೇಜಕ ವಸ್ತುಗಳನ್ನು ಸವಿಯುವುದು, ಕೈಗಳಿಂದ ವಿಕಾರವನ್ನು ಉದ್ರೇಕಿಸುವ ಪದಾರ್ಥಗಳನ್ನು ಮುಟ್ಟುವುದು—ಇಷ್ಟೆಲ್ಲ ಮಾಡಿ ಜನನೇಂದ್ರಿಯವನ್ನು ನಿಗ್ರಹಿಸಲು ಯತ್ನಿಸುವುದು ಬೆಂಕಿಯಲ್ಲಿ ಕೈಯಿಟ್ಟು ಕೈ ಸುಡಬಾರದು ಎಂದ ಹಾಗೆ. ಆದುದರಿಂದ ಒಂದನ್ನು ನಿಗ್ರಹಿಸಬಯಸುವವನು ಎಲ್ಲವನ್ನೂ ನಿಗ್ರಹಿಸಲು ಮೊದಲೇ ನಿಶ್ಚಯಿಸಬೇಕು. ಬ್ರಹ್ಮಚರ್ಯದ ಸಂಕುಚಿತ ಅರ್ಥದಿಂದ ಬಹಳ ಹಾನಿಯಾಗಿದೆಯೆಂದು ನನಗೆ ಯಾವಾಗಲೂ ಅನಿಸಿದೆ. ಎಲ್ಲಾ ಇಂದ್ರಿಯಗಳನ್ನೂ ಒಂದೇ ಸಲ ವಶಪಡಿಸಿಕೊಳ್ಳುವ ಅಭ್ಯಾಸ ಮಾಡಿದರೇನೇ ಸಫಲತೆ ಎಂದು ನನ್ನ ಅನುಭವ. ಇದರಲ್ಲಿ ಮುಖ್ಯ ವಸ್ತು ನಾಲಗೆ. ಆದುದರಿಂದ ನಾಲಗೆಯ ಸಂಯಮಕ್ಕೆ ಆಶ್ರಮದಲ್ಲಿ ಪ್ರತ್ಯೇಕ ಸ್ಥಾನವನ್ನು ಕೊಟ್ಟಿದ್ದೇವೆ.

ಬ್ರಹ್ಮಚರ್ಯದ ಮೂಲಾರ್ಥವನ್ನು ನೆನಪಿನಲ್ಲಿಡೋಣ. ಬ್ರಹ್ಮಚರ್ಯ ಎಂದರೆ ಬ್ರಹ್ಮನ ಅಥವಾ ಸತ್ಯದ ಶೋಧನೆಯ ಚರ್ಯೆ. ಅದಕ್ಕೆ ಸಂಬಂಧಿಸಿದ ಆಚಾರ. ಈ ಮೂಲಾರ್ಥದಿಂದ ಸರ್ವೇಂದ್ರಿಯ ಸಂಯಮದ ವಿಶೇಷಾರ್ಥ ಹುಟ್ಟುತ್ತದೆ. ಕೇವಲ ಜನನೇಂದ್ರಿಯ ಸಂಯಮದ ಅಪೂರ್ಣ ಅರ್ಥವನ್ನು ನಾವು ಮರೆತೇ ಬಿಡಬೇಕು.

4. ಅಸ್ವಾದ

ಮಂಗಳ ಪ್ರಭಾತ, ೧೨-೮-೧೯೩೦

ಅಸ್ವಾದ ವ್ರತಕ್ಕೂ ಬ್ರಹ್ಮಚರ್ಯಕ್ಕೂ ಬಹಳ ನಿಕಟ ಸಂಬಂಧ. ಈ ವ್ರತವನ್ನು ಪಾಲಿಸಿದರೆ ಬ್ರಹ್ಮಚರ್ಯ ಪಾಲನೆ, ಎಂದರೆ ಜನನೇಂದ್ರಿಯ ಸಂಯಮ ಬಹಳ ಸುಲಭ, ಸಹಜ ಆಗುತ್ತದೆ. ಇದು ನನ್ನ ಅನುಭವ. ಆದರೆ ಸಾಧಾರಣವಾಗಿ ಈ ವ್ರತಕ್ಕೆ ಪ್ರತ್ಯೇಕವಾಗಿ ಸ್ಥಾನಕೊಡುವ ರೂಢಿ ಇಲ್ಲ. ಮಹಾಮಹಾ ಮುನೀಶ್ವರರೂ ಈ ವ್ರತ ಸಾಧಿಸಲು ಆಗಲಿಲ್ಲವೆಂದು ಇದಕ್ಕೆ ಪ್ರತ್ಯೇಕ ಸ್ಥಾನ ಕೊಡದೆ ಬಿಟ್ಟಿರಬಹುದೆ? ಹೇಗಾದರೂ ಇರಲಿ,

ನಾವೇನೋ ಆಶ್ರಮದಲ್ಲಿ ಈ ವ್ರತಕ್ಕೆ ಪ್ರತ್ಯೇಕ ಸ್ಥಾನವನ್ನು ಕೊಟ್ಟಿದ್ದೇವೆ. ಆದುದರಿಂದ ಇದನ್ನು ಕುರಿತು ಸ್ವತಂತ್ರವಾದ ವಿಚಾರಮಾಡೋಣ.

ಅ–ಸ್ವಾದದ ಅರ್ಥ ! ಸ್ವಾದವನ್ನು ಎಂದರೆ ರುಚಿಯನ್ನು ಭೋಗಿಸ ಕೂಡದು. ಔಷಧ ತೆಗೆದುಕೊಳ್ಳುವಾಗ ಅದು ರುಚಿಯಾಗಿದೆಯೆ ಇಲ್ಲವೆ ಎಂದು ನೋಡುತ್ತೇವೆಯೆ ? ಶರೀರಕ್ಕೆ ಔಷಧ ಅಗತ್ಯ ಎಂದು, ಉಚಿತ ಪ್ರಮಾಣದಲ್ಲಿ ತೆಗೆದುಕೊಳ್ಳುತ್ತೇವೆ. ಅನ್ನದ ವಿಷಯದಲ್ಲಿಯೂ ಹೀಗೇ ತಿಳಿಯಬೇಕು. ನಾವು ತಿನ್ನುವ ಸಮಸ್ತ ಪದಾರ್ಥವೂ ಅನ್ನವೇ ; ಹಾಲು, ಹಣ್ಣು ಕೂಡ ಅನ್ನವೆ. ಗೊತ್ತಾದ ಪ್ರಮಾಣಕ್ಕಿಂತ ಕಡಿಮೆ ತೆಗೆದುಕೊಂಡರೆ ಔಷಧದಿಂದ ಲಾಭವಾಗದು. ಹೆಚ್ಚು ತೆಗೆದುಕೊಂಡರೆ ಹಾನಿ. ಅನ್ನವೂ ಹಾಗೆಯೇ. ಆದುದರಿಂದ ಬರೀ ರುಚಿಗಾಗಿ ಏನನ್ನಾದರೂ ಸವಿಯುವುದು ವ್ರತಭಂಗ. ರುಚಿಯಾದ ಪದಾರ್ಥವನ್ನು ಹೆಚ್ಚಾಗಿ ತೆಗೆದುಕೊಳ್ಳುವುದಂತೂ ಅನಾಯಾಸವಾಗಿ ವ್ರತಭಂಗವಾದಂತೆ. ಇದರಿಂದ ಒಂದು ಮಾತು ತಿಳಿಯುತ್ತದೆ ! ಒಂದು ಪದಾರ್ಥದ ರುಚಿಯನ್ನು ಹೆಚ್ಚಿಸಲು, ಬದಲಿಸಲು ಅಥವಾ ಅದರ ನೀರಸತೆಯನ್ನು ಕಳೆಯಲು, ಅದರಲ್ಲಿ ಉಪ್ಪನ್ನು ಬೆರೆಸುವುದು ವ್ರತ ಭಂಗವೇ. ಆದರೆ ಆರೋಗ್ಯಕ್ಕಾಗಿ ಇಂತಿಷ್ಟು ಪ್ರಮಾಣ ಉಪ್ಪು ಅನ್ನದಲ್ಲಿ ಇರಬೇಕು ಎಂದಾದರೆ, ಅಷ್ಟನ್ನು ಮಾತ್ರ ಅನ್ನಕ್ಕೆ ಬೆರೆಸಿದರೆ ಅದು ವ್ರತ ಭಂಗ ಅಲ್ಲ. ಶರೀರ ಪೋಷಣೆಗೆ ಅಗತ್ಯವಿಲ್ಲದಿದ್ದರೂ ಮನಸ್ಸಿಗೆ ಮೋಸ ಮಾಡಲು ಹಾಗೆಂದುಕೊಂಡು ಯಾವ ಪದಾರ್ಥವನ್ನು ಹೆಚ್ಚಾಗಿ ತೆಗೆದುಕೊಂಡರೂ ಅದು ಮಿಥ್ಯಾಚಾರ ಎನ್ನಬೇಕು.

ಈ ದೃಷ್ಟಿಯಿಂದ ವಿಚಾರಮಾಡಿದರೆ, ನಾವು ತಿನ್ನುತ್ತಿರುವ ಅನೇಕ ಪದಾರ್ಥಗಳು ಶರೀರರಕ್ಷಣೆಗೆ ಅಗತ್ಯವಲ್ಲ. ಆದುದರಿಂದ ಅವು ತ್ಯಾಜ್ಯ ಎಂಬುದು ತಿಳಿದುಬರುತ್ತದೆ. ಈ ಪ್ರಕಾರ ಯಾರು ಅನೇಕ ಪದಾರ್ಥಗಳನ್ನು ತ್ಯಾಜ್ಯ ಎಂದು ಬಿಟ್ಟುಬಿಡುತ್ತಾನೋ ಅವನಿಗೆ ಸಹಜವಾಗಿಯೇ ಇಂದ್ರಿಯ ವಿಕಾರಗಳು ಶಾಂತವಾಗುತ್ತವೆ. ‘ನಾಲಗೆ ನಂಬಿ ನರ ಕೆಟ್ಟ’ ಹೊಟ್ಟೆ–ನಿನ್ನಿಂದ ನಾ ಕೆಟ್ಟೆ’ ಈ ಗಾದೆಗಳಲ್ಲಿ ಬಹಳ ಅರ್ಥವಿದೆ. ಈ ವಿಷಯಕ್ಕೆ ನಾವು ಗಮನವನ್ನೇ ಕೊಟ್ಟಿಲ್ಲ. ಆದರಿಂದಾಗಿ ಈ ವ್ರತದ ದೃಷ್ಟಿಯಿಂದ ಆಹಾರವನ್ನು ನಿಶ್ಚಯಿಸುವುದು ಬಹಳ ಕಠಿಣವಾಗಿದೆ.

ಮಕ್ಕಳನ್ನು ಮುದ್ದು ಮಾಡುವ ಭರದಲ್ಲಿ ತಂದೆತಾಯಿಗಳು ನಾನಾ ಬಗೆಯ ರುಚಿರುಚಿಯಾದ ತಿಂಡಿ ತಿನ್ನಿಸಿ ಅವರ ದೇಹವನ್ನು ಕೆಡಿಸುತ್ತಾರೆ. ನಾಲಿಗೆಗೆ ಅವರು ತಿಂಡಿಪೋತತನವನ್ನು ಕಲಿಸುತ್ತಾರೆ. ಮಕ್ಕಳು ಬೆಳೆದು ದೊಡ್ಡವರಾದಾಗ ಅವರ ಮೈ ರೋಗಗ್ರಸ್ತ, ರುಚಿವಿಕಾರವೂ ಆಗುತ್ತದೆ. ಚಿಕ್ಕಂದಿನಲ್ಲಿ ಹೀಗೆ ಮೇರೆ ತಪ್ಪಿದುದರ ಕಹಿಯಾದ ಫಲವನ್ನು ಹೆಜ್ಜೆ ಹೆಜ್ಜೆಗೂ ಅನುಭವಿಸಬೇಕಾಗುತ್ತದೆ. ವೈದ್ಯರಿಗೆ ಮದ್ದಿಗೆ ಹಣ ಸುರಿಯಬೇಕಾಗುತ್ತದೆ. ಎಷ್ಟೋ ಹಣ ಹಾಳಾಗುತ್ತದೆ.

ಶರೀರವನ್ನೂ ಇಂದ್ರಿಯಗಳನ್ನೂ ವಶದಲ್ಲಿಟ್ಟುಕೊಳ್ಳುವ ಬದಲು ನಾವೇ ಅವುಗಳ ಗುಲಾಮರಾಗಿ ಹೆಳವರಂತೆ ಆಗುತ್ತೇವೆ. ಈ ಜಗತ್ತಿನಲ್ಲಿ ಒಬ್ಬನಾದರೂ ನಿರೋಗಿ ಮನುಷ್ಯನನ್ನು ನಾನು ಕಂಡಿಲ್ಲ ಎಂದು ಒಬ್ಬ ಅನುಭವಸ್ಥ ವೈದ್ಯ ಒಮ್ಮೆ ಹೇಳಿದ್ದ. ಸ್ವಾದದ ರುಚಿಯ ಸುಳಿಗೆ ಎಳ್ಳಷ್ಟಾದರೂ ಬಿದ್ದೆವೋ ಶರೀರ ಕೆಡುತ್ತದೆ. ಆ ಗಳಿಗೆಯಲ್ಲಿಯೆ ಆ ಮೈಗೆ ಉಪವಾಸ ಅಗತ್ಯವಾಯಿತು. ಅದೊಂದರಿಂದಲೇ ಮೈಯನ್ನು ಅಲ್ಪಸ್ವಲ್ಪ ಸರಿಪಡಿಸಲು ಸಾಧ್ಯ

ಈ ವಿಚಾರಸರಣಿಯನ್ನು ಓದಿ ಯಾರೂ ಗಾಬರಿಯಾಗಬಾರದು. ಅ-ಸ್ವಾದ ಎಷ್ಟು ಕಷ್ಟತರ ವ್ರತ ಎಂದು ಬೆದರಿ ವ್ರತ ತೊಡುವುದನ್ನೇ ಬಿಡಬೇಕಾದುದಿಲ್ಲ. ಯಾವುದಾದರೂ ವ್ರತವನ್ನು ತೊಟ್ಟರೆ, ಆ ಗಳಿಗೆಯಿಂದಲೆ ನಮಗೆ ಆ ವ್ರತವನ್ನು ಪೂರ್ಣವಾಗಿ ಪಾಲನೆಮಾಡಲು ಶಕ್ತಿಯಿದೆ ಎಂದು ಅರ್ಥವಲ್ಲ. ಆ ವ್ರತವನ್ನು ಪಾಲಿಸಲು ಕಾಯಾ ವಾಚಾ ಮನಸಾ ದೃಢವಾಗಿ ಸಾಯುವವರೆಗೂ ಪ್ರಯತ್ನ ಮಾಡುತ್ತೇವೆ ಎಂದರ್ಥ. ಒಂದು ವ್ರತ ಕಠಿನ ಎಂದು ಅದರ ಪರಿಭಾಷೆಯನ್ನು ಸಡಿಲಮಾಡಿ ಆತ್ಮವಂಚನೆ ಮಾಡಿಕೊಳ್ಳಬಾರದು. ನಮ್ಮ ಅನುಕೂಲತೆಗಾಗಿ ಆದರ್ಶವನ್ನು ಕೆಳಗೆ ನೂಕುವುದು ಅಸತ್ಯ ಆತ್ಮ ಪತನ. ಆದರ್ಶವನ್ನು ಅರಿತುಕೊಂಡು, ಅದು ಎಷ್ಟೇ ಕಠಿನವಾಗಿರಲಿ, ಅದನ್ನು ಸಾಧಿಸಲು ಮನಸಾರೆ ಪ್ರಯತ್ನಿಸುವುದೇ ಪರಮ ಅರ್ಥ, ಪುರುಷಾರ್ಥ. ಪುರುಷ ಎಂದರೆ ಮನುಷ್ಯ ಎಂದಷ್ಟೇ ಅಲ್ಲ, ಪುರ ಎಂದರೆ ಮೈ, ಈ ಮೈಯಲ್ಲಿ ಇರುವವನು ಪುರುಷ. ಯಾರು

ತ್ರಿಕಾಲದಲ್ಲಿಯೂ ಈ ಮಹಾವ್ರತಗಳನ್ನು ಸಂಪೂರ್ಣವಾಗಿ ಪಾಲಿಸುತ್ತಾನೋ ಅವನಿಗೆ ಈ ಲೋಕದಲ್ಲಿ ಮಾಡಬೇಕಾದುದೇನೂ ಇಲ್ಲ; ಅವನು ಮುಕ್ತ, ಭಗವಂತ, ನಾವು ಅಲ್ಪರು; ಮುಮುಕ್ಷು ಜಿಜ್ಞಾಸು, ಸತ್ಯಾಗ್ರಹಿಗಳು, ಸತ್ಯಶೋಧಕರು. ಆದುದರಿಂದ ಗೀತೆಯಲ್ಲಿ ಹೇಳಿದಂತೆ, ಕ್ರಮಕ್ರಮವಾಗಿ ಅಭ್ಯಾಸ ಮಾಡುತ್ತಲೇ ಇರಬೇಕು. ಹಾಗೆ ಸದಾ ಪ್ರಯತ್ನಶೀಲರಾಗಿದ್ದರೆ ಒಂದು ದಿನ ಭಗವಂತನ ಅನುಗ್ರಹಕ್ಕೆ ಪಾತ್ರ ರಾಗುತ್ತೇವೆ. ಆಗ ನಮ್ಮ ರಾಗ-ರುಚಿ ಎಲ್ಲವೂ ಸುಟ್ಟು ಬೂದಿಯಾಗುತ್ತವೆ.

ಇಪ್ಪತ್ತನಾಲ್ಕು ಗಂಟೆಯೂ ನಾವು ಆಹಾರದ ಯೋಚನೆ ಮಾಡುತ್ತಲೇ ಇರಬಾರದು, ಸದಾ ಸಾವಧಾನ, ಎಚ್ಚರ ಇದ್ದರಾಯಿತು; ಇದು ಬಹಳ ಅಗತ್ಯ. ಅದರಿಂದ ಬಹುಬೇಗ ನಾವು ರುಚಿಯ ಸುಳಿಗೆ ಯಾವಾಗ ಬಿದ್ದೆವೋ, ಶರೀರ ಪೋಷಣೆಗಾಗಿಯೇ ಯಾವಾಗ ತಿನ್ನುತ್ತೇವೋ ತಿಳಿಯು ತ್ತದೆ. ಇದು ತಿಳಿದಮೇಲೆ ದೃಢನಿಶ್ಚಯದಿಂದ ರುಚಿಯಾಗಿ ತಿನ್ನುವುದನ್ನು ನಿಲ್ಲಿಸಬೇಕು. ಈ ನಿಟ್ಟಿನಿಂದ ಆಲೋಚಿಸಿದರೆ ಅಸ್ವಾದ ದೃಷ್ಟಿಯಿಂದ ಸಾಮೂಹಿಕ ಭೋಜನಶಾಲೆ ನಮಗೆ ಬಹಳ ಸಹಾಯಕವಾಗುತ್ತದೆ. ಇದರಿಂದ ಏನು ಅಡಿಗೆ ಮಾಡಬೇಕು, ಏನು ತಿನ್ನಬೇಕು ಎಂಬ ಯೋಚ ಇಲ್ಲದಾಗುತ್ತದೆ. ಎಲೆಯಲ್ಲಿ ಬಡಿಸಿದುದು ಭಗವಂತನ ಕರುಣೆಯೆಂದು ತಿಳಿದು ಸಂತೋಷದಿಂದ ನಮ್ಮ ಮೈಗೆ ಎಷ್ಟು ಬೇಕೋ ಅಷ್ಟನ್ನೇ ತೆಗೆದು ಕೊಳ್ಳಬೇಕು. ಹೀಗೆ ಮಾಡಿದರೆ ಅನಾಯಾಸವಾಗಿ ಅಸ್ವಾದವ್ರತ ಪಾಲನೆ ಯಾಗುತ್ತದೆ. ಸಾಮೂಹಿಕ ಭೋಜನಶಾಲೆಯ ಯಜಮಾನ ನಮ್ಮ ಭಾರವನ್ನು ಹಗುರಮಾಡುತ್ತಾನೆ. ನಮ್ಮ ವ್ರತರಕ್ಷಕನಾಗುತ್ತಾನೆ. ರುಚಿಗಾಗಿ ಅಡಿಗೆ ಮಾಡದೆ, ಶರೀರಪೋಷಣೆಗಾಗಿ ಮಾತ್ರವೇ ಅಡಿಗೆ ಮಾಡುತ್ತಾನೆ. ಆದರ್ಶಸ್ಥಿತಿಯಲ್ಲಿ ನಿಜವಾಗಿ ಬೆಂಕಿಯೇ ಬೇಡ; ಸಹಸ್ರಾಗ್ನಿಯಾದ ಸೂರ್ಯಕಿರಣಗಳಿಂದ ಪಕ್ವವಾದ ಆಹಾರವೇ ಸರಿ. ನಿಜವಾಗಿ ನೋಡಿದರೆ ಮನುಷ್ಯ ಕೇವಲ ಫಲಾಹಾರಿಪ್ರಾಣಿ. ಆದರೆ ಇದು ಬಹಳ ಆಳವಾದ ಮಾತಾಯಿತು, ಈಗ ಅದು ಬೇಡ. ಅಸ್ವಾದ ಎಂದರೇನು, ಅದನ್ನು ಪಾಲಿಸಲು ಏನು ಅಡಚಣೆಗಳಿವೆ. ಬ್ರಹ್ಮಚರ್ಯ ಪಾಲನೆಗೂ ಅದಕ್ಕೂ ಎಷ್ಟು ನಿಕಟ ಸಂಬಂಧವಿದೆ ಎಂಬುದನ್ನು ತಿಳಿದುಕೊಂಡರೆ ಸಾಕು. ತಿಳಿದುಕೊಂಡು ಯಥಾಶಕ್ತಿ ಈ ವ್ರತದ ಪಾಲನೆ ಮಾಡಬೇಕು.

5. ಅಸ್ತೇಯ

ಮಂಗಳ ಪ್ರಭಾತ, ೧೬–೯–೧೯೩೦

ಈಗ ಅಸ್ತೇಯವ್ರತ, ಹಿಂದಿನ ಎರಡು ವ್ರತಗಳಂತೆ ಇದೂ ಸತ್ಯ-ಅಹಿಂಸೆ ಅಥವಾ ಸತ್ಯದ ಗರ್ಭದಲ್ಲಿಯೇ ಅಡಗಿದೆ.*

ಸತ್ಯದಿಂದ ಅಹಿಂಸೆ ಹುಟ್ಟಿತು ಎನ್ನಬೇಕು. ಇಲ್ಲವೆ ಅವೆರಡೂ ಜೊತೆ ಎನ್ನಬೇಕು. ಎರಡೂ ಒಂದೇ ವಸ್ತು. ಆದರೂ ನನ್ನ ಮನಸ್ಸು ಸತ್ಯದ ಕಡೆಗೇ. ಕಟ್ಟಕಡೆಗಂತೂ ಎರಡೂ ಇಲ್ಲ. ದ್ವಂದ್ವಕ್ಕೆ ಅತೀತ ಪರಮ ಸತ್ಯ ಒಂಟಿಯಾಗಿಯೇ ನಿಲ್ಲುತ್ತದೆ. ಸತ್ಯ ಗುರಿ--ಅಹಿಂಸೆ ದಾರಿ. ಅದರ ಪಾಲನೆ ಕಠಿಣವಾದರೂ ಅಹಿಂಸೆ ಎಂದರೇನೋ ನಮಗೆ ಗೊತ್ತಿದೆ. ಆದರೆ ಸತ್ಯದ ಅಂಶ ಮಾತ್ರವೆ ಗೊತ್ತು. ಸತ್ಯದ ಸಂಪೂರ್ಣ ಜ್ಞಾನವೂ ದೇಹಧಾರಿಗೆ ಬಹಳ ಕಠಿನ, ಅಹಿಂಸೆಯ ಸಂಪೂರ್ಣ ಪಾಲನೆಯೂ ಕಠಿನ.

ಅಸ್ತೇಯ ಎಂದರೆ ಕದಿಯದಿರುವುದು. ಕಳ್ಳತನ ಮಾಡುವವನಿಗೆ ಸತ್ಯ ಗೊತ್ತಿದೆ. ಅವನು ಅಹಿಂಸೆಯನ್ನು ಪಾಲಿಸಬಲ್ಲ ಎಂಬುದು ಸಾಧ್ಯವಿಲ್ಲ. ಆದರೂ ನಾವೆಲ್ಲರೂ ತಿಳಿದೋ ತಿಳಿಯದೆಯೋ ಸ್ವಲ್ಪ ಕಳ್ಳತನದ ದೋಷಕ್ಕೆ ಗುರಿಯಾಗುತ್ತೇವೆ. ಪರರ ಒಡವೆಯನ್ನು ಅವರ ಅಪ್ಪಣೆಯಿಲ್ಲದೆ ತೆಗೆದುಕೊಳ್ಳುವುದು ಕಳ್ಳತನ. ತನ್ನದು ಎಂಬ ಪದಾರ್ಥವನ್ನೂ ಮನುಷ್ಯ ಕದಿಯುತ್ತಾನೆ : ತನ್ನ ಮಕ್ಕಳಿಗೆ ಗೊತ್ತಾಗದಂತೆ ಮರೆಯಾಗಿ ಗುಟ್ಟಾಗಿ ಒಬ್ಬ ತಂದೆ

* ಹೀಗೆ ಅದನ್ನು ತೋರಿಸಬಹುದು :

ಸತ್ಯ → **ಅಹಿಂಸೆ** ಅಥವಾ **ಸತ್ಯ** — **ಅಹಿಂಸೆ**

ಬ್ರಹ್ಮಚರ್ಯ | ಅಸ್ವಾದ | ಅಸ್ತೇಯ | ಅಪರಿಗ್ರಹ | ಅಭಯ | ಅಸ್ಪೃಶ್ಯತಾ ನಿವಾರಣೆ | ಸರ್ವಧರ್ಮ ಸಮಭಾವ | ಇತ್ಯಾದಿ.

ಒಂದು ಪದಾರ್ಥವನ್ನು ತಿನ್ನುತ್ತಾನೆ. ಆಶ್ರಮದ ಉಗ್ರಾಣ ಎಲ್ಲರಿಗೂ ಸೇರಿದುದು. ಆದರೆ ಅದರೊಳಗಿಂದ ಒಂದು ಅಚ್ಚು ಬೆಲ್ಲವನ್ನು ಗುಟ್ಟಾಗಿ

ಯಾರಾದರೂ ತೆಗೆದುಕೊಂಡರೆ ಅವನು ಕಳ್ಳ, ಒಬ್ಬ ಹುಡುಗ ಇನ್ನೊಬ್ಬನ ಲೇಖನಿಯನ್ನು ತೆಗೆದಿಟ್ಟುಕೊಂಡರೆ ಅವನು ಕಳವು ಮಾಡಿದ. ಯಾರ ಪದಾರ್ಥವನ್ನಾದರೂ, ಅವರಿಗೆ ಗೊತ್ತಾಗಿದ್ದರೂ ಅವರ ಅಪ್ಪಣೆಯಿಲ್ಲದೆ ನಾವು ತೆಗೆದುಕೊಂಡರೆ ಅದು ಕಳ್ಳತನ. ಒಂದು ಪದಾರ್ಥವನ್ನು ಇದು ಯಾರದೂ ಅಲ್ಲ ಎಂದು ನಾವು ತೆಗೆದುಕೊಳ್ಳುವುದೂ ಕಳವೇ. ದಾರಿಯಲ್ಲಿ ಬಿದ್ದಿರುವ ಪದಾರ್ಥಕ್ಕೆ ನಾವು ಒಡೆಯರಲ್ಲ, ಸರಕಾರ. ಆಶ್ರಮದ ಸುತ್ತ ಏನಾದರೂ ದೊರೆತರೆ ಅದನ್ನು ಆಶ್ರಮದ ಕಾರ್ಯದರ್ಶಿಗೆ ಒಪ್ಪಿಸಬೇಕು. ಅದು ಆಶ್ರಮದ್ದಲ್ಲದಿದ್ದರೆ ಆತ ಅದನ್ನು ಪೋಲೀಸರಿಗೆ ಒಪ್ಪಿಸುತ್ತಾನೆ.

ಇಲ್ಲಿಯವರೆಗೆ ಎಲ್ಲವನ್ನೂ ಸಹಜವಾಗಿ ತಿಳಿದುಕೊಳ್ಳಬಹುದು. ಆದರೆ ಅಸ್ತೇಯ ಇದಕ್ಕಿಂತ ಬಹಳ ಮುಂದೆ ಹೋಗಿದೆ. ಒಬ್ಬರಿಂದ ಒಂದು ಪದಾರ್ಥವನ್ನು ಕೇಳಿಯೇ ತೆಗೆದುಕೊಂಡರೂ ಅದು ನಮಗೆ ಅಗತ್ಯವಲ್ಲದುದಾದರೆ ಕಳ್ಳತನ. ಅನಾವಶ್ಯಕವಾದ ವಸ್ತು ಒಂದನ್ನೂ ತೆಗೆದುಕೊಳ್ಳಬಾರದು ಆಹಾರದ ವಿಷಯದಲ್ಲಿ ಈ ಬಗೆಯ ಕಳ್ಳತನ ಹೆಚ್ಚು. ನನಗೆ ಒಂದು ಹಣ್ಣು ಅಗತ್ಯವಿಲ್ಲ. ಆದರೂ ಅದನ್ನು ತೆಗೆದುಕೊಳ್ಳುತ್ತೇನೆ ಅಥವಾ ನನಗೆ ಬೇಕಾದುದಕ್ಕಿಂತ ಹೆಚ್ಚು ತೆಗೆದುಕೊಳ್ಳುತ್ತೇನೆ. ಅದು ಕಳ್ಳತನ. ತನಗೆ ಎಷ್ಟು ಬೇಕು ಎಂಬುದು ಮನುಷ್ಯನಿಗೆ ಯಾವಾಗಲೂ ಗೊತ್ತಿಲ್ಲ. ನಾವೆಲ್ಲರು ಪ್ರಾಯಶಃ ನಮಗೆ ಬೇಕಾದುದಕ್ಕಿಂತ ಹೆಚ್ಚಾಗಿಯೇ ತೆಗೆದುಕೊಳ್ಳುತ್ತೇವೆ. ಹೆಚ್ಚು ಅಗತ್ಯವನ್ನು ಹುಟ್ಟಿಸುತ್ತೇವೆ. ಅದರಿಂದ ಕಳ್ಳರಾಗುತ್ತೇವೆ. ವಿಚಾರ ಮಾಡಿದರೆ ನಮ್ಮ ಅವಶ್ಯಕತೆಗಳನ್ನು ಎಷ್ಟನ್ನೋ ಬಿಡಬಹುದು. ಅಸ್ತೇಯ ವ್ರತವನ್ನು ಪಾಲಿಸುವವನು ಕ್ರಮೇಣ ತನ್ನ ಅವಶ್ಯಕತೆಗಳನ್ನು ತಗ್ಗಿಸುತ್ತಾನೆ. ಜಗತ್ತಿನಲ್ಲಿರುವ ಬಡತನ ಹೆಚ್ಚು ಭಾಗ ಅಸ್ತೇಯವ್ರತಭಂಗದಿಂದಲೇ ಬಂದಿದೆ.

ಮೇಲೆ ಹೇಳಿದುದೆಲ್ಲ ಶಾರೀರಕ ಅಥವಾ ಹೊರಗಣ ಕಳ್ಳತನ. ಇದಕ್ಕಿಂತ ಸೂಕ್ಷ್ಮವಾದ, ಆತ್ಮವನ್ನು ಕೆಳಗೆ ಉರುಳಿಸುವ ಕಳ್ಳತನವೂ ಇದೆ ಮಾನಸಿಕವಾದದ್ದು. ಪರರ ವಸ್ತುವನ್ನು ನಾವು ಪಡೆಯಬೇಕೆಂಬ ಬಯಕೆಯೆ ಅದನ್ನು ಆಸೆಗಣ್ಣಿನಿಂದ ನೋಡುವುದೇ ಕಳ್ಳತನ. ಉಪವಾಸ ಮಾಡುವವನು ಬಾಯಿಂದ ಏನನ್ನೂ ತಿನ್ನ. ಆದರೆ ಇತರರು ತಿನ್ನುವುದನ್ನು ನೋಡಿ

ಒಳಗೇ ರುಚಿಯನ್ನು ಸವಿದರೆ ಅವನು ಕಳುವು ಮಾಡಿದ. ತನ್ನ ಉಪವಾಸ ವ್ರತ ಭಂಗ ಮಾಡಿದ. ಉಪವಾಸ ಮುಗಿದಮೇಲೆ ಪಾರಣೆಗೆ ಏನು ಊಟ ಮಾಡಬೇಕು ಎಂದು ಯೋಚಿಸುವ ಉಪವಾಸಿ ವ್ರತಭಂಗವನ್ನೂ ಮಾಡಿದ, ಕಳವನ್ನೂ ಮಾಡಿದ.

ಅಸ್ತೇಯವ್ರತ ಪಾಲನೆ ಮಾಡುವವನು ಮುಂದೆ ಲಭಿಸಬಹುದಾದ ಪದಾರ್ಥಗಳ ಚಿಂತೆ ಮಾಡ. ಈ ಭವಿಷ್ಯದ ಆಸೆಯೇ ಅನೇಕ ಕಳ್ಳತನಗಳ ಬೀಜ. ಇಂದು ಬರೀ ವಿಚಾರ, ನಾಳೆ ಆ ಪದಾರ್ಥವನ್ನು ಗಳಿಸುವ ಪ್ರಯತ್ನ ಅದಕ್ಕಾಗಿ ಒಳ್ಳೆಯದು, ಕೆಟ್ಟದು ಎಲ್ಲಾ ದಾರಿಯೂ ಸರಿಯಾಗಿಯೇ ಕಾಣುತ್ತದೆ.

ಪದಾರ್ಥಗಳ ಕಳ್ಳತನವಿದ್ದಂತೆ ವಿಚಾರದ ಕಳವೂ ಇದೆ. ತನ್ನ ಮನಸ್ಸಿನಲ್ಲಿಯೇ ಉತ್ತಮ ವಿಚಾರವೊಂದು ಹುಟ್ಟದಿದ್ದರೂ ಅಹಂಕಾರದಿಂದ ಇದು ನನ್ನ ವಿಚಾರ ಎನ್ನುವವನು ವಿಚಾರಗಳ್ಳ. ಲೋಕದಲ್ಲಿ ಇಂಥ ಕಳವನ್ನು ಅನೇಕ ಜನ ವಿದ್ವಾಂಸರೂ ಮಾಡಿದ್ದಾರೆ. ಈಗಲೂ ಈ ವಿಚಾರಚೌರ್ಯ ಕಡಿಮೆಯಿಲ್ಲ. ಆಂಧ್ರಪ್ರದೇಶದಲ್ಲಿ ನಾನೊಂದು ಹೊಸ ಮಾದರಿ ರಾಟಿನೆಯನ್ನು ನೋಡಿದೆ ಎನ್ನಿ. ಅದು ನಾನೇ ಕಂಡುಹಿಡಿದದು ಎಂದು ಆಶ್ರಮದಲ್ಲಿ ಅದನ್ನು ಮಾಡಿಸತೊಡಗಿದರೆ ಅದು ಕಳ್ಳತನ. ನಾನು ಅಸತ್ಯವನ್ನು ಹಿಡಿದೆ.

ಆದುದರಿಂದ ಅಸ್ತೇಯವ್ರತವನ್ನು ಪಾಲಿಸುವವನು ಬಹಳ ನಮ್ರ, ಬಹಳ ವಿಚಾರಶೀಲ, ಬಹಳ ಸಾವಧಾನಿ, ಬಹಳ ಸರಳ ಆಗಿರಬೇಕು.

6. ಅಪರಿಗ್ರಹ

ಮಂಗಳ ಪ್ರಭಾತ, ೨೬–೮–೧೯೩೦

ಅಪರಿಗ್ರಹ ಅಸ್ತೇಯಕ್ಕೇ ಸಂಬಂಧಿಸಿದುದು, ನಿಜವಾಗಿ ಕದ್ದ ಪದಾರ್ಥವಲ್ಲದಿದ್ದರೂ ಅನಗತ್ಯವಾಗಿ ಸಂಗ್ರಹಿಸಿಟ್ಟುಕೊಂಡರೆ ಅದು ಕಳವು ಪದಾರ್ಥದ ಹಾಗೆಯೇ, ಪರಿಗ್ರಹ ಎಂದರೆ ಭವಿಷ್ಯಕ್ಕಾಗಿ ಕೂಡಿಸಿಡುವುದು. ಸತ್ಯಶೋಧಕ ಅಹಿಂಸಕ, ಪರಿಗ್ರಹ ಮಾಡಲಾರ, ಪರಮಾತ್ಮ ಪರಿಗ್ರಹ ಮಾಡ ; ನಾಳೆಗಾಗಿ ಏನೂ ತೆಗೆದಿಡ. ತನಗೆ ಬೇಕಾದ ವಸ್ತುವನ್ನು ಅಂದಂದೆ ಉತ್ಪತ್ತಿ

ಮಾಡಿಕೊಳ್ಳುತ್ತಾನೆ. ನಮಗೆ ಆ ಪರಮಾತ್ಮನಲ್ಲಿ ವಿಶ್ವಾಸವಿದ್ದ ಪಕ್ಷದಲ್ಲಿ, ನಮಗೆ ಅಗತ್ಯವಾದ ಪದಾರ್ಥಗಳನ್ನು ಅವನು ದಿನವೂ ಕೊಡುತ್ತಾನೆ ಎಂದು ಅರಿಯಬೇಕು. ಈ ವಿಶ್ವಾಸದಿಂದ ಬದುಕಿ ಬಾಳಿದ ಶರಣರ, ಭಕ್ತರ ಅನುಭವ ಇದು. ದಿನದಿನಕ್ಕೆ ಆವಶ್ಯಕವಿದ್ದಷ್ಟನ್ನೇ ದಿನದಿನವೂ ಉತ್ಪನ್ನ ಮಾಡುವುದು ಈಶ್ವರೀಯ ನಿಯಮ. ಇದನ್ನು ನಾವು ಅರಿತಿಲ್ಲ. ಅರಿತಿದ್ದರೂ ಅಸಡ್ಡೆ ಮಾಡಿದೇವೆ. ಇದರಿಂದ ಜಗತ್ತಿನಲ್ಲಿ ವಿಷಮತೆ ಹುಟ್ಟಿದೆ ; ಅದರಿಂದ ಸಾವಿರ ಸಂಕಟ–ದುಃಖಗಳನ್ನು ಅನುಭವಿಸುತ್ತಿದೇವೆ. ಶ್ರೀಮಂತರ ಬಳಿ ಅವರಿಗೆ ಅಗತ್ಯವಿಲ್ಲದ ಎಷ್ಟೋ ಪದಾರ್ಥ ಕಿಕ್ಕಿರಿ ತುಂಬಿರುತ್ತದೆ. ಅದೆಲ್ಲವೂ ಅತ್ತ ಬಿಸುಟು ಇತ್ತ ಎಸೆದು ಹಾಳಾಗಿಹೋಗುತ್ತದೆ. ಆ ಪದಾರ್ಥಗಳ ಅಭಾವದಿಂದ ಇತ್ತ ಕೊಟ್ಯಾಂತರ ಜನ ಅಂಡಲೆದು ಹಸಿವಿನಿಂದ ಚಳಿಯಿಂದ ಕಂಗೆಟ್ಟು ಸಾಯುತ್ತಾರೆ. ಪ್ರತಿಯೊಬ್ಬರೂ ತನಗೆಷ್ಟು ಬೇಕೋ ಅಷ್ಟನ್ನೇ ಸಂಗ್ರಹಿಸಿದರೆ ಯಾರಿಗೂ ಕೊರತೆಯಾಗದು. ಎಲ್ಲರಿಗೂ ಸಂತೋಷವಾದೀತು. ಈಗ ಇಬ್ಬರಿಗೂ ಅತೃಪ್ತಿ, ಅಭಾವ. ಲಕ್ಷಾಧಿಪತಿ ಕೋಟೀಶ್ವರನಾಗಬೇಕೆನ್ನುತ್ತಾನೆ; ಬಡವ ಲಕ್ಷಾಧೀಶನಾಗಲು ಬಯಸುತ್ತಾನೆ, ಒಪ್ಪತ್ತಿನ ಊಟ ಹೊಟ್ಟೆ ತುಂಬಾ ದೊರಕಿತಲ್ಲ ಎಂಬ ಸಂತೋಷ ಬಡವನಿಗಿಲ್ಲ; ಲಕ್ಷ ಇದೆಯಲ್ಲ ಎಂಬ ತೃಪ್ತಿ ಹಣಗಾರನಿಗಿಲ್ಲ. ಬಡವನಿಗೆ ಹೊಟ್ಟೆ ತುಂಬಾ ಅನ್ನ ಸಿಗಬೇಕು. ಅವನಿಗೆ ಅನ್ನ ಸಿಗುವಂತೆ ಮಾಡಬೇಕಾದುದು ಸಮಾಜದ ಧರ್ಮ. ಅದಕ್ಕಾಗಿಯೂ ತನ್ನ ಆತ್ಮಸಂತೋಷಕ್ಕಾಗಿಯೂ ಶ್ರೀಮಂತ ಮುನ್ನೆಜ್ಜೆ ಹಾಕಬೇಕು. ತನ್ನ ಅತ್ಯಂತ ಪರಿಗ್ರಹವನ್ನು ತ್ಯಜಿಸಿದರೆ ಬಡವನಿಗೆ ಅತ್ಯಗತ್ಯವಾದುದು ಸುಲಭವಾಗಿ ದೊರೆತು ಇಬ್ಬರೂ ತೃಪ್ತಿಯ ಪಾಠ ಕಲಿಯಬಹುದು. ಮನಸ್ಸಿನಿಂದಲೂ ಕರ್ಮದಿಂದಲೂ ದಿಗಂಬರನಾದವನು, ಹಕ್ಕಿಯಂತೆ ಇರಲು ನೆಲೆ, ಉಡಲು ಬಟ್ಟೆ ಉಣಲು ನಾಳೆಗೆ ಹಿಟ್ಟು ಇಲ್ಲದವನು ಆದರ್ಶ ಆತ್ಯಂತಿಕ ಅಪರಿಗ್ರಹಿ. ಅಂಥವನಿಗೆ ನಿತ್ಯ ಯಾತ್ರೆಗೆ ಬೇಕಾದ ಅನ್ನವನ್ನು ಭಗವಂತ ಒದಗಿಸುತ್ತಾನೆ. ಅವನದು ಆ ಚಿಂತೆ. ಇಂಥ ಅವಧೂತ ಅವಸ್ಥೆಯನ್ನು ಮುಟ್ಟುವವರು ಲೋಕದಲ್ಲಿ ಬಹಳ ವಿರಳ. ಆದರೆ ಸಾಧಾರಣ ತರದ ಸಾಧಕರು ಸತ್ಯಾಗ್ರಹಿಗಳು ಈ ಆದರ್ಶ ಅಸಾಧ್ಯ ಎಂದು ಬೆದರಬೇಕಾಗಿಲ್ಲ. ಆದರ್ಶವನ್ನು ಸದಾ ಲಕ್ಷ್ಯದಲ್ಲಿಟ್ಟು

ದಿನದಿನವೂ ನಮ್ಮ ಪರಿಗ್ರಹವೃತ್ತಿಯನ್ನು ಪರೀಕ್ಷಿಸುತ್ತ, ಸ್ವಲ್ಪ ಸ್ವಲ್ಪವಾಗಿ ಅದನ್ನು ತಗ್ಗಿಸುತ್ತ ಬರಬೇಕು. ಪರಿಗ್ರಹವನ್ನು ಹೆಚ್ಚಿಸುವುದಲ್ಲ ನಿಜವಾದ ಸಭ್ಯತೆಯ, ಸಂಸ್ಕೃತಿಯ ಲಕ್ಷಣ ; ವಿಚಾರಪೂರ್ವಕ ಇಚ್ಛಾಪೂರ್ವಕ ಅದನ್ನು ತಗ್ಗಿಸಿದಂತೆಲ್ಲ ನಿಜವಾದ ಸುಖ–ಸಂತೋಷ ಹೆಚ್ಚುತ್ತದೆ. ಈ ರೀತಿ ವಿಚಾರಮಾಡಿದರೆ, ಆಚರಣೆ ಮಾಡಿದರೆ, ಆಶ್ರಮದಲ್ಲಿ ನಮಗೆ ಅಗತ್ಯವೆಂದು ಹೇಳಲು ಬಾರದ ಎಷ್ಟೋ ಪದಾರ್ಥಗಳನ್ನು ನಾವು ಸಂಗ್ರಹಿಸಿದೇವೆ ಎಂಬುದು ಕಾಣಬರುತ್ತದೆ. ಇಂಥ ಅನಾವಶ್ಯಕ ಪರಿಗ್ರಹದಿಂದ ನಮ್ಮ ನೆರೆಯವರಿಗೆ ಕದಿಯುವ ಬುದ್ಧಿಯನ್ನು ಹುಟ್ಟಿಸುತ್ತೇವೆ. ಅಭ್ಯಾಸದಿಂದ ಮನುಷ್ಯ ತನ್ನ ಅಗತ್ಯಗಳನ್ನು ತಗ್ಗಿಸಬಲ್ಲ; ತಗ್ಗಿಸಿದಷ್ಟು ಅವನಿಗೆ ಸುಖ-ಶಾಂತಿ ಸಿಗುತ್ತದೆ; ಎಲ್ಲ ಬಗೆಯಿಂದಲೂ ಆರೋಗ್ಯವಂತನಾಗುತ್ತಾನೆ.

ಕೇವಲ ಸತ್ಯದ, ಆತ್ಮದ ದೃಷ್ಟಿಯಿಂದ ನೋಡಿದರೆ ಈ ಶರೀರವೂ ಒಂದು ಪರಿಗ್ರಹವೇ. ಭೋಗದಾಸೆಯೇ ಆತ್ಮಕ್ಕೆ ಶರೀರವನ್ನು ಅಂಟಿಸುತ್ತದೆ. ಅದನ್ನು ನೆಲೆಯಾಗಿ ನಿಲ್ಲಿಸುತ್ತದೆ. ಭೋಗದಾಸೆ ಬಹಳ ಕ್ಷೀಣವಾದರೆ ಶರೀರದ ಅಗತ್ಯವಿಲ್ಲವಾಗುತ್ತದೆ. ಆತ್ಮ ಸರ್ವವ್ಯಾಪಕ. ಸ್ಪೈಯ ಪಂಜರದಲ್ಲಿ ಆತ್ಮವೇಕೆ ಬಿದ್ದಿರಬೇಕು ? ಈ ಪಂಜರವನ್ನು ಕಟ್ಟಿಡಲು ಏಕೆ ಅನರ್ಥ ಮಾಡಬೇಕು ? ಇತರರನ್ನು ಕೊಲ್ಲಬೇಕೆ ? ಹೀಗೆ ವಿಚಾರಮಾಡುತ್ತ ನಾವು ಆತ್ಯಂತಿಕ ತ್ಯಾಗದ ಬಳಿಗೆ ತಲುಪುತ್ತೇವೆ. ಶರೀರವಿರುವವರೆಗೆ ಅದನ್ನು ಬರೀ ಸೇವೆಗಾಗಿಯೆ ಉಪಯೋಗಿಸಲು ಕಲಿಯುತ್ತೇವೆ. ಅನ್ನವಲ್ಲ-ಸೇವೆಯೇ ಶರೀರದ ನಿಜವಾದ ಆಹಾರವಾಗಿಬಿಡುತ್ತದೆ. ಆಗ ನಾವು ತಿಂದರೂ, ಕುಡಿದರೂ, ಮಲಗಿದರೂ ಎದ್ದಿದ್ದರೂ ಎಲ್ಲವೂ ಸೇವೆಗಾಗಿಯೇ. ಅದರಿಂದ ಬರುವ ಸುಖ ನಿಜವಾದ ಸುಖ. ಹೀಗೆ ಮಾಡುತ್ತಿದ್ದರೆ ಕಟ್ಟಕಡೆಗೆ ಮನುಷ್ಯನಿಗೆ ಸತ್ಯದರ್ಶನವಾಗುತ್ತದೆ. ಈ ದೃಷ್ಟಿಯಿಂದ ನಾವೆಲ್ಲರೂ ಪರಿಗ್ರಹವನ್ನು ಕುರಿತು ಯೋಚನೆ ಮಾಡಬೇಕು.

ವಸ್ತುಗಳಿಗಿದ್ದಂತೆ ವಿಚಾರಗಳಲ್ಲಿಯೂ ಅಪರಿಗ್ರಹವಿರಬೇಕು ; ಇಷ್ಟು ನೆನಪಿಟ್ಟರೆ ಸರಿ, ತನ್ನ ಮೆದುಳಿನಲ್ಲಿ ನಿರರ್ಥಕ ಜ್ಞಾನವನ್ನು ತುಂಬಿಕೊಳ್ಳುವ ಮನುಷ್ಯ ಪರಿಗ್ರಹಿ. ಅವನು ಅಪರಿಗ್ರಹ ವ್ರತಭಂಗಮಾಡಿದ. ಈಶ್ವರ ವಿಮುಖವಾದ ವಿಚಾರ, ಈಶ್ವರನ ಕಡೆ ಒಯ್ಯದ ವಿಚಾರ ಎಲ್ಲವೂ ಪರಿಗ್ರಹ

ದಲ್ಲಿ ಬರುತ್ತವೆ. ಅವು ತ್ಯಾಜ್ಯ. ಈ ಸಂದರ್ಭದಲ್ಲಿ ಗೀತೆಯ ೧೦ನೆ ಅಧ್ಯಾಯದಲ್ಲಿ ಭಗವಂತ ಬಳಸಿರುವ ಜ್ಞಾನದ ಪರಿಭಾಷೆಯನ್ನು ನೆನಪಿಡುವುದು ಯೋಗ್ಯ. ಅಮಾನಿತ್ವ ಇತ್ಯಾದಿ ಗುಣಗಳನ್ನು ಹೇಳಿ ಉಳಿದವೆಲ್ಲ ಅಜ್ಞಾನ ಎಂದಿದ್ದಾನೆ. ಇದು ಸತ್ಯವಾದರೆ ನಿಸ್ಸಂದೇಹವಾಗಿ ಇದು ಸತ್ಯ-ಇಂದು ನಾವು ಜ್ಞಾನವೆಂದು ಕೂಡಿಹಾಕುವುದರಲ್ಲಿ ಬಹಳ ಮಟ್ಟಿಗೆ ಅಜ್ಞಾನವೇ. ಅದರಿಂದ ಲಾಭಕ್ಕಿಂತ ಹಾನಿಯೇ ಹೆಚ್ಚು. ಅದರಿಂದ ತಲೆ ತಿರುಗುತ್ತದೆ. ಬುದ್ಧಿ ಬಳಲುತ್ತದೆ. ಕಡೆಗೆ ಬರೀ ಶೂನ್ಯ. ಅತೃಪ್ತಿ [illegible] ಅನರ್ಥ ಹೆಚ್ಚುತ್ತದೆ. ಇದರಿಂದ ಸೋಮಾರಿಗಳಾಗಬೇಕೆಂದು ಅರ್ಥವಲ್ಲ. ಗಳಿಗೆ ಗಳಿಗೆಯೂ ಪ್ರವೃತ್ತಿಮಯ. ಕರ್ಮಮಯ ಆಗಬೇಕು. ಈ ಪ್ರವೃತ್ತಿ ಸಾತ್ತ್ವಿಕವಾಗಬೇಕು, ಸತ್ಯದತ್ತ ಒಯ್ಯುವಂಥದಾಗಬೇಕು. ಸೇವಾಧರ್ಮವನ್ನು ಸ್ವೀಕರಿಸಿದವನು ಒಂದು ಗಳಿಗೆಯೂ ಸೋಮಾರಿಯಾಗಿರಲಾರ. ಆದರೆ ಮನುಷ್ಯ ಸಾರಾಸಾರ ವಿವೇಕವನ್ನು ಕಲಿಯಬೇಕು. ಸೇವಾಪರಾಯಣನಿಗೆ ಈ ವಿವೇಕ ಸಹಜಪ್ರಾಪ್ತ.

7. ಅಭಯ

ಮಂಗಳ ಪ್ರಭಾತ, ೨-೯-೧೯೩೦

ಗೀತೆಯ ಹದಿನಾರನೆಯ ಅಧ್ಯಾಯದಲ್ಲಿ ದೈವೀಸಂಪತ್ತಿಯ ವರ್ಣನೆ ಮಾಡುವಾಗ ಭಗವಂತ ಎಲ್ಲಕ್ಕೂ ಮೊದಲನೆ ಗುಣವಾಗಿ ಅಭಯವನ್ನು ಹೇಳಿದ್ದಾನೆ. ಆ ಶ್ಲೋಕದ ಛಂದಸ್ಸಿನ ಸೌಕರ್ಯಕ್ಕಾಗಿ ಈ ಗುಣ ಅಲ್ಲಿ ಬಂದಿದೆಯೋ, ಅಭಯಕ್ಕೆ ಪ್ರಥಮಸ್ಥಾನ ಕೊಡಬೇಕೆಂದೇ ಅಲ್ಲಿ ಹೇಳಿದ್ದಾರೋ ನನಗೆ ಈ ವಾದ ಬೇಕಾಗಿಲ್ಲ. ಅದನ್ನು ನಿರ್ಣಯಿಸುವ ಯೋಗ್ಯತೆಯೂ ನನಗಿಲ್ಲ. ಏನೇ ಇರಲಿ, ಅಭಯಕ್ಕೆ ದೊರೆತ ಈ ಪ್ರಥಮ ಸ್ಥಾನ ಬಹಳ ಉಚಿತವಾದದು. ಏಕೆಂದರೆ, ಅಭಯವಿಲ್ಲದೆ ಸತ್ಯ ಶೋಧನೆ, ಅಹಿಂಸಾ ಪಾಲನೆ ಹೇಗೆ ಸಾಧ್ಯ? ಪ್ರೀತಮ ಹೇಳುವಂತೆ 'ದೇವರ ದಾರಿ ಧೀರರದು. ಹೇಡಿಗಳದಲ್ಲ'. ಹರಿ ಎಂದರೆ ಸತ್ಯ. ಸತ್ಯವೇ ಹೇಡಿಯೆಂದರೆ ಅಂಜುಗುಳಿ. ಭಯಭೀತ. ಧೀರ ಎಂದರೆ ಭಯರಹಿತ, ಕತ್ತಿ ಕಠಾರಿ ಹಿಡಿಯುವ ವೀರ. ಕತ್ತಿ ಶೌರ್ಯದ ಗುರುತಲ್ಲ, ಹೇಡಿತನದ ಗುರುತು.

ಅಭಯ ಎಂದರೆ ಹೊರಗಣ ಸಮಸ್ತ ಭಯದಿಂದಲೂ ಮುಕ್ತಿ. ಸಾವಿನ ಭಯ, ಹಣ-ಸೊತ್ತು ಲೂಟಿಯಾದೀತೆಂಬ ಭಯ, ರೋಗಭಯ, ಏಟಿನ ಭಯ, ಗೌರವ ಹಾನಿಯ ಭಯ, ಯಾರನ್ನು ನೋಯಿಸಿದೆವೊ ಎಂಬ ಭಯ ಹೀಗೆ ಎಷ್ಟೋ ಬಗೆಯ ಭಯ ಇವೆ. ಸಾಮಾನ್ಯವಾಗಿ ಸಾವಿನ ಭಯವನ್ನು ಗೆದ್ದರೆ ಎಲ್ಲಾ ಭಯವನ್ನೂ ಗೆದ್ದಂತೆ ಎನ್ನುತ್ತಾರೆ. ಇದು ಸರಿಯಲ್ಲ. ಸಾವಿನ ಭಯವನ್ನು ಬಿಟ್ಟವರು ಎಷ್ಟೋ ಜನ ಉಳಿದ ಭಯಗಳಿಗೆ ತುತ್ತಾಗುತ್ತಾರೆ. ತಾನು ಸಾಯಲು ಸಿದ್ಧನಾದವನು ಸ್ವಜನ–ಸುಹೃದರ ವಿಯೋಗವನ್ನು ಸಹಿಸಲಾರ. ಒಬ್ಬ ಲೋಭಿ ಅನ್ನವೆಲ್ಲವನ್ನೂ ಬಿಟ್ಟಾನು, ಶರೀರವನ್ನೂ ಬಿಟಾನು; ಹಣವನ್ನು ಬಿಡು ಎಂದರೆ ಗಾಬರಿಯಾದಾನು. ತಾವು ಪ್ರತಿಷ್ಠೆ-ಗೌರವ ಎಂದು ತಿಳಿದುದನ್ನು ಉಳಿಸಿಕೊಳ್ಳಲು ಅನೇಕರು ನಾನಾ ದುಷ್ಕಾರ್ಯಗಳನ್ನು ಮಾಡುತ್ತಾರೆ. ಲೋಕಾಪವಾದಕ್ಕೆ ಅಂಜಿ ಅನೇಕರು ತಮಗಿದು ಸರಿಯಾದ ದಾರಿ ಎಂದು ತಿಳಿದಿದ್ದರೂ ಹಿಂದೆ ಮುಂದೆ ನೋಡುತ್ತಾರೆ. ಸತ್ಯವನ್ನು ಹುಡುಕಲು ಬಯಸುವವನು ಈ ಭಯಗಳಿಗೆಲ್ಲ ತಿಲಾಂಜಲಿ ಕೊಡಬೇಕು. ಸತ್ಯ ಶೋಧನೆಗಾಗಿ ಹರಿಶ್ಚಂದ್ರನಂತೆ ತನ್ನ ಸರ್ವಸ್ವವನ್ನೂ ಅರ್ಪಿಸಲು ಸಿದ್ಧನಾಗಬೇಕು. ಹರಿಶ್ಚಂದ್ರನ ಕಥೆ ಕಟ್ಟುಕಥೆಯೇ ಆಗಿರಬಹುದು. ಆತ್ಮಾರ್ಥಿಗಳಾದ ಪ್ರತಿಯೊಬ್ಬರಿಗೂ ಅ ಅನುಭವವಾಗಿದೆ. ಆದುದರಿಂದ ಐತಿಹಾಸಿಕ ಕಥೆಗಳಿಗಿಂತಲೂ ಈ ಕಥೆಯ ಬೆಲೆ ಅನಂತಗುಣ ಹೆಚ್ಚು. ಎಲ್ಲರೂ ಮನನಮಾಡಲು ಯೋಗ್ಯವಾಗಿದೆ.

ಅಭಯ ವ್ರತದ ಪರಿಪೂರ್ಣ ಪಾಲನೆ ಬಹುಶಃ ಅಸಂಭವ. ಆತ್ಮಸಾಕ್ಷಾತ್ಕಾರವಾದವನಿಗೇ ಸಂಪೂರ್ಣ ಭಯ ಮುಕ್ತಿ ಸಾಧ್ಯ. ಅಭಯ ಎಂದರೆ ಮೋಹರಹಿತ ಅವಸ್ಥೆಯ ಪರಾಕಾಷ್ಠೆ. ನಿಶ್ಚಯಪೂರ್ವಕ, ಸತತ ಪ್ರಯತ್ನದಿಂದ, ಆತ್ಮದ ಮೇಲೆ ಶ್ರದ್ಧೆಯನ್ನು ಬೆಳೆಸಿದರೆ ಅಭಯಗುಣ ಬೆಳೆಯುತ್ತದೆ.

ನಾನು ಮೊದಲೇ ಹೇಳಿದಂತೆ, ನಾವು ಎಲ್ಲ ಹೊರಗಣ ಭಯಗಳನ್ನೂ ಬಿಡಬೇಕು. ಒಳಗಿನ ಶತ್ರುಗಳಿಗೆ ಮಾತ್ರ ಅಂಜಿ ನಡೆಯಬೇಕು. ಕಾಮ ಕ್ರೋಧಾದಿಗಳ ಭಯವೇ ವಾಸ್ತವಿಕ ಭಯ. ಒಳಗಿನ ಈ ಶತ್ರುಗಳನ್ನು ಗೆದ್ದರೆ ಹೊರಗಣ ಭಯವೆಲ್ಲ ತಾನೇ ಕಳಚಿ ಬೀಳುತ್ತದೆ. ಭಯ ಈ ದೇಹಕ್ಕೆ ಅಂಟಿಕೊಂಡೇ ಇದೆ. ದೇಹದ ವ್ಯಾಮೋಹ ಕಳೆದರೆ ಆ ಭಯ ಸಹಜ

ವಾಗಿಯೇ ಬರುತ್ತದೆ. ವಿಚಾರ ಮಾಡಿ ನೋಡಿದರೆ ಕಾಣುತ್ತದೆ : ಭಯವೆಂಬುದೆಲ್ಲ ಬರೀ ಕಲ್ಪನಾಸೃಷ್ಟಿ. ನಮ್ಮದೇ ಕಲ್ಪನೆ. ಧನದ ಮೋಹ, ಕುಟುಂಬ ಶರೀರಗಳ ಮೋಹವನ್ನು ಕಿತ್ತೊಗೆದರೆ ಆಮೇಲೆಲ್ಲಿಯ ಭಯ ? 'ತೇನತ್ಯಕ್ತೇನ ಭುಂಜೀಥಾಃ'-ಇದು ರಾಮಬಾಣದಂಥ ವಚನ. ಧನ, ಕುಟುಂಬ ದೇಹ ಎಲ್ಲಿಯೂ ಹೋಗುವುದಿಲ್ಲ. ಇದ್ದ ಹಾಗೇ ಇರುತ್ತವೆ. ಅವನ್ನು ಕುರಿತು ನಮ್ಮ ಕಲ್ಪನೆ, ನಮ್ಮ ವೃತ್ತಿ ಬದಲಾದರೆ ಸಾಕು. ಇದು ನಮ್ಮದಲ್ಲ. ನನ್ನದೂ ಅಲ್ಲ- ಈಶ್ವರನದು; ನಾನೇ ಈಶ್ವರನ ಸೊತ್ತು, ನನ್ನದೆಂಬುದು ಈ ಲೋಕದಲ್ಲೇನೂ ಇಲ್ಲ. ಎಂದಮೇಲೆ ಭಯವಿನ್ನೇಕೆ ? ಆದುದರಿಂದ ಉಪನಿಷತ್ತು ಹೇಳಿದೆ; ಅದನ್ನು ತ್ಯಜಿಸಿ ಭೋಗಿಸು. ಎಂದರೆ ರಕ್ಷಕನಾಗು, ವಿಶ್ವಸ್ತನಾಗು. ಆಗ ಅದನ್ನು ರಕ್ಷಿಸುವ ಶಕ್ತಿಯನ್ನು ಅವನು ನೀಡುತ್ತಾನೆ. ಹೀಗೆ ನಾವು ಸ್ವಾಮಿಯಾಗದೆ ಸೇವಕರಾದರೆ, ಶೂನ್ಯದಂತಾದರೆ ಅನಾಯಾಸವಾಗಿ ಭಯವನ್ನು ಗೆಲ್ಲಬಹುದು, ಶಾಂತಿಯನ್ನು ಪಡೆಯಬಹುದು, ಸತ್ಯನಾರಾಯಣನ ದರ್ಶನ ಮಾಡಬಹುದು-

8. ಅಸ್ಪೃಶ್ಯತಾನಿವಾರಣೆ

ಮಂಗಳ ಪ್ರಭಾತ, ೯-೯-೧೯೩೦

ಅಸ್ವಾದವ್ರತದಂತೆ ಇದೂ ಒಂದು ಹೊಸ ವ್ರತ. ಸ್ವಲ್ಪ ವಿಚಿತ್ರವಾಗಿಯೂ ಕಾಣುತ್ತದೆ. ಆದರೆ ಎಷ್ಟು ವಿಚಿತ್ರವೋ ಅಷ್ಟು, ಅದಕ್ಕಿಂತ ಹೆಚ್ಚೇ, ಅಗತ್ಯ. ಅಸ್ಪೃಶ್ಯತೆ ಎಂದರೆ ಹೊಲೆತನ, ಅವರನ್ನು ಮುಟ್ಟಬಾರದು, ಇವರನ್ನು ಮುಟ್ಟಕೂಡದ ಎಂಬ ಆಚಾರ. ಆಖಾನ ಮಾತಿನಲ್ಲಿ ಇದು ಕೊಳೆ, ಪ್ಯ್ರಲಿಗೆ. ಧರ್ಮದ ಹೆಸರಿನಲ್ಲಿ ಧರ್ಮಕ್ಕೇ ಕಂಟಕವಾಗಿ ಧರ್ಮವನ್ನು ಕಲುಷಿತಗೊಳಿಸುವಂಥದು ಇದು.

ಒಬ್ಬನೇ ದೇವರು, ಒಂದೇ ಆತ್ಮ ಎಂದರೆ ಯಾರೂ ಅಸ್ಪೃಶ್ಯರಿಲ್ಲ. ಭಂಗಿ, ಚಮ್ಮಾರ ಅಸ್ಪೃಶ್ಯರೆಂಬುದು ತಪ್ಪು. ಹಾಗೆಯೇ ಹೆಣವೂ ಅಸ್ಪೃಶ್ಯವಲ್ಲ. ಹೆಣವನ್ನು ನೋಡಿ ಕನಿಕರಿಸಬೇಕು. ಹೆಣವನ್ನು ಮುಟ್ಟಿದ ಮೇಲೆ ಕ್ಷೌರ ಮಾಡಿಕೊಳ್ಳುವುದು, ಸ್ನಾನಮಾಡುವುದು ಆರೋಗ್ಯ ದೃಷ್ಟಿಯಿಂದ. ಹೆಣವನ್ನು ಮುಟ್ಟಿದವನು ಸ್ನಾನ ಮಾಡಿ ಶುಚಿಯಾಗದಿದ್ದರೆ

ಅವನನ್ನು ಕೊಳಕನೆನ್ನಿ-ಪಾತಕಿಯೆನ್ನಬೇಡಿ. ತಾಯಿ ಮಕ್ಕಳ ಹೇಸಿಗೆಯನ್ನೆತ್ತಿ ಹಾಕಿ ತೊಳೆದಮೇಲೆ, ತಾನು ಕೈಕಾಲು ತೊಳೆಯದಿದ್ದರೆ ಮೀಯದಿದ್ದರೆ ಅಷ್ಟು ಹೊತ್ತು ಆಕೆ ಅಸ್ಪೃಶ್ಯಳೆನ್ನಿ. ಆದರೆ ಆಡಾಡುತ್ತ ಮಗು ಬಂದು ಆಕೆಯನ್ನು ಮುಟ್ಟಿದರೆ ಅದಕ್ಕಾಗಲಿ ಅದರ ಆತ್ಮಕ್ಕಾಗಲಿ ಏನೂ ಮೈಲಿಗೆಯಾಗದು.

ಆದರೆ ಭಂಗಿ, ಚಮ್ಮಾರ ಮುಂತಾದವರನ್ನು ಹುಟ್ಟಿನಿಂದಲೇ ಅಸ್ಪೃಶ್ಯರೆಂದು ತಿರಸ್ಕಾರದಿಂದ ಕಾಣುತ್ತೇವೆ. ಅವರು ಮಣಗಟ್ಟಲೆ ಸಾಬೂನು ಹಾಕಿ ಮೈ ತೊಳೆದರೂ, ಒಳ್ಳೆಯ ಬಟ್ಟೆ ತೊಟ್ಟರೂ, ವೈಷ್ಣವರಂತೆ ನಾಮ ವಿಟ್ಟರೂ, ತುಳಸೀ-ರುದ್ರಾಕ್ಷಿಗಳನ್ನು ಧರಿಸಿದರೂ, ನಿತ್ಯವೂ ಗೀತಾಪಾಠ ಮಾಡಿದರೂ, ಲೇಖನವ್ಯವಸಾಯ ಮಾಡಿದರೂ ಅವರು ಅಸ್ಪೃಶ್ಯರೇ ? ಇಂಥ ಧರ್ಮ ಧರ್ಮವಲ್ಲ, ಅಧರ್ಮ; ನಾಶಯೋಗ್ಯ. ಆಶ್ರಮವ್ರತಗಳಲ್ಲಿ ಅಸ್ಪೃಶ್ಯ ತಾನಿವಾರಣೆಗೆ ಸ್ಥಾನಕೊಟ್ಟು ಅಸ್ಪೃಶ್ಯತೆ ಹಿಂದೂ ಧರ್ಮದ ಅಂಗವಲ್ಲ, ಅದರೊಳಗೆ ಸೇರಿಕೊಂಡಿರುವ ಹಳಸು, ಕಳಂಕ, ಪಾಪ, ಅದನ್ನು ತೊಳೆದು ಹಾಕಬೇಕಾದುದು ಪ್ರತಿಯೊಬ್ಬ ಹಿಂದುವಿಗೂ ಪರಮ ಕರ್ತವ್ಯ ಎಂಬುದನ್ನು ಪ್ರಕಟಿಸುತ್ತಿದೇವೆ. ಆದುದರಿಂದ ಇದನ್ನು ಪಾಪ ಎಂದು ತಿಳಿಯುವ ಪ್ರತಿಯೊಬ್ಬ ಹಿಂದುವೂ ಅದಕ್ಕಾಗಿ ಪ್ರಾಯಶ್ಚಿತ್ತವೆಂದು ಅಸ್ಪೃಶ್ಯರನ್ನು ತನ್ನವರೆಂದು ತಿಳಿದು ನಡೆಯಬೇಕು. ಪ್ರೇಮಪೂರ್ವಕ ಸೇವಾಭಾವದಿಂದ ಅವರನ್ನು ಸ್ಪರ್ಶಿಸಿ, ಅದರಿಂದ ತಾನು ಪವಿತ್ರನಾದೆನೆಂದು ತಿಳಿದು ಅವರ ದುಃಖವನ್ನು ದೂರಮಾಡಬೇಕು. ವರ್ಷಾಂತರಗಳಿಂದ ದಲಿತನಾಗಿ ಅವನಲ್ಲಿ ಅಜ್ಞಾನಾದಿ ದೋಷ ತುಂಬಿವೆ. ಅವನ್ನು ದೂರ ಮಾಡಲು ಧೈರ್ಯಪೂರ್ವಕ ಸಹಾಯ ಮಾಡಿ ಇತರ ಹಿಂದುಗಳಿಗೂ ಅದೇ ರೀತಿ ಮಾಡಲು ಪ್ರೇರಣೆ ಕೊಡಬೇಕು.

ಅಸ್ಪೃಶ್ಯತಾನಿವಾರಣೆಯನ್ನು ಈ ಅಧ್ಯಾತ್ಮ ದೃಷ್ಟಿಯಿಂದ ನೋಡಿದರೆ, ಇವರ ಐಹಿಕ ರಾಜಕೀಯ ಪರಿಣಾಮ ತುಚ್ಛವಾಗಿ ಕಂಡೀತು. ಆ ಬಗೆಯ ಫಲಗಳನ್ನು ಬಯಸದೆ ವ್ರತಧಾರಿ ಅಸ್ಪೃಶ್ಯತಾನಿವಾರಣೆ ತನ್ನ ಧರ್ಮವೆಂದು ಮಾಡಿಯಾನು. ಸತ್ಯ ಮುಂತಾದುದರ ಆಚರಣೆ ಮಾಡುವಾಗ ಐಹಿಕ ಫಲದ ವಿಚಾರ ಮಾಡಬಾರದು. ಸತ್ಯಾಚರಣೆ ವ್ರತಧಾರಿಗೆ

ಒಂದು ಯುಕ್ತಿಯಲ್ಲ. ಅದು ಅವನ ಮೈಗೇ ಅಂಟಿಗೊಂಡ ವಸ್ತು; ಅವನ ಸ್ವಭಾವ. ಅಸ್ಪೃಶ್ಯತಾನಿವಾರಣೆಯೂ ವ್ರತಧಾರಿಗೆ ಅದೇ ರೀತಿ.

ಈ ವ್ರತದ ಮಹತ್ವ ತಿಳಿದರೆ, ಈ ದೋಷ ಬರೀ ಭಂಗಿ, ಚಮ್ಮಾರರನ್ನು ಮಾತ್ರವೇ ಮುಟ್ಟಿಲ್ಲ ಎಂಬುದು ತಿಳಿಯುತ್ತದೆ. ದೋಷದ ಸ್ವಭಾವವೇ ಹಾಗೆ; ಮೊದಲು ಸಾಸಿವೆ ಕಾಳಿನಷ್ಟು ಕಾಣುತ್ತದೆ, ಬರುಬರುತ್ತಾ ಗುಡ್ಡವಾಗಿ ಹೋಗುತ್ತದೆ. ಆಮೇಲೆ ಮುಟ್ಟಿದ್ದನ್ನೆಲ್ಲಾ ನಾಶಮಾಡುತ್ತದೆ. ಅಸ್ಪೃಶ್ಯತೆಯೂ ಹಾಗೇ, ಅಸ್ಪೃಶ್ಯತೆಯನ್ನು ಪಾಲಿಸುವ ಜನರಿಗೆ ತಮ್ಮ ಸ್ನಾನ – ಶುಚಿ, ಊಟ-ತಿಂಡಿ–ಇವುಗಳಲ್ಲಿಯೇ ಕಾಲ ಕಳೆಯುತ್ತದೆ. ಗಳಿಗೆಯೂ ಬಿಡುವಿಲ್ಲ, ಇಂಥಲ್ಲಿ ಹೆಸರಿಗೆ ಈಶ್ವರನ ಪೂಜೆ; ಮಾಡುವುದೇನೋ ತನ್ನದೇ ಪೂಜೆ.

ಆದುದರಿಂದ ಅಸ್ಪೃಶ್ಯತಾನಿವಾರಣೆ ಮಾಡುವವನು ಭಂಗಿ, ಚಮ್ಮಾರರನ್ನು ತನ್ನವರೆಂದು ಕಂಡರೆ ಸಾಲದು. ತನ್ನಂತೆಯೆ ಅವರನ್ನು ಕಾಣಬೇಕು, ಅಸ್ಪೃಶ್ಯತಾನಿವಾರಣೆ ಎಂದರೆ ಇಡೀ ಜಗತ್ತಿನೊಡನೆ ಮೈತ್ರಿ, ಲೋಕದ ಸೇವಕನಾಗುವುದು. ಹೀಗೆ ಅಸ್ಪೃಶ್ಯತಾನಿವಾರಣೆ ಅಹಿಂಸೆಯಲ್ಲಿ ಲೀನವಾಗುತ್ತದೆ. ಅಹಿಂಸೆಯೆಂದರೆ ಎಲ್ಲಾ ಜೀವಿಗಳಲ್ಲಿಯೂ ಪ್ರೇಮ. ಜೀವಿಜೀವಿಗಳಲ್ಲಿಯ ಭೇದವನ್ನು ತೊಡೆದುಹಾಕುವುದೇ ಅಸ್ಪೃಶ್ಯತಾನಿವಾರಣೆ. ಜಗತ್ತಿನಲ್ಲಿ ಎಲ್ಲೆಲ್ಲೂ ಇಂಥ ಭೇದ ಹರಡಿದೆ. ಆದರೆ ಹಿಂದೂ ಧರ್ಮದಲ್ಲಿ ಸೇರಿಕೊಂಡಿರುವ ಕಳಂಕದ ವಿಚಾರವನ್ನು ಇಲ್ಲಿ ಮಾಡಿದೇವೆ. ಹಿಂದೂ ಧರ್ಮದಲ್ಲಿ ಅದಕ್ಕೆ ಧಾರ್ಮಿಕ ಸ್ಥಾನ ಕೊಟ್ಟಿದೆ. ಅದರಿಂದ ಲಂಕ್ಷಾಂತರ, ಕೋಟ್ಯಾಂತರ ಮನುಷ್ಯರನ್ನು ಗುಲಾಮರಿಗಿಂತಲೂ ನೀಚಸ್ಥಿತಿಗೆ ತಳ್ಳಿದೇವೆ.

9. ಶರೀರಶ್ರಮ

ಮಂಗಳ ಪ್ರಭಾತ, ೧೬–೯–೧೯೩೦

ಶರೀರಶ್ರಮ ಮನುಷ್ಯನಿಗೆ ಅನಿವಾರ್ಯ ಎಂಬ ಮಾತು ನನಗೆ ಮೊಟ್ಟ ಮೊದಲು ಹೊಳೆದುದು ಟಾಲ್‌ಸ್ಟಾಯಿಯ 'ಅನ್ನದ ಕಾಯಕ' 'Bread Labour' ಎಂಬ ಪ್ರಬಂಧವನ್ನೋದಿದಾಗ. ಇಷ್ಟು ಸ್ಪಷ್ಟವಾಗಿ ಈ ಮಾತನ್ನು ಅರಿತುಕೊಳ್ಳುವ ಮೊದಲೇ, ರಸ್ಕಿನ್ ಬರೆದಿರುವ 'Unto–

this Last' ಪುಸ್ತಕವನ್ನೋದಿದಮೇಲೆ ಅದರಂತೆ ನಡೆಯಲು ಮೊದಲಿಟ್ಟಿದ್ದೆ. ಶರೀರಶ್ರಮ ಇಂಗ್ಲೀಷಿನ Bread Labourಗೆ ಅನುವಾದ. ಅನ್ನಕ್ಕಾಗಿ ಪ್ರತಿಯೊಬ್ಬ ಮನುಷ್ಯನೂ ಕಾಯಕ ಅಥವಾ ಶರೀರಶ್ರಮ ಮಾಡಬೇಕು, ಕೈಕಾಲು ಆಡಿಸಬೇಕು ಎಂಬುದು ಈಶ್ವರೀ ನಿಯಮ. ಇದನ್ನು ಮೊದಲು ಅರಿತುಕೊಂಡವನು ರಷ್ಯಾದ ಒಬ್ಬ ಅಪರಿಚಿತ ಲೇಖಕ ಬುನ್ರೈಫ್. ಅವನ ವಿಚಾರವನ್ನು ಟಾಲ್‌ಸ್ಟಾಯ್ ವಿಸ್ತಾರವಾಗಿ ಪ್ರಚಾರ ಮಾಡಿದ. ಭಗವದ್ ಗೀತೆಯ ಮೂರನೆಯ ಅಧ್ಯಾಯದಲ್ಲಿ ಇದೇ ತತ್ತ್ವ ನನ್ನ ಕಣ್ಣಿಗೆ ಕಾಣುತ್ತಿದೆ. ಯಜ್ಞ ಮಾಡದೆ ತಿನ್ನುವವನು ಕಳ್ಳ-ಅನ್ನವನ್ನು ತಿನ್ನುತ್ತಾನೆ. ಆ ಯಜ್ಞಕ್ಕೆ ಇಟ್ಟ ಬಹಳ ಕಠಿನ ಶಾಪವಿದು. ಇದು ಯಜ್ಞ ಎಂದರೆ ಶರೀರಶ್ರಮ ಅಥವಾ ಅನ್ನದ ಕಾಯಕ ಎಂಬುದೇ ಶೋಭಿಸುತ್ತದೆ. ಹೇಗಾದರೂ ಇರಲಿ, ನಮ್ಮ ಈ ವ್ರತದ ಉತ್ಪತ್ತಿ ಇದು.

ಬುದ್ಧಿಯೂ ನಮ್ಮನ್ನು ಆ ಸಿದ್ಧಾಂತಕ್ಕೇ ಒಯ್ಯುತ್ತದೆ. ಶರೀರಶ್ರಮ ಮಾಡದವನಿಗೆ ತಿನ್ನಲು ಏನಧಿಕಾರ ? 'ನಿನ್ನ ಬೆವರು ಸುರಿಸಿ ಹಿಟ್ಟು ತಿನ್ನು' ಎನ್ನುತ್ತದೆ ಬೈಬಲ್. ಎಂಥ ಕೋಟ್ಯಾಧೀಶನೇ ಆಗಲಿ ತನ್ನ ಹಾಸಿಗೆಯ ಮೇಲೆಯೆ ಬಿದ್ದಿದ್ದು ಯಾರಾದರೂ ತನ್ನ ಬಾಯೊಳಗೇ ಅನ್ನ ಹಾಕುವಂತೆ ಏರ್ಪಾಟು ಮಾಡಿಕೊಂಡರೆ, ಹಾಗೆ ಬಹಳ ದಿನ ತಿನ್ನಲಾರ. ಅವನಿಗೆ ಆನಂದವೇ ಇರದು. ಆದುದರಿಂದ ವ್ಯಾಯಾಮಾದಿಗಳನ್ನು ಮಾಡಿ ಹಸಿವಾಗುವಂತೆ ಮಾಡಿಕೊಳ್ಳುತ್ತಾನೆ. ಆಗಲೂ ತನ್ನ ಕೈ–ಬಾಯಿಂದಲೇ ತಾನೆ ಊಟ ಮಾಡಬೇಕು. ಬಡವನಾಗಲಿ ಭಾಗ್ಯವಂತನಾಗಲಿ ಹೀಗೆ ಶರೀರವ್ಯಾಯಾಮ ಮಾಡಬೇಕಾಗಿದ್ದರೆ, ಅನ್ನಕ್ಕಾಗಿ ಏಕೆ ಶರೀರಶ್ರಮ ಮಾಡಲಾಗದು ? ಅನ್ನದ ಕಾಯಕವೇಕೆ ಮಾಡಬಾರದು ? ಅಂಗಸಾಧನೆ ಮಾಡು, ಶ್ವಾಸೋಚ್ಛ್ವಾಸದ ವ್ಯಾಯಾಮ ಮಾಡು ಎಂದು ರೈತರಿಗೆ ಹೇಳುತ್ತಾರೆಯೇ ? ಈ ಲೋಕದಲ್ಲಿ ರೈತರೇ ಹೆಚ್ಚು : ನೂರಕ್ಕೆ ತೊಂಬತ್ತು. ಉಳಿದ ಹತ್ತು ಜನರೂ ರೈತರ ಮೇಲ್ಪಂಕ್ತಿಯನ್ನೇ ಅನುಸರಿಸಿದರೆ ಲೋಕದಲ್ಲಿ ಎಷ್ಟು ಸುಖ, ಶಾಂತಿ ಆರೋಗ್ಯವೃದ್ಧಿ ಆದೀತು ! ಕನಿಷ್ಠಪಕ್ಷ ತಮ್ಮ ಅನ್ನಕ್ಕಾಗಿ ಎಷ್ಟು ಬೇಕೋ ಅಷ್ಟಾದರೂ ಕಾಯಕ ಮಾಡಿದರೆ ? ಕೃಷಿಗೆ ಬುದ್ಧಿ ಜೊತೆಯಾದರೆ ಈಗ ವ್ಯವಸಾಯಕ್ಕೆ ಇರುವ ಅನೇಕ ತೊಡಕು ಸುಲಭವಾಗಿ ಪರಿಹಾರವಾದಾವು.

ಶರೀರಪರಿಶ್ರಮದ ಈ ನಿರಪವಾದ ನಿಯಮವನ್ನು ಎಲ್ಲರೂ ಒಪ್ಪಿದರೆ ಉಚ್ಚ ನೀಚದ ಭೇದ ಮಾಯವಾದೀತು. ವರ್ಣವ್ಯವಸ್ಥೆಯಲ್ಲಿ ಈ ಭೇದವೇ ಇರಲಿಲ್ಲ. ಅಲ್ಲಿಯೂ ಇದು ಹೊಕ್ಕಿದೆ, ಈಗಂತೂ ಧಣಿ-ಆಳು ಎಂಬ ಭೇದ ಸರ್ವವ್ಯಾಪಕವಾಗಿದೆ. ಬಡವರಿಗೆ ಭಾಗ್ಯವಂತರನ್ನು ಕಂಡರೆ ಹೊಟ್ಟೆಯುರಿ. ಎಲ್ಲರೂ ಅನ್ನದ ಕಾಯಕ ಮಾಡಿದರೆ ಉಚ್ಚ–ನಿಚ್ಚ ಭೇದ ಅಳಿಯುತ್ತದೆ; ಆಗ ಶ್ರೀಮಂತರಿದ್ದರೆ ಕೇವಲ ವಿಶ್ವಸ್ತರಂತೆ, ಟ್ರಸ್ಟಿಗಳಂತೆ ಇದ್ದಾರು; ತಮ್ಮ ಭಾಗ್ಯವನ್ನು ಲೋಕಸೇವೆಗಾಗಿ ಉಪಯೋಗಿಸಿಯಾರು.

ಅಹಿಂಸೆಯ ಪಾಲನೆಗೆ, ಸತ್ಯಾರಾಧನೆಗೆ ಬ್ರಹ್ಮಚರ್ಯವನ್ನು ಸಹಜವಾಗಿ ಮಾಡಿಕೊಳ್ಳುವ ಪ್ರಯತ್ನಕ್ಕೆ, ಶರೀರಶ್ರಮ ರಾಮಬಾಣದಂಥ ಸಹಾಯ. ನಿಜವಾಗಿ ನೋಡಿದರೆ, ಈ ಕಾಯಕ ಕೃಷಿಗೇ ಸಂಬಂಧಿಸಿದುದು. ಈಗಿನ ಸ್ಥಿತಿಯಲ್ಲಿ ಎಲ್ಲರೂ ವ್ಯವಸಾಯ ಮಾಡುವಂತಿಲ್ಲ. ಆದುದರಿಂದ ವ್ಯವಸಾಯವನ್ನು ಆದರ್ಶವಾಗಿ ಎಣಿಸಿ ಅದರ ಬದಲು ನೂಲಬಹುದು, ನೇಯಬಹುದು, ಮರಗೆಲಸ ಮಾಡಬಹುದು, ಕಬ್ಬಿಣ ಗೆಲಸ ಮಾಡಬಹುದು. ಪ್ರತಿಯೊಬ್ಬನೂ ತನಗೆ ತಾನೇ ಭಂಗಿಯಾಗಬೇಕು. ಉಂಡವನು ಶೌಚಕ್ಕೆ ಹೋಗಲೇಬೇಕು. ತನ್ನ ಶೌಚವನ್ನು ತಾನೇ ಬಳಿದೋ ಎತ್ತಿಯೋ ಹಾಕುವ ವ್ಯವಸ್ಥೆಯೇ ಉತ್ತಮ ವ್ಯವಸ್ಥೆ. ಇದು ಸಾಧ್ಯವಲ್ಲವಾದರೆ ಪ್ರತಿಯೊಂದು ಕುಟುಂಬವೂ ತಮ್ಮ ಶೌಚದ ವ್ಯವಸ್ಥೆ ಮಾಡಿಕೊಳ್ಳಬೇಕು. ಭಂಗಿಗಳದೇ ಒಂದು ಗುಂಪಾಗಿ, ಅದೇ ಒಂದು ವೃತ್ತಿಯಾಗಿ ಮಾಡಿದ ಸಮಾಜದಲ್ಲಿ ಏನೋ ಒಂದು ಮಹಾ ದೋಷವಿದೆ ಎಂದು ನನಗೆ ಕೆಲವು ವರ್ಷಗಳಿಂದ ಅನಿಸುತ್ತಿದೆ. ಆರೋಗ್ಯ ರಕ್ಷಕವಾದ ಈ ಅತ್ಯಾವಶ್ಯಕ ಕೆಲಸವನ್ನು ನೀಚಾತಿನೀಚವೆಂದು ಯಾವ ಮಹರಾಯ ಮೊಟ್ಟಮೊದಲು ನಿರ್ಣಯಿಸಿದನೋ ಇತಿಹಾಸದಿಂದ ತಿಳಿಯುವುದಿಲ್ಲ. ಯಾರೇ ಇರಲಿ, ನಮಗೆ ಅವನು ಉಪಕಾರ ಮಾಡಲಿಲ್ಲ. ನಾವೆಲ್ಲರೂ ಭಂಗಿಗಳೇ ಎಂಬ ಭಾವನೆ ಚಿಕ್ಕಂದಿನಿಂದಲೂ ಬೇರೂರಬೇಕು. ಅದಕ್ಕೆ ಸಹಜೋಪಾಯ ಈ ಮಾತನ್ನು ಅರಿತವನು ಪ್ರತಿಯೊಬ್ಬನೂ ಶೌಚವನ್ನು ಬಳಿಯುವ ಕೆಲಸದಿಂದ ತನ್ನ ಪರಿಶ್ರಮವನ್ನು ಮೊದಲಿಡುವುದು. ಜ್ಞಾನಪೂರ್ವಕ, ವಿಚಾರಪೂರ್ವಕ ಹೀಗೆ ಮಾಡಿದರೆ ಅವನ ಧರ್ಮದ ಸತ್ಯಸ್ವರೂಪ ಆ ಗಳಿಗೆಯಲ್ಲಿಯೆ ತಿಳಿದೀತು.

10. ಸರ್ವಧರ್ಮ ಸಮಭಾವ-1

ಮಂಗಳ ಪ್ರಭಾತ, ೨೩-೯-೧೯೩೦

ನಮ್ಮ ವ್ರತಗಳಲ್ಲಿ ಸಹಿಷ್ಣುತೆಗೆ ನಾನು ಈ ಹೊಸ ಹೆಸರು ಕೊಟ್ಟಿದೇನೆ. ಸಹಿಷ್ಣುತೆ ಇಂಗ್ಲೀಷಿನ 'ಟಾಲರೆನ್ಸ್' ಶಬ್ದದ ಅನುವಾದ. ನನಗದು ರುಚಿಸಲಿಲ್ಲ. ಇತರ ಧರ್ಮಗಳ ಸಹನೆ ಎಂದರೆ ಅವುಗಳಲ್ಲಿ ಏನೋ ನ್ಯೂನತೆಯಿದೆ ಎಂದು ಅರ್ಥಬರುತ್ತದೆ. ಅಹಿಂಸೆ ನಮಗೆ ಇತರ ಧರ್ಮಗಳಲ್ಲಿ ಸಮಭಾವವನ್ನು ಕಲಿಸುತ್ತದೆ. ಪರಧರ್ಮಗಳ ಸಮಭಾವದಲ್ಲಿ ನಮ್ಮ ಧರ್ಮ ಅಪೂರ್ಣ ಇದ್ದರೂ ಇರಬಹುದೆಂಬ ಅಂಗೀಕಾರವಿದೆ. ಸತ್ಯಾರಾಧನೆ, ಅಹಿಂಸಾವ್ರತ ಇದನ್ನೇ ಕಲಿಸುತ್ತವೆ. ಸಂಪೂರ್ಣ ಸತ್ಯವನ್ನು ನಾವು ಕಂಡುದೇ ಆದರೆ ಅದಕ್ಕಾಗಿ ಆಗ್ರಹವೇಕೆ ? ಆಗ ನಾವು ಪರಮೇಶ್ವರನೇ ಆದೇವು. ಏಕೆಂದರೆ, ಸತ್ಯವೇ ಪರಮೇಶ್ವರ. ನಾವು ಸಾಧಕರು—ಪೂರ್ಣ ಸತ್ಯವನ್ನರಿಯೆವು. ಆದುದರಿಂದಲೇ ಸತ್ಯದ ಆಗ್ರಹ, ಪುರುಷಾರ್ಥದ ಅವಕಾಶ. ಇದರಲ್ಲಿ ನಮ್ಮ ಅಪೂರ್ಣತೆಯನ್ನು ನಾವು ಒಪ್ಪಿದೆವು. ನಾವು ಅಪೂರ್ಣರಾದಮೇಲೆ ನಾವು ಕಲ್ಪಿಸಿದ ಧರ್ಮವೂ ಅಪೂರ್ಣ. ಸ್ವತಂತ್ರ ಧರ್ಮವೇ ಸಂಪೂರ್ಣ ಧರ್ಮ. ನಾವು ದೇವರನ್ನು ಕಂಡಿಲ್ಲ. ಹಾಗೆಯೆ ಸಂಪೂರ್ಣ ಧರ್ಮನ್ನೂ ಕಂಡಿಲ್ಲ, ನಾವು ಕಲ್ಪಿಸಿಕೊಂಡ ಧರ್ಮ ಅಪೂರ್ಣ. ಅದರಲ್ಲಿ ಸದಾ ಪರಿವರ್ತನೆಯಾಗುತ್ತಿರುತ್ತದೆ. ಆದುದರಿಂದಲೇ ನಾವು ಉತ್ತರೋತ್ತರ ಮೇಲೇರಬಲ್ಲೆವು ! ಈಶ್ವರನ ಕಡೆ ಸತ್ಯದ ಕಡೆ ದಿನದಿನವು ಮುಂದೆ ಸಾಗಬಲ್ಲೆವು. ಮನುಷ್ಯ ಕಲ್ಪಿತವಾದ ಎಲ್ಲ ಧರ್ಮಗಳೂ ಅಪೂರ್ಣ ಎಂದರೆ ಒಂದನ್ನು ಶ್ರೇಷ್ಠ ಇನ್ನೊಂದನ್ನು ಕನಿಷ್ಠ ಎನುವ ಅವಕಾಶವೇ ಇಲ್ಲ, ಎಲ್ಲವೂ ಸತ್ಯವೇ. ಆದರೆ ಎಲ್ಲವೂ ಅಪೂರ್ಣ, ಆದುದರಿಂದ ದೋಷಕ್ಕೆ ಪಾತ್ರ. ಸಮಭಾವವಿದ್ದರೂ ದೋಷಗಳನ್ನು ನೋಡಬಹುದು. ನಮ್ಮ ಧರ್ಮದ ದೋಷಗಳನ್ನೂ ನಾವು ಅರಿಯಬೇಕು. ದೋಷಗಳಿವೆಯಲ್ಲ ಎಂದು ಧರ್ಮವನ್ನೇ ಬಿಡಬೇಕಾಗಿಲ್ಲ. ದೋಷಗಳನ್ನು ಬಿಡಬೇಕು. ಹೀಗೆ ಸಮಭಾವವನ್ನಿಟ್ಟರೆ ಉಳಿದ ಧರ್ಮಗಳಲ್ಲಿ ಗ್ರಾಹ್ಯವಾದುದಕ್ಕೆ ನಮ್ಮ ಧರ್ಮದಲ್ಲಿ ಸ್ಥಾನಕೊಡಲು

ಸಂಕೋಚವಿರಬಾರದು. ಹಾಗೆ ಮಾಡಲೇಬೇಕು.

ಈಗ ಒಂದು ಪ್ರಶ್ನೆ ಏಳುತ್ತದೆ; ಹಾಗಿದ್ದರೆ ಇಷ್ಟು ಬೇರೆ ಬೇರೆ ಧರ್ಮಗಳೇಕೆ ? ಆತ್ಮ ಒಂದೇ. ಅದು ಚೇತನಗೊಳಿಸುವ ದೇಹಗಳು ಅನೇಕ. ದೇಹದ ಸಂಖ್ಯೆಯನ್ನು ನಾವು ಕಡಿಮೆ ಮಾಡಲಾರೆವು. ಆದರೆ ಆತ್ಮದ ಏಕತೆಯನ್ನು ಒಪ್ಪುತ್ತೇವೆ. ಒಂದು ಗಿಡಕ್ಕೆ ಒಂದೇ ಬುಡ ; ಎಷ್ಟೋ ಕೊಂಬೆ, ಎಲೆ, ಹಾಗೆಯೇ ಇರುವುದು ಧರ್ಮ, ಆದರೆ ಮಾನವಲೋಕದಲ್ಲಿ ಅದು ಬಹುಧಾ ಆಗುತ್ತದೆ.

ಎಲ್ಲಾ ಧರ್ಮಗಳೂ ಈಶ್ವರದತ್ತ. ಆದರೆ ಮನುಷ್ಯ ಕಲ್ಪಿತವಾದುದರಿಂದ ಮನುಷ್ಯರ ಮೂಲಕ ಅದರ ಪ್ರಚಾರವಾಗುವುದರಿಂದ ಅದು ಅಪೂರ್ಣ. ಈಶ್ವರದತ್ತ ಧರ್ಮ ಅಗತ್ಯ, ಮನುಷ್ಯ ಅದನ್ನು ಭಾಷೆಯ ಮೂಲಕ ಪ್ರಕಟಿಸುತ್ತಾನೆ. ಅದಕ್ಕೆ ಅರ್ಥ ಹಚ್ಚುತ್ತಾನೆ. ಯಾವ ಅರ್ಥವನ್ನು ಸತ್ಯ ಎನ್ನೋಣ ? ಪ್ರತಿಯೊಬ್ಬರೂ ತಮ್ಮ ತಮ್ಮ ದೃಷ್ಟಿಯಿಂದ ಸತ್ಯವೇ. ಎಲ್ಲರೂ ಸುಳ್ಳು ಆಗುವುದೂ ಅಸಂಭವವಲ್ಲ, ಆದುದರಿಂದ ಎಲ್ಲ ಧರ್ಮಗಳಲ್ಲಿಯೂ ನಾವು ಸುಳ್ಳು ಆಗುವುದೂ ಅಸಂಭವವಲ್ಲ, ಆದುದರಿಂದ ಎಲ್ಲ ಧರ್ಮಗಳಲ್ಲಿಯೂ ನಾವು ಸಮಭಾವವಿಡಬೇಕು, ಇದರಿಂದ ತನ್ನ ಧರ್ಮದಲ್ಲಿ ಉದಾಸೀನತೆ ಹುಟ್ಟದು. ಸ್ವಧರ್ಮದ ಅಂಧಪ್ರೇಮ ಕಳೆದು ಹೋಗಿ ಜ್ಞಾನಮಯ ಪ್ರೇಮ ಬರುತ್ತದೆ. ಪ್ರೇಮ ಹೆಚ್ಚು ಸಾತ್ತ್ವಿಕ, ನಿರ್ಮಲ ಆಗುತ್ತದೆ. ಸರ್ವಧರ್ಮಗಳಲ್ಲಿ ಸಮಭಾವ ಬಂದರೆ ನಮ್ಮ ದಿವ್ಯ ಚಕ್ಷು ಅರಳುತ್ತದೆ. ಧರ್ಮಾಂಧತೆ–ದಿವ್ಯದರ್ಶನಗಳಲ್ಲಿ ಉತ್ತರ ದಕ್ಷಿಣದಷ್ಟು ಅಂತರ. ಧರ್ಮ ಜ್ಞಾನವಾದರೆ ಅಂತರಾಯ ಅಳಿದು ಸಮಭಾವ ಹುಟ್ಟುತ್ತದೆ. ಈ ಸಮಭಾವವನ್ನು ವಿಕಾಸಗೊಳಿಸಿದರೆ ನಾವು ನಮ್ಮ ಧರ್ಮವನ್ನು ಹೆಚ್ಚು ಅರಿಯಬಲ್ಲೆವು.

ಇದರಿಂದ ಧರ್ಮ–ಅಧರ್ಮಗಳ ಭೇದ ನಶಿಸದು. ಇಲ್ಲಿ ಹೇಳುವುದು ಧರ್ಮವೆಂದು ನಿರ್ಧರವಾಗಿರುವವುಗಳ ಮಾತು, ಈ ಎಲ್ಲ ಧರ್ಮಗಳ ಮೂಲ ಸಿದ್ಧಾಂತವೂ ಒಂದೇ. ಎಲ್ಲ ಧರ್ಮಗಳಲ್ಲೂ ಶರಣ–ಶರಣೆಯರು ಹುಟ್ಟಿದ್ದಾರೆ. ಈಗಲೂ ಇದ್ದಾರೆ.

11 ಸರ್ವಧರ್ಮ- ಸಮಭಾವ-2

ಮಂಗಳ ಪ್ರಭಾತ, ೩೦-೯-೧೯೩೦

ಈ ವಿಷಯ ಬಹಳ ಮಹತ್ವದ್ದು. ಇನ್ನೂ ಸ್ವಲ್ಪ ವಿಸ್ತಾರವಾಗಿ ಬರೆಯುತ್ತೇನೆ. ನನ್ನ ಕೆಲಸ ಅನುಭವಗಳನ್ನು ಬರೆದರೆ, ಬಹುಶಃ, ಸಮಭಾವದ ಅರ್ಥ ಹೆಚ್ಚು ಸ್ಪಷ್ಟವಾದೀತು. ಸಾಬರ್ಮತಿಯಲ್ಲಿರುವ ಹಾಗೆ ಫೀನಿಕ್ಸ್ ಆಶ್ರಮದಲ್ಲಿಯೂ ನಿತ್ಯವೂ ಪ್ರಾರ್ಥನೆ ನಡೆಯುತ್ತಿತ್ತು. ಅಲ್ಲಿ ಹಿಂದೂ, ಮುಸಲ್ಮಾನ್, ಕ್ರೈಸ್ತರು ಎಲ್ಲರೂ ಇದ್ದರು. ಸ್ವರ್ಗೀಯ ಸೇಠ್ ರುಸ್ತುಂಜೀಯೋ ಅವರ ಮಕ್ಕಳೋ ಆಗಾಗ ಪ್ರಾರ್ಥನಾಸಭೆಗಳಿಗೆ ಬರುತ್ತಿದ್ದರು. ಸೇಠ್ ರುಸ್ತುಂಜೀಗೆ 'ಮನೆ ವಹಾಲುಂ ವಹಾಲುಂ ದಾದಾ ರಾಮಜೀನು ನಾಮ್'-ನಮಗೆ ರಾಮನಾಮ ಪ್ರಿಯ-ಎಂಬ ಗುಜರಾತಿನ ಕೀರ್ತನೆ ಬಹಳ ಇಷ್ಟವಾಗಿತ್ತು, ನನಗೆ ನೆನಪಿದೆ. ಒಂದು ದಿನ ಮಗನಲಾಲನೋ ಅಥವಾ ಕಾಶಿಯೋ ಈ ಕೀರ್ತನೆಯನ್ನು ನಮ್ಮೆಲ್ಲರಿಗೂ ಹೇಳಿ ಹಾಡಿಸುತ್ತಿದ್ದರು. ಸೇಠ್ ರುಸ್ತುಂಜೀ ಬಹಳ ಉಲ್ಲಾಸದಿಂದ-ದಾದಾ ರಾಮಗೆ ಬದಲು ದಾದಾ ಹೋರಮಜದ್ ಹೇಳಿ, ನೋಡೋಣ-ಎಂದರು, ಹಾಡು ಹೇಳುವವರೂ ಒಡನೆಯೆ ಈ ಸಲಹೆಯನ್ನು ನಡೆಸಿಯೇ ಬಿಟ್ಟರು. ಆಮೇಲೆ ರುಸ್ತುಂಜೀ ಇದಿರಿಗಿದ್ದಾಗಲಂತೂ ಅದೇ ರೀತಿ ಹಾಡುತ್ತಿದ್ದೆವು. ಅವರಿಲ್ಲದಾಗಲೂ ಒಮ್ಮೊಮ್ಮೆ ನಾವು 'ದಾದಾ ಹೋರಮಜದ್' ಎಂದೇ ಭಜನೆಮಾಡುತ್ತಿದ್ದೆವು, ಸ್ವರ್ಗೀಯ ದಾವೂದ್ ಸೇಠನ ಮಗ ಹುಸೇನ್ ಆಗಾಗ ಆಶ್ರಮದಲ್ಲಿಯೇ ಇದ್ದು ಬಿಡುತ್ತಿದ್ದ. ಬಹಳ ಉತ್ಸಾಹದಿಂದ ಪ್ರಾರ್ಥನೆಯಲ್ಲಿ ಭಾಗವಹಿಸುತ್ತಿದ್ದ. ವಾದ್ಯದ ಜೊತೆಗೆ ತನ್ನ ಮಧುರಸ್ವರದಿಂದ 'ಯೇ ಬಹಾರೇ ಬಾಗ್ ದುನಿಯಾ ಚಂದ ರೋಜ್' ಈ ಲೋಕವೆಂಬ ತೋಟ ಅರಳುವುದು ಒಂದೇ ಗಳಿಗೆ-ಎಂಬ ಹಾಡನ್ನು ನಮಗೆಲ್ಲರಿಗೂ ಕಲಿಸಿದ. ಅನೇಕ ಸಲ ನಾವು ಪ್ರಾರ್ಥನೆಯಲ್ಲಿ ಇದನ್ನು ಹಾಡುತ್ತಿದ್ದೆವು. ಆ ಹಾಡನ್ನು ಆಶ್ರಮ ಭಜನಾವಳಿಯಲ್ಲಿ ಸೇರಿಸಿರುವುದು ಸತ್ಯಪ್ರಿಯ ಹುಸೇನನ ನೆನಪಿಗಾಗಿ. ಅವನಿಗಿಂತ ಹೆಚ್ಚು ತತ್ಪರತೆಯಿಂದ ಸತ್ಯಾಚರಣೆಮಾಡಿದ ನವಯುವಕನನ್ನು ನಾನು ಕಂಡಿಲ್ಲ. ಜೋಸೆಫ್ ರಾಯಪ್ಪನ್ ಆಗಾಗ

ಆಶ್ರಮಕ್ಕೆ ಬರುತ್ತಿದ್ದ. ಅತ ಕ್ರೈಸ್ತ. ಆತನಿಗೆ ಇಷ್ಟವಾದ ಭಜನೆ 'ವೈಷ್ಣವ ಜನತೋ'. ಆತನಿಗೆ ಸಂಗೀತ ಚೆನ್ನಾಗಿ ಬರುತ್ತಿತ್ತು. ಒಂದು ಸಲ 'ವೈಷ್ಣವಜನತೋ'ಕ್ಕೆ ಬದಲು 'ಕ್ರಿಶ್ಚನ್ ಜನತೋ' ಎಂದು ಹಾಡಿದ. ಎಲ್ಲರೂ ಆತನಿಗೆ ಜೊತೆಗೂಡಿಸಿದರು. ಆಗ ಜೋಸೆಫ್‌ನ ಆನಂದಕ್ಕೆ ಮೇರೆಯಿರಲಿಲ್ಲ ; ನಾನು ಗಮನಿಸಿದೆ.

ಆತ್ಮ ಸಂತೋಷಕ್ಕಾಗಿ ನಾನು ಬೇರೆ ಬೇರೆ ಧರ್ಮದ ಗ್ರಂಥಗಳನ್ನು ತಿರುವಿಹಾಕುತ್ತಿದ್ದಾಗ ಕ್ರಿಸ್ತೀ, ಇಸ್ಲಾಂ, ಜರಥುಸ್ತ್ರ, ಯಹೂದೀ, ಹಿಂದೂ ಧರ್ಮ ಗ್ರಂಥಗಳ ಪರಿಚಯವನ್ನು ಸಾಕಷ್ಟು ಮಾಡಿಕೊಂಡೆ. ಈ ಅಧ್ಯಯನ ಮಾಡುವಾಗ ಸರ್ವಧರ್ಮಗಳಲ್ಲಿಯೂ ನನ್ನಲ್ಲಿ ಸಮಭಾವವಿತ್ತು ಎಂದು ಹೇಳಬಲ್ಲೆ. ಆಗ ನನಗೆ ಈ ಜ್ಞಾನವಿರಲಿಲ್ಲ. ಸಮಭಾವ ಶಬ್ದದ್ದಾದರೂ ಪೂರ ಪರಿಚಯ ಆಗ ನನಗಿತ್ತೋ ಇಲ್ಲವೋ ! ಆದರೂ ಹಿಂದಿನದನ್ನು ನೆನಪು ಮಾಡಿಕೊಂಡರೆ, ಆ ಧರ್ಮಗಳ ಬಗ್ಗೆ ಟೀಕೆ-ಟಿಪ್ಪಣಿ ಮಾಡುವ ಆಸೆ ಎಳಷ್ಟೂ ನನಗಿದ್ದ ಹಾಗೆ ತೋರುವುದಿಲ್ಲ. ನಮ್ಮ ಧರ್ಮಗ್ರಂಥಗಳ ಹಾಗೆಯೆ ಅವೂ ಎಂದು ತಿಳಿದು ಆದರಪೂರ್ವಕವಾಗಿ ಅವನ್ನು ಓದಿದೆ. ಎಲ್ಲದರಲ್ಲೂ ಮೂಲ ನೈತಿಕ ಸಿದ್ಧಾಂತ ಒಂದೇ ಎಂಬುದನ್ನೂ ಕಂಡೆ. ಅನೇಕ ವಿಷಯ ನನಗೆ ಆಗ ಅರ್ಥವಾಗಲಿಲ್ಲ. ಹಿಂದೂ ಧರ್ಮಗ್ರಂಥಗಳಲ್ಲಿಯೂ ಅಷ್ಟೆ. ಈಗಲೂ ಅನೇಕ ವಿಷಯ ತಿಳಿದಿಲ್ಲ. ಆದರೆ ನಮಗೆ ತಿಳಿಯಲಾರದುದೆಲ್ಲ ತಪ್ಪು ಎಂದು ತಿಳಿಯುವುದು ಬಹಳ ದುಡುಕು, ಅಪರಾಧ ಎಂದು ನನ್ನ ಅನುಭವ ತೋರಿಸುತ್ತಿದೆ. ಮೊದಲು ಅರ್ಥವಾಗದಿದ್ದ ಎಷ್ಟೋ ಮಾತು ಈಗ ಬೆಳ್ಳಂಬೆಳಕಾಗಿ ಕಾಣುತ್ತಿವೆ. ಸಮಭಾವವನ್ನು ಅಭ್ಯಾಸಮಾಡಿದರೆ ಅನೇಕ ಗ್ರಂಥಿಗಳು ತಾವೇ ಬಿಚ್ಚಿ ಹೋಗುತ್ತವೆ. ಅಷ್ಟೇ ಅಲ್ಲ, ಕೆಲವು ವೇಳೆ ದೋಷ ಕಂಡರೂ ಅದನ್ನು ಹೇಳುವಲ್ಲಿ ನಮ್ರತೆ, ವಿವೇಕ ಕಾಣಬರುತ್ತವೆ. ಯಾರಿಗೂ ನೋವು ಆಗದು.

ಒಂದು ಮಾತು ಉಳಿಯುತ್ತದೆ. ಸರ್ವ ಧರ್ಮಸಮಭಾವದಿಂದ ಧರ್ಮ-ಅಧರ್ಮ ಭೇದ ಹೋಗದು. ಅಧರ್ಮದ ಬಗ್ಗೆ ಸಮಭಾವ ತೋರಿಸುವ ಅಭ್ಯಾಸವನ್ನು ನಾವು ಮಾಡಬಾರದು. ಹಾಗಾದರೆ ಪ್ರತಿಯೊಬ್ಬನೂ ಧರ್ಮಾಧರ್ಮದ ನಿರ್ಣಯ ಮಾಡತೊಡಗಿದರೆ, ಇನ್ನು ಸಮ

ಭಾವವೆಲ್ಲಿ ಬಂತು ಎಂದು ಕೇಳಬಹುದು. ಹೀಗೆ ನಿರ್ಣಯ ಮಾಡುವಾಗ ತಪ್ಪಾಗುವ ಸಂಭವವೂ ಉಂಟು. ಆದರೆ ನಮ್ಮೊಳಗೆ ನಿಜವಾದ ಅಹಿಂಸೆ ಯಿದ್ದರೆ ನಮ್ಮನ್ನು ಈ ವೈರಭಾವ ಬಾಧಿಸದು. ಅಧರ್ಮವನ್ನು ಕಂಡರೂ ಅದನ್ನು ಆಚರಿಸುವ ಅಧರ್ಮಿ ಸೋದರನಲ್ಲಿ ನಮಗೆ ಪ್ರೇಮಭಾವನೆ ತಾನೆ? ಇದರಿಂದ ಅವನಾದರೂ ನಮ್ಮ ದೃಷ್ಟಿಯನ್ನು ಒಪ್ಪಿಕೊಂಡಾನು, ನಮ್ಮ ತಪ್ಪನ್ನಾದರೂ ನಮಗೆ ತೋರಿಸಿಕೊಟ್ಟಾನು. ಅಥವಾ ಪರಸ್ಪರ ಮತಭೇದ ವನ್ನು ಸೈರಿಸಿಕೊಂಡೇವು. ಇದಿರಾಳಿ ಅಹಿಂಸಕನಲ್ಲದಿದ್ದರೆ ನಮ್ಮ ಬಗ್ಗೆ ಕಠೋರವಾಗಿ ನಡೆದುಕೊಂಡಾನು. ಆದರೂ ನಾವು ನಿಜವಾಗಿಯೂ ಅಹಿಂಸೆಯ ಆರಾಧಕರಾದರೆ ನಮ್ಮ ಮೃದುತ್ವ ಅವನ ಕಠೋರತನವನ್ನು ಗೆದ್ದೀತು. ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಪರರ ತಪ್ಪನ್ನು ತೋರಿಸು ವಾಗಲೂ ನಾವು ಅವರನ್ನು ಪೀಡಿಸಬಾರದು. ನಾವೇ ಕಷ್ಟ ಸೈರಿಸಬೇಕು. ಈ ಸ್ವರ್ಣ ನಿಯಮವನ್ನು ಪಾಲಿಸುವವನು ಎಲ್ಲಾ ಸಂಕಟಗಳನ್ನೂ ಜಯಿಸುತ್ತಾನೆ.

12. ನಮ್ರತೆ

ಮಂಗಳ ಪ್ರಭಾತ, ೭–೧೦–೧೯೩೦

ವ್ರತಗಳಲ್ಲಿ ನಮ್ರತೆಗೇ ಒಂದು ಬೇರೆ ಸ್ಥಾನ ಸಿಗಲಿಲ್ಲ; ಸಿಗಲೂ ಆರದು, ಅಹಿಂಸೆಗೆ ಇದು ಒಂದು ಅರ್ಥ. ಅದರಲ್ಲಿ ಇದು ಅಂತರ್ಗತ ಎನ್ನಿ. ಏಕೆಂದರೆ ಅಭ್ಯಾಸದಿಂದ ಬರುವಂಥದಲ್ಲ ನಮ್ರತೆ, ಸ್ವಭಾವದಲ್ಲಿಯೇ ಇರಬೇಕು. ಮೊದಲು ಆಶ್ರಮದ ನಿಯಮಾವಳಿ ರಚಿತವಾದಾಗ, ಅದರ ಪ್ರತಿಗಳನ್ನು ನಾನು ಗೆಳೆಯರಿಗೆ ಕಳಿಸಿದ್ದೆ. ಸರ್ ಗುರುದಾಸ ಬ್ಯಾನರ್ಜಿ, ನಮ್ರತೆಗೆ ವ್ರತಗಳಲ್ಲಿ ಒಂದು ಸ್ಥಾನ ಕೊಡುವಂತೆ ಸೂಚಿಸಿದರು. ಇದಕ್ಕೆ ವ್ರತಗಳಲ್ಲಿ ಸ್ಥಾನ ಕೊಡಲು ಸಾಧ್ಯವಿಲ್ಲ ಎಂದು ಈಗ ಏನು ಕಾರಣ ಹೇಳಿ ದೇನೋ ಅದೇ ಕಾರಣವನ್ನೇ ಆಗಲೂ ಹೇಳಿದೆ.

ವ್ರತಗಳಲ್ಲಿ ನಮ್ರತೆಗೆ ಸ್ಥಾನ ಕೊಡದಿದ್ದರೂ ವ್ರತಗಳಿಗಿಂತಲೂ ಹೆಚ್ಚು ಆವಶ್ಯಕವಾದ ಗುಣ ಇದು. ಅವುಗಳಷ್ಟಾದರೂ ಖಂಡಿತ ಅವಶ್ಯಕ. ಆದರೆ ಯಾರಿಗೂ ನಮ್ರತೆ ಅಭ್ಯಾಸದಿಂದ ಲಭಿಸಿದಂತಿಲ್ಲ. ಸತ್ಯದ ಅಭ್ಯಾಸ

ಸಾಧ್ಯ. ದಯೆಯ ಅಭ್ಯಾಸವೂ ಸಾಧ್ಯ. ಆದರೆ ನಮ್ರತೆಯ ಅಭ್ಯಾಸ ಎಂದರೆ ದಂಭದ ಅಭ್ಯಾಸ ಮಾಡಿದ ಹಾಗೇ ಎನ್ನಬಹುದು. ನಮ್ರತೆಯೆಂದರೆ ದೊಡ್ಡವರು ಪರಸ್ಪರ ತೋರಿಸುವ ಮಾನ-ಮರ್ಯಾದೆ ಅಲ್ಲ. ಒಬ್ಬ ಹೊರಗೆ ಸಾಷ್ಟಾಂಗ ನಮಸ್ಕಾರವನ್ನೇ ಮಾಡಬಹುದು ಇನ್ನೊಬ್ಬನಿಗೆ. ಆದರೆ ಅವನ ಮನಸ್ಸಿನಲ್ಲಿ ಆ ಇನ್ನೊಬ್ಬನ ಬಗ್ಗೆ ಬರೀ ತಿರಸ್ಕಾರವೇ ತುಂಬಿದ್ದರೆ, ಅದು ನಮ್ರತೆಯಲ್ಲ— ಧೂರ್ತತನ. ಒಬ್ಬ ರಾಮನಾಮ ಜಪಮಾಡುತ್ತಾನೆ, ತುಲಸೀಮಾಲೆ ತಿರುಗಿಸುತ್ತಾನೆ, ಮುನಿಯ ಹಾಗೆ ಸಮಾಜದಲ್ಲಿ ಓಡಾಡುತ್ತಾನೆ. ಒಳಗಡೆ ಅವನಲ್ಲಿ ಸ್ವಾರ್ಥ ತುಂಬಿದ್ದರೆ ಅದು ನಮ್ರತೆಯಲ್ಲ, ಪಾಷಂಡತನ.

ನಮ್ರ ಮನುಷ್ಯನಿಗೆ ತನ್ನ ನಮ್ರತೆಯ ಅರಿವೇ ಇರದು. ಎಲ್ಲಿ, ಯಾವಾಗ ತಾನು ನಮ್ರನಾಗಿದ್ದನೋ ಗೊತ್ತಿಲ್ಲ. ಸತ್ಯಾದಿಗಳನ್ನು ನಾವು ಅಳೆದು ನೋಡಬಹುದು. ನಮ್ರತೆಯನ್ನು ಅಳೆಯಲು ಸಾಧ್ಯವಿಲ್ಲ. ಸ್ವಾಭಾವಿಕ ನಮ್ರತೆ ಒಳಗೆ ಅಡಗಿರಲಾರದು. ಆದರೂ ನಮ್ರ ಮನುಷ್ಯ ತಾನು ಅದನ್ನು ನೋಡಲಾರ. ವಸಿಷ್ಠ ವಿಶ್ವಾಮಿತ್ರರ ಉದಾಹರಣೆಗಳನ್ನು ಆಶ್ರಮದಲ್ಲಿ ಅನೇಕಸಲ ನಾವು ಕೇಳಿದ್ದೇವೆ. ನಮ್ಮ ನಮ್ರತೆ ಶೂನ್ಯದ ವರೆಗೂ ತಲುಪಬೇಕು. ನಾನೂ ಒಬ್ಬ ಗಣ್ಯ ಎಂಬ ಭೂತ ಆವೇಶವಾಯಿತೋ ನಮ್ರತೆ ಗಾಳಿಗೆ ಹಾರಿಹೋಯಿತು, ಎಲ್ಲಾ ವ್ರತಗಳೂ ಮಣ್ಣುಪಾಲು. ವ್ರತಗಳನ್ನು ಪಾಲಿಸುವವನು ಮನಸ್ಸಿನಲ್ಲಿ ತನ್ನ ವ್ರತ ಪಾಲನೆಯ ಅಭಿಮಾನ ತಾಳಿದರೆ ಸಾಕು. ಆ ವ್ರತಗಳ ಬೆಲೆಯು ನಾಶವಾಗುತ್ತದೆ. ಅವನು ಸಮಾಜಕ್ಕೆ ವಿಷವಾಗುತ್ತಾನೆ. ಸಮಾಜವೂ ಅವನ ವ್ರತಗಳಿಗೆ ಬೆಲೆ ಕೊಡದು. ಅವನಿಗೂ ಅದರ ಫಲ ಸಿಗದು. ನಮ್ರತೆಯೆಂದರೆ ಅಹಂಭಾವದ ಆತ್ಯಂತಿಕ ಶೂನ್ಯತೆ. ವಿಚಾರಮಾಡಿದರೆ ಈ ಜಗತ್ತಿನಲ್ಲಿ ಪ್ರಾಣಿಗಳೆಲ್ಲವೂ ಒಂದು ಅಣುವಿನಷ್ಟಾದರೂ ಮಹತ್ವದವಲ್ಲ ಎಂಬುದು ತಿಳಿಯುತ್ತದೆ. ದೇಹಧಾರಿಗಳಂತೆ ನಾವು ಕೇವಲ ಕ್ಷಣಜೀವಿಗಳು. ಕಾಲದ ಅನಂತಚಕ್ರದಲ್ಲಿ ನೂರುವರ್ಷ ಯಾವ ಲೆಕ್ಕ ? ಆದರೆ ನಾವು ಈ ಅಹಂಭಾವದ ಸುಳಿಯಿಂದ ಪಾರಾದರೆ, ನಾವು ಏನೂ ಇಲ್ಲ-ಶೂನ್ಯ ಆದರೆ, ಆಗ ನಾವು ಎಲ್ಲವೂ ಆಗುತ್ತೇವೆ. ನಾವೂ ಏನೋ ಸ್ವಲ್ಪ

ಇದೇವೆ ಎಂದರೆ–ಈಶ್ವರನಿಂದ, ಪರಮಾತ್ಮನಿಂದ, ಸತ್ಯದಿಂದ ನಾವು ಬೇರೆಯಾದಂತೆ. ಆ ಏನೋ ಸ್ವಲ್ಪ ಅಳಿದರೆ ಪರಮಾತ್ಮನಲ್ಲಿ ಬೆರೆತಂತೆ. ಸಮುದ್ರದಲ್ಲಿರುವ ನೀರಿನ ಹನಿಹನಿಗೂ ಸಮುದ್ರದ ಮಹತ್ತು ಇದೆ. ಆದರೆ ಅದಕ್ಕೆ ಆ ಜ್ಞಾನವಿಲ್ಲ. ಆ ಹದ ಸಮುದ್ರವನ್ನು ಬಿಟ್ಟು ಬೇರೆಯಾಗಿ ನಾನೂ ಇದೇನೆ ಎಂದಿತೋ ಒಣಗಿಯೇ ಹೋಯಿತು. ನಮ್ಮ ಬಾಳನ್ನು ನೀರಿನ ಗುಳ್ಳೆಗೆ ಹೋಲಿಸುತ್ತಾರೆ. ಇದರಲ್ಲಿ ಸ್ವಲ್ಪವೂ ತಪ್ಪಿಲ್ಲ.

ಇಂಥ ನಮ್ರತೆ, ಶೂನ್ಯತೆ ಅಭ್ಯಾಸಮಾಡಿದರೆ ಬಂದೀತೆ? ಆದರೆ ವ್ರತಗಳನ್ನು ಸರಿಯಾಗಿ ಅರಿತುಕೊಂಡರೆ ನಮ್ರತೆ ತಾನೇ ಬರುತ್ತದೆ, ಸತ್ಯವನ್ನು ಪಾಲಿಸಬಯಸುವವನು ಅಹಂಕಾರಿ ಹೇಗೆ ಆದಾನು? ಪರರಿಗಾಗಿ ಪ್ರಾಣ ತೊರೆಯಲು ಸಿದ್ಧನಾದವನು ತನಗಾಗಿ ಒಂದು ಸ್ಥಾನವನ್ನು ಹುಡುಕುತ್ತಾನೆಯೆ? ಪರರಿಗಾಗಿ ಪ್ರಾಣ ತೆರಲು ತೀರ್ಮಾನಿಸಿದಾಗಲೇ ಅವನು ತನ್ನ ಪ್ರೈಯನ್ನು ಬಿಸುಟ. ಇಂಥ ನಮ್ರತೆ ಪುರುಷಾರ್ಥಹೀನತೆಯಾದೀತೆ? ಹಿಂದೂ ಧರ್ಮದಲ್ಲಿ ಅಲಸ್ಯ ಪಾಖಂಡಿತನಗಳನ್ನೂ ನಮ್ರತೆ ಎನ್ನುವುದುಂಟು. ನಿಜವಾಗಿ ನಮ್ರತೆ ತೀವ್ರತರ ಪುರುಷಾರ್ಥ, ಪರಮಾರ್ಥಕ್ಕಾಗಿ ಈ ನಮ್ರತೆ. ಭಗವಂತ ಹಗಲಿರುಳೂ ಬಿಡುವಿಲ್ಲದೆ ಅನವರತವೂ ಕೆಲಸ ಮಾಡುತ್ತಿದಾನೆ. ಒಂದು ಗಳಿಗೆ ಕಾಲು ನೀಡಲೂ ಕೂಡ ಬಿಡುವಿಲ್ಲ. ನಾವು ಭಗವಂತನವರಾದರೆ, ಅವನಲ್ಲಿ ಲೀನವಾದರೆ ನಮ್ಮ ಉದ್ಯೋಗವೂ ಅವನದಕ್ಕೆ ಸಮಾನವಾಗಿ ಅನವರತವಾಗಬೇಕು. ಸಮುದ್ರದಿಂದ ಬೇರೆ ನಿಡಿದ ಹನಿಗೆ ಒಂದು ಗಳಿಗೆ ವಿರಾಮ ಸಿಕ್ಕಿತೇನೋ ! ಸಮುದ್ರದ ಹನಿಗೆ ವಿರಾಮ? ಕಲ್ಪನೆ ಕೂಡ ಸಾಧ್ಯವಿಲ್ಲ. ಸಮುದ್ರಕ್ಕೆ ವಿರಾಮವೇ ಇಲ್ಲವಲ್ಲ. ನಮಗೂ ಅಷ್ಟೇ. ಈಶ್ವರ ರೂಪ ಸಮುದ್ರದಲ್ಲಿ ನಾವು ಮುಳುಗಿದೆವೋ ನಮ್ಮ ಆರಾಮ–ವಿರಾಮ ಮುಗಿಯಿತು. ಆಗ ಆರಾಮ ಅಗತ್ಯವೂ ಇಲ್ಲ. ಆಗ ನಿದ್ದೆಯೂ ಕೆಲಸವೇ. ಹೃದಯದಲ್ಲಿ ಭಗವದ್ವಿಚಾರವನ್ನು ಪ್ರತಿಷ್ಠಿಸಿ ನಿದ್ದೆ ಮಾಡುತ್ತೇವೆ. ಈ ಮಹಾ ನಮ್ರತೆ ಪ್ರಾಣಿಮಾತ್ರದ ಸೇವೆಗಾಗಿ ನಮ್ಮಿಂದ ಸರ್ವಸಮರ್ಪಣವನ್ನು ಬಯಸುತ್ತದೆ. ಆ ಅವಸ್ಥೆಯನ್ನು ವರ್ಣಿಸುವುದು ಕಷ್ಟ, ಆದರೆ ಅನುಭವಿಸಲು ಸಾಧ್ಯ. ನಾವೆಲ್ಲರೂ ಈ ಆಶ್ರಮದಲ್ಲಿ ಸೇರಿದೇವೆ. ನಮ್ಮ ಎಲ್ಲ ವ್ರತಗಳೂ ಕಾರ್ಯವೂ ಈ ಅನುಭವಕ್ಕಾಗಿಯೇ. ನಮ್ಮೊಳಗೆ ಸತ್ಯವಿದ್ದರೆ ಒಂದು ದಿನ ನಮಗೆ ಅದು ಲಭಿಸುತ್ತದೆ.

13. ಸ್ವದೇಶಿ

ಸ್ವದೇಶಿ ಈ ಯುಗದ ಮಹಾವ್ರತ. ಆತ್ಮದ ಧರ್ಮಕ್ಕೆ, ಪ್ರಕೃತಿ ನಿಯಮಕ್ಕೆ ಯಾವ ಶಾಸನವೂ ಅಗತ್ಯವಿಲ್ಲ. ಅವು ಸ್ವಯಂ-ಭೂ, ಸ್ವಯಂ ಪ್ರವರ್ತಿತ. ಅಜ್ಞಾನದಿಂದಲೋ, ಬೇರೆ ಕಾರಣದಿಂದಲೋ ಮನುಷ್ಯ ಈ ಧರ್ಮಗಳನ್ನು ಅಸಡ್ಡೆ ಮಾಡುತ್ತಾನೆ, ಮೀರಿ ನಡೆಯುತ್ತಾನೆ. ಆಗ ಆ ಧರ್ಮವನ್ನು ಪಾಲನೆಮಾಡಲು ಮನುಷ್ಯನಿಗೆ ವ್ರತಗಳು ಬೇಕಾಗುತ್ತವೆ. ಸ್ವಭಾವತಃ ಶಾಕಾಹಾರಿಯಾದವನು ಮಾಂಸಾಹಾರವನ್ನು ಮುಟ್ಟುವುದಿಲ್ಲ ಎಂಬ ವ್ರತ ಹಿಡಿಯಬೇಕಾಗಿಲ್ಲ. ಅವನಿಗೆ ಮಾಂಸದಲ್ಲಿ ಸೆಳೆತವಿಲ್ಲ; ಅಸಹ್ಯವೇ ಇದೆ.

ಸ್ವದೇಶಿ ಆತ್ಮದ ಧರ್ಮ. ಈಗ ಅದು ಮರೆತುಹೋಗಿದೆ. ಆದುದರಿಂದ ಅದನ್ನೊಂದು ವ್ರತವಾಗಿ ತೊಡಬೇಕಾಗಿದೆ. ಸ್ವದೇಶಿಯ ಕಟ್ಟಕಡೆಯ ಆಧ್ಯಾತ್ಮಿಕ ಅರ್ಥ, ಸಮಸ್ತ ಸ್ಥೂಲ ಸಂಬಂಧಗಳಿಂದಲೂ ಆತ್ಯಂತಿಕ ಮುಕ್ತಿ. ದೇಹವೂ ಆತ್ಮಕ್ಕೆ ಪರದೇಶಿಯೇ. ಬೇರೆ ಆತ್ಮದೊಡನೆ ಏಕರೂಪವಾಗಲು ಈ ದೇಹ ಅಡ್ಡಿ, ಆತ್ಮದ ದಾರಿಯಲ್ಲಿ ಇದು ಅಡಚಣೆ, ಅಂತಕ. ಸಮಸ್ತ ಜೀವರಾಶಿಯೊಡನೆ ಐಕ್ಯವನ್ನು ಸಾಧಿಸುತ್ತ ಸ್ವದೇಶೀ ಧರ್ಮವನ್ನು ಅರಿತು ಅನುಸರಿಸುವ ಸಾಧಕ ದೇಹವನ್ನೂ ತ್ಯಜಿಸುತ್ತಾನೆ, ದೇಹಮುಕ್ತಿಯನ್ನು ಪಡೆಯುತ್ತಾನೆ.

ಸ್ವದೇಶಿಗೆ ಈ ಅರ್ಥ ಸರಿಯೆಂದರೆ, ನಮ್ಮ ನೆರೆಹೊರೆಯವರ ಸೇವೆಯಲ್ಲಿ ನಾವು ನಿರತರಾಗಿರಬೇಕಾದುದೇ ಸ್ವದೇಶಿ ಧರ್ಮ; ಇದು ಸುಲಭವಾಗಿ ತಿಳಿಯುತ್ತದೆ. ನೆರೆಹೊರೆಯವರ ಸೇವೆ ಮಾಡುವಾಗ ದೂರದಲ್ಲಿರುವವರನ್ನು ಕೈಬಿಟ್ಟಂತಾಯಿತು, ಅವರಿಗೆ ಹಾನಿಯಾಯಿತು ಎನಿಸುವ ಸಂಭವವಿದೆ. ಅದು ಬರೀ ಆಭಾಸ. ಸ್ವದೇಶಿಯ ಶುದ್ಧ ಸೇವೆಯಿಂದ ಪರದೇಶಿಗಳ ಶುದ್ಧ ಸೇವೆಯೂ ಆಗುತ್ತದೆ. 'ಯಥಾ ಪಿಂಡೇ ತಥಾ ಬ್ರಹ್ಮಾಂಡೇ'. ಇದಕ್ಕೆ ವಿರುದ್ಧವಾಗಿ, ದೂರದಲ್ಲಿರುವವರ ಸೇವೆ ಮಾಡುವ ಮೋಹವನ್ನಿಟ್ಟುಕೊಂಡರೆ, ಅದಂತೂ ಸಾಧಿಸುವುದೇ ಇಲ್ಲ; ಇಲ್ಲಿ ನೆರೆಹೊರೆಯವರ ಸೇವೆ

ಹೋಸೋ ಬಿಟ್ಟುಹೋಗುತ್ತದೆ. ಇಲ್ಲಿಯೂ ಇಲ್ಲ, ಅಲ್ಲಿಯೂ ಇಲ್ಲ–ಎರಡೂ ಇಲ್ಲವಾಗುತ್ತದೆ. ನಾನಿರುವ ಕಡೆ ನನ್ನನ್ನು ನಂಬಿರುವ ಬಂಧುಬಳಗ ಸ್ವಲ್ಪ, ನೆರೆಹೊರೆಯ ಗ್ರಾಮವಾಸಿಗಳು ಕೆಲವರು ಇದಾರೆ. ಕೆಲಮಟ್ಟಿಗೆ ಅವರು ನನ್ನ ಮೇಲೆ ಆಧಾರಗೊಂಡಿದ್ದಾರೆ, ನನ್ನ ಆಸರೆ ಆಧಾರಗಳಿಗೆ ಅವರಿಗೊಂದು ಹಕ್ಕು ಇದೆ, ಇವರೆಲ್ಲರನ್ನೂ ನಾನು ಕೈಬಿಟ್ಟು ದೂರದವರ ಸೇವೆಮಾಡಲು ಬಯಸಿದರೆ ಇವರ ಆಧಾರ ಕಡಿದುಹೋಯಿತು. ನಿರಾಧಾರರಾದರು. ದೂರದವರಿಗಂತೂ ನನ್ನ ಸೇವೆ ಸಲ್ಲಲಿಲ್ಲ. ಅಲ್ಲಿನ ವಾತಾವರಣ ಕೆಟ್ಟಿತು. ಎರಡೂ ಕಡೆ ನಷ್ಟ. ಸ್ವದೇಶಿ ವ್ರತಭಂಗದ ಫಲ ಇದು.

ಇಂಥ ಅನೇಕ ದೃಷ್ಟಾಂತಗಳನ್ನು ಕೊಟ್ಟು ಸ್ವದೇಶಿ ಧರ್ಮವನ್ನು ಸಿದ್ಧ ಮಾಡಬಹುದು. ಇದಕ್ಕಾಗಿಯೇ ಗೀತೆಯ 'ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ' ವಚನ ಹುಟ್ಟಿದೆ. ಪ್ರಾಕೃತಿಕ ಜೀವನದಲ್ಲಿ ಇದರ ಅರ್ಥ-ಸ್ವದೇಶಿ. ಗೀತೆ ಸ್ವಧರ್ಮಕ್ಕೆ ಹೇಳಿದ ಮಾತೇ ಸ್ವದೇಶಿಗೂ ಅನ್ವಯಿಸುತ್ತದೆ. 'ಸ್ವದೇಶಿಯನ್ನು ಪಾಲಿಸುತ್ತ ಸತ್ತರೂ ಚಿಂತೆಯಿಲ್ಲ, ಪರದೇಶಿ ಭಯಾನಕ'.

ಸ್ವದೇಶಿಯನ್ನು ಅರ್ಥ ಮಾಡಿಕೊಳ್ಳದಿದ್ದಾಗಲೇ ಎಲ್ಲಾ ಗಡಿಬಿಡಿ. ನನ್ನ ಕುಟುಂಬದ ಮೋಹದಿಂದ ಅದನ್ನು ಪೋಷಿಸಲು ಕಳವು ಮಾಡಿದರೆ ಅದು ಸ್ವದೇಶಿಯಲ್ಲ. ಕುಟುಂಬಕಾಗಿ ನಾನು ನ್ಯಾಯವಾಗಿ ಮಾಡಬೇಕಾದುದನ್ನು ಮಾಡಬೇಕು. ಅದು ಧರ್ಮ. ಆ ಧರ್ಮಪಾಲನೆಯೇ ನನಗೆ ಸರ್ವವ್ಯಾಪಿ ಧರ್ಮದ ಜ್ಞಾನವಾಗಬೇಕು. ಸ್ವಧರ್ಮದ ಪಾಲನೆಯಿಂದ ಪರಧರ್ಮಿಗಾಗಲಿ ಪರಧರ್ಮಕ್ಕಾಗಲಿ ಎಂದಿಗೂ ಹಾನಿಯಾಗದು ! ಆಗಬಾರದು. ಹಾನಿಯಾದರೆ ನಾವು ಹಿಡಿದ ಧರ್ಮ ಸ್ವಧರ್ಮವಲ್ಲ, ಸ್ವಾಭಿಮಾನ. ಅದನ್ನು ಬಿಡಬೇಕು.

ಸ್ವದೇಶಿ ಧರ್ಮವನ್ನು ಪಾಲಿಸುವಾಗ ಮತ್ತೊಮ್ಮೆ ತನ್ನ ಕುಟುಂಬವನ್ನು ಬಲಿದಾನ ಕೊಡಲೂ ಬೇಕಾಗಬಹುದು. ಹಾಗೆ ಮಾಡಿದಾಗ ಅದರಿಂದಲೂ ಕುಟುಂಬದ ಸೇವೆಯಾಗಬೇಕು. ತನ್ನನ್ನು ತಾನು ಕಳೆದುಕೊಂಡು ತನ್ನ ತಾನುಳಿಸಿಕೊಂಡಂತೆ, ಕುಟುಂಬವನ್ನು ಕಳೆದುಕೊಂಡು ಕುಟುಂಬವನ್ನು ಕಾಪಾಡಬಹುದು. ದೃಷ್ಟಾಂತಕ್ಕಾಗಿ ; ನಮ್ಮೂರಿಗೆ

ಪ್ಲೇಗಿನ ಪಿಡುಗು ಬಡಿಯಿತು ಎನ್ನಿ. ಪ್ಲೇಗು ಬಡಿದ ರೋಗಿಗಳ ಸೇವೆ ಮಾಡುತ್ತ ನಾನೂ ನನ್ನ ಹೆಂಡತಿ ಮಕ್ಕಳೂ ಎಲ್ಲರೂ ರೋಗಕ್ಕೆ ತುತ್ತಾಗಿ ಸತ್ತೆವೆನ್ನಿ. ಅದರಿಂದ ನಾನು ನನ್ನ ಕುಟುಂಬವನ್ನು ಕೊಂದಂತಾಗಲಿಲ್ಲ, ಕುಟುಂಬದ ಸೇವೆ ಮಾಡಿದೆ. ಸ್ವದೇಶಿಯಲ್ಲಿ ಸ್ವಾರ್ಥವಿಲ್ಲ, ಆದರೆ ಅದು ಶುದ್ಧ ಸ್ವಾರ್ಥ. ಶುದ್ಧ ಸ್ವಾರ್ಥ ಎಂದರೆ ಪರಮಾರ್ಥ. ಶುದ್ಧದೇಶಿಯೆಂದರೆ ಪರಮಾರ್ಥದ ಪರಾಕಾಷ್ಠೆ.

ಈ ವಿಚಾರಧಾರೆಯನ್ನು ಅನುಸರಿಸಿಯೇ ನಾನು ಖಾದಿಯಲ್ಲಿ ಶುದ್ಧ ಸಾಮಾಜಿಕ ಧರ್ಮವನ್ನು ಕಂಡೆ. 'ಈ ದೇಶದಲ್ಲಿ ಈ ಕಾಲಕ್ಕೆ ಎಲ್ಲರೂ ಅಗತ್ಯವಾಗಿ ಪಾಲಿಸಬೇಕಾದ, ಎಲ್ಲರೂ ಸುಲಭವಾಗಿ ತಿಳಿದುಕೊಳ್ಳಬಲ್ಲ ಸ್ವದೇಶೀ ಧರ್ಮ ಯಾವುದು? ಎಲ್ಲರೂ ಸುಲಭವಾಗಿ ಪಾಲಿಸಬಲ್ಲ, ಹಿಂದೂಸ್ಥಾನದ ಈ ಕೋಟ್ಯಾಂತರ ಜನರನ್ನು ರಕ್ಷಿಸಬಲ್ಲ ಸ್ವದೇಶೀ ಧರ್ಮ ಯಾವುದು ?' — ಈ ಪ್ರಶ್ನೆ ಹಾಕಿಕೊಂಡೆ. ಉತ್ತರ ಬಂತು ಖಾದಿ; ಖಾದಿಯೊಂದೇ ಇದೆಲ್ಲಕ್ಕೂ ಉತ್ತರ.

ಖಾದಿಯ ಮೂಲಕ ನಾವು ಸ್ವದೇಶೀ ಧರ್ಮವನ್ನು ಪಾಲಿಸಿದರೆ ಪರದೇಶಿ ಗಿರಣಿಗಳವರಿಗೆ ನಷ್ಟವಾದೀತೆಂದು ಯಾರೂ ಭಾವಿಸಬೇಕಾಗಿಲ್ಲ. ಕಳ್ಳ ತಾನು ಕದ್ದ ಪದಾರ್ಥವನ್ನು ಹಿಂದಕ್ಕೆ ಕೊಟ್ಟರೆ, ಕದಿಯದಂತೆ ಅವನಿಗೆ ಅಡ್ಡಿ ಮಾಡಿದರೆ, ಅವನಿಗಾದ ನಷ್ಟವೇನು ? ಲಾಭವೇ ಆಯಿತು. ಹೆಂಡ ಕುಡಿಯುವವರು ಕುಡಿತವನ್ನು, ಅಫೀಮು ತಿನ್ನುವವರು ಅಫೀಮನ್ನು ಬಿಟ್ಟರೆ ಹೆಂಡದ ಅಂಗಡಿಯವನಿಗೆ ಅಫೀಮಿನಂಗಡಿಯವನಿಗೆ ನಷ್ಟವೇನಾಗಲಿಲ್ಲ, ಲಾಭವೇ ಆಯಿತು. ಈ ಪಾಪದ ಸಂಪಾದನೆ ನಾಶವಾದರೆ ಅವನಿಗಾಗಲಿ ಜಗತ್ತಿಗಾಗಲಿ ಕಿಂಚಿತ್ತೂ ನಷ್ಟವಿಲ್ಲ ; ಲಾಭವೇ.

ಆದರೆ ಹೇಗೋ ಒಂದೆರಡೆಳೆ ದಾರವನ್ನು ರಾಟೆಯಲ್ಲಿ ನೂತು ಖಾದಿ ಬಟ್ಟೆ ತೊಟ್ಟರೆ ಸ್ವದೇಶೀ ಧರ್ಮದ ಪೂರ್ಣ ಪಾಲನೆಯಾಗಲಿಲ್ಲ. ಹಾಗೆ ತಿಳಿದವರು ಭ್ರಾಂತಿಯಲ್ಲಿ ಮುಳುಗಿದ್ದಾರೆ. ಸಾಮಾಜಿಕ ಸ್ವದೇಶಿಗೆ ಖಾದಿ ಮೊದಲನೇ ಮೆಟ್ಟಿಲು ; ಸ್ವದೇಶಿಯ ಕೊನೆಯಲ್ಲ. ಬಟ್ಟೆ ಮಾತ್ರ ಖಾದಿ, ಉಳಿದುದೆಲ್ಲವೂ ಪರದೇಶಿ – ಇಂಥವರು ಅನೇಕರು. ಇವರನ್ನು ಸ್ವದೇಶೀ ಧರ್ಮಪಾಲಕರು ಎನ್ನಲು ಸಾಧ್ಯವಿಲ್ಲ. ಇವರು ನೀರು ಹರಿದತ್ತ ಹೋಗುವ

ಜನ. ಸ್ವದೇಶೀ ವ್ರತವನ್ನು ಪಾಲಿಸುವವನು ತನ್ನ ನೆರೆಹೊರೆಯನ್ನು ನಿರೀಕ್ಷಿಸಿ ಅವರು ಕೈಯಿಂದ ಮಾಡಿದ ಪದಾರ್ಥಗಳನ್ನೇ ಕೊಂಡು ಸಾಧ್ಯವಿದ್ದಷ್ಟು ಅವರ ಸೇವೆ ಮಾಡಿಯಾನು, ಸ್ವದೇಶೀ ಪದಾರ್ಥ ತುಟ್ಟಿಯಾಗಲಿ ಕೀಳುತರದ್ದಾಗಲಿ ಅದನ್ನೇ ಕೊಂಡಾನು. ಆ ದೋಷಗಳನ್ನು ಅವರು ಸುಧಾರಿಸಿಕೊಳ್ಳುವಂತೆ ಹೇಳಿ ಪ್ರಯತ್ನಿಸಿಯಾನು. ಆ ದೋಷಗಳಿಗಂಜಿ ಅವನ್ನು ಬಿಟ್ಟು ಪರದೇಶೀ ಪದಾರ್ಥಗಳನ್ನು ಉಪಯೋಗಿಸಲಾರ. ಅಂಥವನು ವ್ರತಧಾರಿ.

ಆದರೆ ಸ್ವದೇಶೀ ಧರ್ಮವನ್ನರಿತವನು ತನ್ನ ಬಾವಿಯೊಳಗೇ ಮುಳುಗ ಲಾರ. ಪರದೇಶದ್ದಾದಮಾತ್ರಕ್ಕೇ ಅದನ್ನು ಬಿಡುವುದು, ಸ್ವದೇಶದಲ್ಲಿ ತಯಾರಾಗಲಾರದ ಅಥವಾ ಬಹು ಕಷ್ಟಸಾಧ್ಯವಾದ ಪದಾರ್ಥಗಳನ್ನು ಪರ ದೇಶದ ಮೇಲಣ ದ್ವೇಷದಿಂದ ಸ್ವದೇಶದಲ್ಲಿ ಮಾಡುತ್ತ ಕೂಡುವುದು ಸ್ವದೇಶೀ ಧರ್ಮವಲ್ಲ ; ರಾಷ್ಟ್ರದ ಹಣ – ಕಾಲಗಳ ಅಪವ್ಯಯ. ಸ್ವದೇಶೀ ಧರ್ಮವನ್ನು ಪಾಲಿಸುವವನು ಪರದೇಶವನ್ನು ದ್ವೇಷಿಸಲಾರ. ಪೂರ್ಣ ಸ್ವದೇಶಿಯಲ್ಲಿ ಯಾರ ದ್ವೇಷವೂ ಇಲ್ಲ. ಸ್ವದೇಶಿ ಸಂಕುಚಿತ ಧರ್ಮವಲ್ಲ. ಪ್ರೇಮದಲ್ಲಿ ಅಹಿಂಸೆಯಲ್ಲಿ ಹುಟ್ಟಿಬಂದ ಸುಂದರ ಧರ್ಮ.

14. ವ್ರತಗಳ ಆವಶ್ಯಕತೆ

ಮಂಗಳ ಪ್ರಭಾತ, 14-10-1930

ಈ ಪತ್ರಮಾಲೆಯಲ್ಲಿ ವ್ರತಗಳ ಮಹತ್ವವನ್ನು ಕುರಿತು ಅಲ್ಲಲ್ಲಿ ಸ್ವಲ್ಪ ಬರೆದೇ ಇದೇನೆ, ಆದರೂ ಬಾಳಿನಲ್ಲಿ ವ್ರತಗಳು ಎಷ್ಟು ಅಗತ್ಯ ಎಂಬುದನ್ನು ಚರ್ಚಿಸುವುದು ಅಗತ್ಯ.

ಒಂದು ಪ್ರಬಲ ಸಂಪ್ರದಾಯವಿದೆ : ಇಂಥಿಂಥ ನಿಯಮಗಳನ್ನು ಪಾಲಿಸಬೇಕು ; ಅದು ಸರಿ. ಆದರೆ ಅವನ್ನೇ ವ್ರತವಾಗಿ ತೊಡುವ

---

* ಈ ಪ್ರವಚನ ಯರವಾಡಾ ಮಂದಿರದಲ್ಲಿ 1930ರಲ್ಲಿ ಬರೆದುದಲ್ಲ. 1931ರಲ್ಲಿ ಹೊರಗೆ ಬಂದ ಮೇಲೆ ಬರೆದುದು. ರಾಜಕೀಯ ವಿಷಯಗಳನ್ನು ಕುರಿತು ಬರೆಯ ಬಾರದೆಂಬ ನಿಯಮವಿತ್ತು ಸೆರೆಯಲ್ಲಿ. ರಾಜಕೀಯದ ಪರೋಕ್ಷ ಸಂಬಂಧವಿಲ್ಲದೆ ಸಾಧ್ಯವಿಲ್ಲ ಎಂದು ಇದನ್ನು ಆಗ ಬರೆಯಲಿಲ್ಲ.

ಅಗತ್ಯವಿಲ್ಲ ; ಈ ಮಾತು ಮನೋದೌರ್ಬಲ್ಯ ಸೂಚಕ, ಸ್ವಲ್ಪ ಮಟ್ಟಿಗೆ ಹಾನಿಕಾರಕ ಎಂದು ಹೇಳುತ್ತಾರೆ. ಒಂದು ವ್ರತ ಹಿಡಿದ ಮೇಲೆ ಆ ನಿಯಮ ಒಂದು ಅತಂಕ ರೂಪದ್ದು ಅಥವಾ ಪಾಪಮಯವಾದುದು ಎಂದು ತಿಳಿದರೆ ಆಗಲೂ ಆ ವ್ರತವನ್ನು ಬಿಡದಂತೆ ನಡೆಸಬೇಕೆಂದರೆ ಎಷ್ಟು ಅಸಹ್ಯ ಎನ್ನುತ್ತಾರೆ. ಒಂದು ಉದಾಹರಣೆ ಕೊಟ್ಟು, ಹೆಂಡ ಕುಡಿಯದಿರುವುದು ಒಳ್ಳೆಯದು, ಕುಡಿಯಬಾರದು ; ಆದರೆ ಯಾವಾಗಲಾದರೂ ಒಂದು ಸಲ ಕುಡಿದರೆ ಏನು ತಪ್ಪು ? ಔಷಧಕ್ಕಾಗಿ ಕುಡಿದರೆ ತಪ್ಪಿಲ್ಲವಲ್ಲ. ಆದುದ ರಿಂದ ಕುಡಿಯುವುದಿಲ್ಲವೆಂದು ವ್ರತ ಹಿಡಿದರೆ ನಮ್ಮ ಕೈಕಾಲನ್ನು ನಾವೇ ಕತ್ತರಿಸಿಕೊಂಡಂತೆ. ಇದೇ ಮಾತೇ ಇತರ ವಿಷಯಗಳಿಗೂ ಒಳ್ಳೆಯದ ಕ್ಕಾಗಿ ಸುಳ್ಳು ಹೇಳಬಾರದೇಕೆ ?

ಈ ತರ್ಕದಲ್ಲಿ ನನಗೆ ಹುರುಳು ಕಾಣದು. ವ್ರತ ಎಂದರೆ ದೃಢ ನಿಶ್ಚಯ. ಅಡ್ಡಿ-ಆಡಚಣೆಗಳನ್ನು ದಾಟಿ ಹೋಗಲಿಕ್ಕೇ ವ್ರತಗಳ ಅವಶ್ಯ ಕತೆ. ಅನನುಕೂಲವಾದರೂ ಭಂಗವಾಗದಿದ್ದರೆ ಅದು ದೃಢನಿಶ್ಚಯ. ಇಂಥ ದೃಢನಿಶ್ಚಯವಿಲ್ಲದೆ ಮನುಷ್ಯ ಉತ್ತರೋತ್ತರ ಮೇಲೇರಲಾಗ ಎಂಬುದಕ್ಕೆ ಇಡೀ ಲೋಕದ ಅನುಭವೇ ಸಾಕ್ಷಿ. ಆದರೆ ಪಾಪವನ್ನು ಮಾಡುವ ವ್ರತ ಇರಲಾರದು. ಮೊದಲು ಪುಣ್ಯವಾಗಿ ಕಂಡುಬಂದ ವ್ರತ ಆಮೇಲೆ ಪಾಪ ಎಂದು ನಿರ್ಧರವಾದರೆ ಆ ವ್ರತವನ್ನು ಬಿಡಬೇಕಾದುದೇ ಧರ್ಮ. ಆದರೆ ಇಂಥ ಸಂದೇಹಗ್ರಸ್ತ ವಿಷಗಳ ಬಗ್ಗೆ ಯಾರೂ ವ್ರತ ತೊಡರು ; ತೊಡಲೂ ಬಾರದು. ಸರ್ವಮಾನ್ಯವಾದ ಧರ್ಮಗಳ ವಿಷಯದಲ್ಲಿ, ನಮಗೆ ಅದರ ಆಡಚಣೆ ರೂಢಿಗತವಾಗದಿರುವಾಗ, ವ್ರತ ಹಿಡಿಯಬೇಕು. ಅಂಥ ಸಂದರ್ಭಗಳಲ್ಲಿ ಪಾಪದ ಸಂಭವ ಬರೀ ಊಹೆ. ನಾನು ಸತ್ಯ ಹೇಳಿದರೆ ಯಾರಿಗಾದರೂ ಹಾನಿಯಾದೀತಲ್ಲ ಎಂದು ಸತ್ಯವಾದಿ ಆಲೋಚಿಸುತ್ತ ಕುಳಿತುಕೊಳ್ಳುವುದಿಲ್ಲ. ಸತ್ಯದಿಂದ ಲೋಕದಲ್ಲಿ ಯಾರಿಗೂ ಹಾನಿಯಾಗದು ಎಂಬ ದೃಢವಿಶ್ವಾಸ ಅವನಿಗಿರಬೇಕು. ಮದ್ಯಪಾನದ ವಿಷಯದಲ್ಲೂ ಇದೇ. ಆ ವ್ರತ ಹಿಡಿಯುವಾಗಲೇ ಔಷಧಕ್ಕಾಗಿ ಅದರಲ್ಲಿ ಅಪವಾದಕ್ಕೆ ಅವಕಾಶ ಮಾಡಬೇಕು ; ಇಲ್ಲವೆ ವ್ರತ ಹಿಡಿದ ಮೇಲೆ ಏನೇ ಆಗಲಿ, ಪ್ರಾಣವೇ ಹೋಗಲಿ, ಅದನ್ನು ನಡೆಯಿಸಬೇಕು. ಔಷಧರೂಪದಲ್ಲಿ ಹೆಂಡ ಕುಡಿಯಲಿಲ್ಲ

ಈ ದೇಹ ಬಿದ್ದೇ ಹೋಯಿತು. ಏನಾಯಿತು ? ಹೆಂಡ ಕುಡಿದರೆ ತಾನೆ ಈ ದೇಹ ಉಳಿದೇ ಉಳಿಯುತ್ತದೆಂದು ಹೇಳಬಲ್ಲವರು ಯಾರು ? ಒಂದು ವೇಳೆ ಆ ಗಳಿಗೆಯಲ್ಲಿ ಆ ದೇಹವನ್ನು ಕಾಪಾಡಿದೆವು. ಮರುಗಳಿಗೆಯಲ್ಲಿ ಮತ್ತೇ ನಾದರೂ ಕಾರಣದಿಂದ ದೇಹ ಬಿದ್ದು ಹೋಗುವುದಿಲ್ಲ ಎಂಬ ಭರವಸೆ ಯೇನಿದೆ ? ಅದಕ್ಕೆ ಬದಲು ಶರೀರ ಬಿದ್ದು ಹೋದರೂ ಚಿಂತೆಯಿಲ್ಲ, ಹೆಂಡ ಕುಡಿಯೆ ಎಂಬವನ ದೃಷ್ಟಾಂತ ಹೆಂಡ ಕುಡಿಯುವ ಜನರ ಮೇಲೆ ಎಂಥ ಅದ್ಭುತ ಪ್ರಭಾವ ಬೀರೀತೋ, ಅದರಿಂದ ಲೋಕಕ್ಕೆ ಎಷ್ಟು ಲಾಭ ವಾದೀತೋ ! ಶರೀರ ಇರಲಿ ಹೋಗಲಿ ನನಗೆ ಧರ್ಮಪಾಲನೆಯೇ ಕರ್ತವ್ಯ – ಎಂಬ ಭವ್ಯ ನಿಶ್ಚಯ ಮಾಡಿದವನೇ ಎಂದಾದರೊಂದು ದಿನ ಈಶ್ವರನ ದರ್ಶನವನ್ನು ಪಡೆಯಬಲ್ಲ.

ವ್ರತ ಹಿಡಿಯುವುದು ದೌರ್ಬಲ್ಯ ಸೂಚಕವಲ್ಲ, ಬಲಸೂಚಕ. ಇಂಥ ದನ್ನು ಮಾಡುವುದು ಸರಿ ಎಂದಮೇಲೆ ಮಾಡಲೇಬೇಕು ; ನಿಶ್ಚಯವನ್ನೇ ವ್ರತ ಎನ್ನುತ್ತಾರೆ. ಇದರಲ್ಲಿ ಬಲವಿದೆ. ಇದನ್ನು ವ್ರತ ಎನ್ನಬೇಡಿ, ಬೇರೆ ಹೆಸರಿನಿಂದ ಕರೆದರೂ ಚಿಂತೆಯಿಲ್ಲ. ಆದರೆ ಸಾಧ್ಯವಿದ್ದಷ್ಟು ಮಾಡೇ ತ್ತೇನೆ ಎನ್ನುವವನು ತನ್ನ ದೌರ್ಬಲ್ಯವನ್ನೋ ಅಭಿಮಾನವನ್ನೋ ತೋರಿಸುತ್ತಾನೆ. ಅದನ್ನು ಅವನು ನಮ್ರತೆ ಎಂದರೂ ಅಷ್ಟೇ. ಅದರಲ್ಲಿ ನಮ್ರತೆಯ ಗಂಧವೇ ಇಲ್ಲ. ನನ್ನ ಬಾಳಿನಲ್ಲಿಯೂ ಇತರರ ಬಾಳಿನಲ್ಲಿಯೂ ನೋಡಿದೇನೆ : 'ಈ ಸಾಧ್ಯ ಇದ್ದಷ್ಟು' ಎಂಬ ಮಾತು ಶುಭ ನಿಶ್ಚಯದಲ್ಲಿ ವಿಷ ಬೆರಸಿಬಿಡುತ್ತದೆ 'ಸಾಧ್ಯ ಇದ್ದಷ್ಟು' ಮಾಡುತ್ತೇನೆ ಎಂದರೆ ಇದಿರಿಗೆ ಬಂದ ಮೊಟ್ಟ ಮೊದಲನೆ ಆತಂಕಕ್ಕೆ ಸೋತುಬೀಳುತ್ತೇನೆ ಎಂದು. 'ಸಾಧ್ಯವಿದ್ದಷ್ಟು ಸತ್ಯವಾಗಿ ನಡೆಯುತ್ತೇನೆ' ಎಂಬುದರಲ್ಲಿ ಅರ್ಥವೇ ಇಲ್ಲ. ಇಂಥ ತಾರೀಖಿಗೆ ಇಷ್ಟು ಹಣವನ್ನು 'ಸಾಧ್ಯ ಇದ್ದಷ್ಟು' ತೀರಿಸುತ್ತೇನೆ ಎಂದು ಪತ್ರ ಬರೆದುಕೊಟ್ಟರೆ ಯಾರು ಹಣ ಕೊಡುತ್ತಾರೆ ? ಅದೇ ರೀತಿ ಸಾಧ್ಯವಿದ್ದಷ್ಟು ಸತ್ಯವನ್ನು ಪಾಲಿಸುತ್ತೇನೆ ಎಂಬ ಪತ್ರವು ದೇವರ ಅಂಗಡಿ ಯಲ್ಲಿ ನಡೆಯದು.

ದೇವರು ಸ್ವಯಂ ನಿಶ್ಚಯದ, ವ್ರತದ ಸಂಪೂರ್ಣಮೂರ್ತಿ. ಅವನ ನಿಯಮಗಳಿಗೆ ಒಂದು ಅಣುವಿನಷ್ಟಾದರೂ ತಪ್ಪಿದರೆ ಅವನ ಈಶ್ವರತ್ವವೇ

ಉಳಿಯದು. ಸೂರ್ಯ ಮಹಾವ್ರತಧಾರಿ. ಅವನಿಂದಲೇ ಜಗತ್ತಿನ ಕಾಲದ ನಿರ್ಮಾಣ, ಅವನಿಂದಲೇ ಶುದ್ಧಪಂಚಾಂಗದ ರಚನೆ ಸಾಧ್ಯ. ಸೂರ್ಯ ಸದಾ ಮೂಡುತ್ತಾನೆ, ಮೂಡುತ್ತಲೇ ಇರುತ್ತಾನೆ. ಆದುದರಿಂದಲೇ ನಾವು ಸುರಕ್ಷಿತರು. ಸಮಸ್ತ ವ್ಯಾಪಾರಕ್ಕೂ ಆಧಾರ ಒಂದು ದೃಢ ಪ್ರತಿಜ್ಞೆ. ವ್ಯಾಪಾರಿಗಳು ಪರಸ್ಪರ ಮಾತಿಗೆ ಕಟ್ಟುಬೀಳದಿದ್ದರೆ ವ್ಯಾಪಾರವೇ ನಿಂತು ಹೋದೀತು. ವ್ರತ ಸರ್ವವ್ಯಾಪಕ. ಹೀಗಿರುವಾಗ ನಮ್ಮ ಜೀವನವನ್ನು ದೃಢಗೊಳಿಸುವ ಪ್ರಶ್ನೆ ಬಂದಾಗ, ಈಶ್ವರದರ್ಶನದ ಮಾತು ಬಂದಾಗ ನಮಗೆ ವ್ರತ ಅಗತ್ಯವಾಗುತ್ತದೆ. ಆದುದರಿಂದ ವ್ರತಗಳ ಅವಶ್ಯಕತೆಯ ಬಗ್ಗೆ ನಮಗೆ ಎಳ್ಳಷ್ಟೂ ಸಂಶಯವಿರಲಾರದು.

15. ಯಜ್ಞ—1

ನಾವು ಪದೇ ಪದೇ ಯಜ್ಞ ಎಂಬ ಮಾತನ್ನು ಬಳಸುತ್ತೇವೆ. ನೂಲುವುದನ್ನು ದಿನಚರಿಯ ಮಹಾಯಜ್ಞವಾಗಿ ಮಾಡಿದೇವೆ. ಆದುದರಿಂದ ಯಜ್ಞ ಶಬ್ದದ ನಾನಾ ಅರ್ಥಗಳನ್ನು ಅರಿತುಕೊಳ್ಳುವುದು ಅಗತ್ಯ.

ಯಜ್ಞ ಎಂದರೆ ಯಾವ ಬಗೆಯ ಪ್ರತಿಫಲಾಪೇಕ್ಷೆಯೂ, ಐಹಿಕ-ಪಾರಮಾರ್ಥಿಕ ಯಾವುದೂ ಇಲ್ಲದೆ ಪರಹಿತಾರ್ಥವಾಗಿ ಮಾಡಿದ ಕರ್ಮ. ಕರ್ಮ ಎಂದರೆ ಇಲ್ಲಿ ವ್ಯಾಪಕ ಅರ್ಥ ; ವಿಚಾರ, ಮಾತು, ಕೃತಿ ಎಲ್ಲವೂ ಕರ್ಮ. ಪರ ಎಂದರೆ ಬರೀ ಮಾನವರಲ್ಲ, ಸಮಸ್ತ ಪ್ರಾಣಿಕೋಟಿ. ಆದುದರಿಂದ ಮಾನವಜಾತಿಯ ಕಲ್ಯಾಣಕ್ಕಾಗಿಯಾದರೂ ಪ್ರಾಣಿಗಳನ್ನು ಆಹುತಿ ಕೊಡುವುದು ಯಜ್ಞವಲ್ಲ. ಅಹಿಂಸೆಯ ದೃಷ್ಟಿಯಿಂದಲೂ ಅದು ಯಜ್ಞವಲ್ಲ. ವೇದಗಳಲ್ಲಿ ಪಶುಯಜ್ಞದ ಪ್ರಸ್ತಾಪವಿದ್ದರೂ ಬಾಧಕವಿಲ್ಲ. ಸತ್ಯ-ಅಹಿಂಸೆಗಳ ಒರೆಗಲ್ಲಿಗೆ ಇಂಥ ಯಜ್ಞ ನಿಲ್ಲಲಾರವು. ನಮಗಷ್ಟೇ ಸಾಕು. ನನಗೆ ವೇದಗಳ ಜ್ಞಾನವಿಲ್ಲ, ಒಪ್ಪಿಕೊಳ್ಳುತ್ತೇನೆ. ಈ ಲೋಪದಿಂದ ನನಗೇನೂ ಚಿಂತೆಯಿಲ್ಲ. ವೈದಿಕ ಸಮಾಜದಲ್ಲಿ ಈ ಬಗೆಯ ಪಶುಯಜ್ಞ ಇತ್ತು ಎಂದು ಸಿದ್ಧ ಮಾಡಿದರೂ, ಅಹಿಂಸೆಯ ಉಪಾಸಕರಿಗೆ ಅದೊಂದು ಮೇಲ್ಪಂಕ್ತಿಯಾಗಲಾರದು.

ವಿಶಾಲವಾದ ಕ್ಷೇತ್ರದಲ್ಲಿ ಅದಷ್ಟು ಹೆಚ್ಚು ಜನರ ಕಲ್ಯಾಣಕ್ಕೆ

ಸಹಾಯಕವಾಗಿರಬೇಕು ; ಅನಾಯಾಸವಾಗಿ ಆತ್ಯಧಿಕ ಸಂಖ್ಯೆಯ ಜನ ಸ್ತ್ರೀಪುರುಷರು ಅದನ್ನು ಮಾಡುವಂತಿರಬೇಕು; ಇಂಥ ಕರ್ಮ-ಕೆಲಸ ಮಹಾಯಜ್ಞವಾಗಬಲ್ಲದು, ಉತ್ತಮವಾದ ಒಂದಕ್ಕಾಗಿ ಇನ್ನೊಂದನ್ನು ಬಲಿ ಕೊಡುವುದು ಆ ರೀತಿಯ ಯೋಜನೆ ಮಾಡುವುದು, ಯಜ್ಞವೇ ಅಲ್ಲ, ಮಹಾ ಯಜ್ಞದ ಮಾತೇನು ಬಂತು? ಗೀತೆ ಹೇಳುತ್ತದೆ ಅನುಭವ ತೋರಿಸಿ ಕೊಡುತ್ತಿದೆ—ಯಜ್ಞಾರ್ಥವಾಗಿ ಮಾಡದಿದ್ದ ಕರ್ಮವೆಲ್ಲವೂ ಬಂಧನ.

ಈ ಅರ್ಥದಲ್ಲಿ ಯಜ್ಞವಿಲ್ಲದ ಒಂದು ಗಳಿಗೆಯೂ ಈ ಲೋಕವಿರ ಲಾರದು. ಆದುದರಿಂದಲೇ ಗೀತೆ ಎರಡನೆಯ ಅಧ್ಯಾಯದಲ್ಲಿ ಸಾಂಖ್ಯ ಅಥವಾ ಜ್ಞಾನವನ್ನು ಕುರಿತು ಹೇಳಿ. ಮೂರನೆಯ ಅಧ್ಯಾಯದಲ್ಲಿ ಆ ಜ್ಞಾನವನ್ನು ಪಡೆಯುವುದು ಹೇಗೆಂಬುದನ್ನು ಹೇಳುತ್ತದೆ. ಆ ಸೃಷ್ಟಿ ಹುಟ್ಟಿದಾಗಲೇ ಯಜ್ಞವೂ ಹುಟ್ಟಿತು ಎಂದು ಘೋಷಿಸುತ್ತದೆ. ಆ ದೇಹವನ್ನು ನಮಗೆ ಕೊಟ್ಟಿರುವುದು ಸಮಸ್ತ ಸೃಷ್ಟಿಯ ಸೇವೆಗಾಗಿ. ಆದುದರಿಂದಲೇ ಯಜ್ಞ ಮಾಡದೆ ಹೊಟ್ಟೆಗೆ ತಿನ್ನುವವನ್ನು 'ಕಳ್ಳ-ಅನ್ನ'ವನ್ನು ತಿಂದ ಎನ್ನುತ್ತದೆ ಗೀತೆ. ಪವಿತ್ರ ಜೀವನವನ್ನು ನಡೆಸಬಯಸುವವನ ಪ್ರತಿಯೊಂದು ಕೃತಿಯೂ ಯಜ್ಞವಾಗಬೇಕು. ಯಜ್ಞ ನಾವು ಹುಟ್ಟಿದಾಗಲೇ ಬಂತು. ಅಜೀವವೂ ನಾವು ಸಾಲಗಾರರು. ಜೀತದಾಳಿಗೆ ಅವನ ಧಣಿ ಅನ್ನ-ಬಟ್ಟೆ ಕೊಡುತ್ತಾನೆ. ಅದೇ ರೀತಿ ಜಗನ್ನಿಯಾಮಕ ನಮಗೆ ಕೊಟ್ಟುದನ್ನು ಕೃತಜ್ಞತೆಯಿಂದ ಸ್ವೀಕರಿಸಬೇಕು. ನಮಗೆ ದೊರೆತದು ಒಂದು ದಾನವೆಂದು ತಿಳಿಯಬೇಕು. ನಾವು ಸಾಲಗಾರರು, ಸಾಲ ತೀರಿಸಿದುದಕ್ಕೆ ನಮಗೇನೂ ಬಹುಮಾನ ಕೊಡಬೇಕಾಗಿಲ್ಲ. ಅದರಿಂದ ನಮಗೇನೂ ನಿಗದಿದ್ದರೆ ಒಡೆಯನನ್ನು ತೆಗಳುವ ಕಾರಣವಿಲ್ಲ. ನಮ್ಮ ದೇಹ ಅವನದು. ಇದನ್ನು ಕಾಪಾಡಬಹುದು, ಬಿಸುಡಬಹುದು ; ಅವನ ಇಷ್ಟ. ಇದರಲ್ಲಿ ದೂರಿಗೆ ಅವಕಾಶವಿಲ್ಲ. ಕನಿಕರಕ್ಕೂ ಇಲ್ಲ. ಭಗವಂತನ ಯೋಜನೆಯಲ್ಲಿ ನಮ್ಮ ಸ್ಥಾನವೇನೆಂಬುದನ್ನು ಅರಿತರೆ ಇದು ಸಹಜಸ್ಥಿತಿ, ಸಂತೋಷಕರ ಸ್ಥಿತಿ, ನಾವು ಬಯಸಬಹುದು ದಾದುದು ಎನಿಸುತ್ತದೆ. ಈ ಪರಮಾನಂದವನ್ನು ಅನುಭವಿಸಲು ಮನುಷ್ಯ ನಿಗೆ ಬಹಳ ದೃಢವಾದ ಭಕ್ತಿ ಬೇಕು. 'ನೀನು ಎಳ್ಳಷ್ಟೂ ಚಿಂತಿಸಬೇಡ' ಎಂಬುದೇ ಎಲ್ಲಾ ಧರ್ಮಗಳ ಸಂದೇಶ.

ಇವರಿಂದ ಯಾರೂ ಭೀತರಾಗಬೇಕಾದುದಿಲ್ಲ. ಪರಿಶುದ್ಧ ಮನಸ್ಸಿನಿಂದ ಸೇವಾಪರಾಯಣನಾದವನಿಗೆ ದಿನೇ ದಿನೇ ಸೇವೆ ಎಷ್ಟು ಹೆಚ್ಚು ಹೆಚ್ಚು ಅಗತ್ಯ ಎಂಬುದು ತಿಳಿಯುತ್ತದೆ. ಅವನ ಶ್ರದ್ಧೆ ದಿನವೂ ಬೆಳೆಯುತ್ತದೆ. ಸ್ವಾರ್ಥವನ್ನು ಬಿಡದವನು ಸೇವಾಮಾರ್ಗವನ್ನು ತುಳಿಯಲಾರ. ತಿಳಿದೋ ತಿಳಿಯದೆಯೋ ಪ್ರತಿಯೊಬ್ಬರೂ ಏನಾದರೊಂದು ಸೇವೆಮಾಡುತ್ತೇವೆ. ಈ ಸೇವೆಯ ಅಭ್ಯಾಸವನ್ನೇ ಉದ್ದೇಶ್ಯಪೂರ್ವಕ ಮಾಡಿದರೆ, ನಮ್ಮ ಸೇವಾಸಕ್ತಿ ಕ್ರಮೇಣ ಬದಲಾಗುತ್ತದೆ. ಅದರಿಂದ ನಮಗಷ್ಟೇ ಅಲ್ಲ, ಇಡೀ ಜಗತ್ತಿಗೇ ಆನಂದವಾಗುತ್ತದೆ.

16 ಯಜ್ಞ-2

ಯಜ್ಞವನ್ನು ಕುರಿತು ಕಳೆದ ವಾರ ಬರೆದೆ. ಇನ್ನೂ ಬರೆಯಬೇಕು ಎನಿಸುತ್ತದೆ. ಮಾನವಸೃಷ್ಟಿಯ ಜೊತೆಯಲ್ಲಿಯೇ ನಿರ್ಮಿತವಾದ ಈ ತತ್ತ್ವವನ್ನು ಇನ್ನೂ ಸ್ವಲ್ಪ ವಿಚಾರಮಾಡುವುದು ಯೋಗ್ಯವಾದೀತು. ಯಜ್ಞ ಎಂದರೆ ಇಡೀ ದಿನ ಇಪ್ಪತ್ನಾಲ್ಕು ಗಂಟೆಯೂ ಮಾಡಬೇಕಾದ ಕರ್ತವ್ಯ—ಸೇವೆ. ಅದರಿಂದಲೇ 'ಪರೋಪಕಾರಾಯ ಸತಾಂ ವಿಭೂತಯಃ' ಎಂಬ ಸೂತ್ರ ಅನುಚಿತ. ಉಪಕಾರದಲ್ಲಿ ಅನುಗ್ರಹದ ವಾಸನೆಯಿದೆ, ಏನೂ ಆಸೆಯಿಲ್ಲದೆ ಲೋಕಸೇವೆ ಮಾಡುವುದು ಯಾರ ಮೇಲೂ ಅನುಗ್ರಹವಲ್ಲ. ಸಾಲ ತೀರಿಸಿದಾಗ ನಮ್ಮ ಭಾರವೇ ಕಡಿಮೆಯಾಯಿತು, ನಿಮ್ಮ ಕರ್ತವ್ಯ ಪಾಲನೆಯಾಯಿತು. ಹಾಗೆಯೇ, ಸಜ್ಜನರು ಮಾತ್ರವೇ ಮಾನವಜಾತಿಗೆ ತಮ್ಮ ಶಕ್ತಿ ಸರ್ವಸ್ವವನ್ನು ಅರ್ಪಿಸಬೇಕೆಂದಲ್ಲ. ಎಲ್ಲರೂ ಅರ್ಪಿಸಬೇಕು. ಇದು ನಿಯಮವಾದರೆ ಬಾಳಿನಲ್ಲಿ ಭೋಗಕ್ಕೆ ಸ್ಥಾನವೇ ಇಲ್ಲ. ತ್ಯಾಗವೇ ಜೀವನಸೂತ್ರ. ಮೃಗಗಳು ಬೇರೆ, ಮನುಷ್ಯ ಬೇರೆ ಎಂದು ಮಾಡುವುದು ಈ ತ್ಯಾಗದ ಧರ್ಮವೇ.

ಹೀಗೆ ಅರ್ಥಮಾಡಿದರೆ ಬಾಳು ನೀರಸ, ಕಲಾವಿಹೀನ ಆಗುತ್ತದೆ. ಗೃಹಸ್ಥನಿಗೆ ಅದರಲ್ಲಿ ಸ್ಥಾನವೇ ಇಲ್ಲದಾಗುತ್ತದೆ ಎನ್ನುತ್ತಾರೆ ಕೆಲವರು. ತ್ಯಾಗ ಎಂದರೆ ಲೋಕವನ್ನು ಬಿಟ್ಟು ಕಾಡಿಗೆ ಹೋಗುವುದಲ್ಲ. ಜೀವನದ ಸಮಸ್ತ ಕಾರ್ಯಗಳಲ್ಲಿಯೂ ತ್ಯಾಗವೃತ್ತಿ ಓತಪ್ರೋತವಾಗಿರಬೇಕು. ಬಾಳು

ಬರೀ ಭೋಗವಲ್ಲ, ಕರ್ತವ್ಯ ಎಂದು ತಿಳಿದ ಗೃಹಸ್ಥನ ಗಾರ್ಹಸ್ಥ್ಯ ಮುಳುಗಿ ಹೋಗದು. ತ್ಯಾಗಬುದ್ಧಿಯಿಂದ ಕೆಲಸ ಮಾಡುವ ವರ್ತಕನ ಕೈಯಲ್ಲಿ ಕೋಟಿಗಟ್ಟಲೆ ರೂಪಾಯಿ ಓಡಾಡೀತು, ಆದರೆ ಅವನ ಶಕ್ತಿಯೆಲ್ಲ ಸೇವೆಗಾಗಿಯೇ ವಿನಿಯೋಗವಾಗುತ್ತದೆ. ಆದುದರಿಂದ ಅವನು ಮೋಸಮಾಡ, ಜೂಜಾಡ. ಸರಳ ಜೀವನವನ್ನು ನಡಸಿಯಾನು. ಲಕ್ಷಾಂತರ ಹಣ ಕಳೆದುಕೊಂಡರೂ ಚಿಂತೆಯಿಲ್ಲ. ಒಂದು ಜೀವಂತ ಪ್ರಾಣಿಗೂ ಅವನು ಹಿಂಸೆ ಮಾಡ. ಇಂಥ ವರ್ತಕ ಕೇವಲ ನನ್ನ ಕಲ್ಪನೆ ಎನ್ನಬೇಡಿ. ಇಂಥ ವರ್ತಕ ಬಹಳ ವಿರಳ, ಕೋಟಿಗೊಬ್ಬರು ಎಂಬುದು ನಿಜ. ಆದರೆ ಒಬ್ಬನಾದರೂ ಉದಾಹರಣೆಗಾಗಿ ಇದ್ದರೆ, ಇದು ಕಲ್ಪನೆಯಲ್ಲ. ವಢವಾಣಿನಲ್ಲಿ ಒಬ್ಬ ಉದಾರಿ ಸಿಂಪಿಗನಿದ್ದ, ನಾವೆಲ್ಲರೂ ಬಲ್ಲೆವು. ಅಂಥ ಒಬ್ಬ ನಾಪಿತನನ್ನು ನಾನು ಬಲ್ಲೆ. ಅಂಥ ನೇಕಾರನೊಬ್ಬನನ್ನು ನಾವೆಲ್ಲರೂ ಬಲ್ಲೆವು. ಸ್ವಲ್ಪ ಆಳವಾಗಿ ವಿಚಾರಿಸಿದರೆ, ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಸರ್ವ ಸಮರ್ಪಣೆ ಮಾಡಿದ ಜನರು ಸಿಕ್ಕೇ ಸಿಗುತ್ತಾರೆ. ಈ ಸರ್ವಸ್ವ ದಾನಿಗಳು ಕೆಲಸಮಾಡಿ ಬದುಕನ್ನು ನಡೆಸುತ್ತಾರೆ. ಆದರೆ ಬದುಕು, ಅನ್ನ-ಅವರ ಗುರಿಯಲ್ಲ. ಅವರು ಮಾಡುವ ಬದುಕಿನಿಂದ ಕೆಲಸ ಸಾಗುತ್ತದೆ, ಅನ್ನವೂ ಸಿಗುತ್ತದೆ. ಮೋತೀಲಾಲ ಸಿಂಪಿಗ ಕಡೆಯವರೆಗೂ ಸಿಂಪಿಗನಾಗಿಯೇ ಇದ್ದ. ಆದರೆ ಅವನ ಮನೋವೃತ್ತಿ ಬದಲಾಯಿತು. ಕೆಲಸ ಪೂಜೆಯಾಯಿತು. ಲೋಕಕಲ್ಯಾಣವನ್ನು ಅವನು ಚಿಂತಿಸತೊಡಗಿದ. ಅವನ ಬಾಳು ನಿಜವಾದ ಅರ್ಥದಲ್ಲಿ ಕಲಾಮಯವಾಯಿತು. ತ್ಯಾಗಮಯ ಜೀವನವೇ ಕಲೆಯ ಪರಾಕಾಷ್ಠೆ, ಪೂರ್ಣಾನಂದ. ಇದು ಭಾರ, ಏನೋ ಕಾಟ ಎಂದು ತಿಳಿದರೆ ಅದು ಯಜ್ಞವಲ್ಲ, ಭೋಗಸಾಧನೆಯಿಂದ ವಿನಾಶ, ತ್ಯಾಗಸಾಧನೆಯಿಂದ ಅಮರತ್ವ. ಆನಂದಕ್ಕೆ ಪ್ರತ್ಯೇಕ ಅಸ್ತಿತ್ವವಿಲ್ಲ. ನಮ್ಮ ಜೀವನದೃಷ್ಟಿಯನ್ನು ಅದು ಅವಲಂಬಿಸಿದೆ, ಒಬ್ಬನಿಗೆ ನಾಟಕದ ಪರದೆ ನೋಡಿದರೆ ಸಂತೋಷ. ಇನ್ನೊಬ್ಬನಿಗೆ ಆಕಾಶದಲ್ಲಿ ಕ್ರೀಡಿಸುವ ನಿರಂತರ ನವೋನವ ದೃಶ್ಯಗಳನ್ನು ಕಂಡರೆ ಆನಂದ. ಆನಂದ ವೈಯುಕ್ತಿಕ. ರಾಷ್ಟ್ರೀಯ ಶಿಕ್ಷಣ ವಿಷಯ. ಹೇಗೆ ಕಲಿತರೆ ಹಾಗೆ. ಮಕ್ಕಳಾಗಿದ್ದಾಗ

ನಮಗೆ ಇಂಥವರಲ್ಲಿ ಆನಂದವಿದೆ ಎಂದು ಕಲಿಸಿದರೆ ದೊಡ್ಡವರಾದ ಮೇಲೆ ಅದೇ. ಬೇರೆ ಬೇರೆ ರಾಷ್ಟ್ರೀಯ ಅಭಿರುಚಿಗಳನ್ನು ಇಲ್ಲಿ ಉದಾಹರಿಸಬಹುದು.

ನಾವು ನಿಷ್ಕಾಮಸೇವೆ ಮಾಡುತ್ತಿದೇವೆ, ಜನರು ಕೊಟ್ಟುದನ್ನೆಲ್ಲ ನಾವು ಪರಿಗ್ರಹಿಸಬಹುದು ನಮಗೆ ಅದು ಬೇಕಿರಲಿ ಬೇಡದಿರಲ್ಲಿ ಎಂದು ಕೆಲವರು ತ್ಯಾಗಿಗಳು ತಿಳಿದಿದ್ದಾರೆ. ಈ ಅಭಿಪ್ರಾಯ ಹುಟ್ಟಿತೋ, ಆ ಮನುಷ್ಯ ಸೇವಕತನವನ್ನು ಬಿಟ್ಟು ಜನರ ಮೇಲೆ ಅಧಿಕಾರ ನಡೆಸುವ ಪಾಳೆಯಗಾರನಾಗುತ್ತಾನೆ.

ಸೇವಾಪರಾಯಣ ತನ್ನ ಅನುಕೂಲ ಅನನುಕೂಲಗಳ ಚಿಂತೆಯನ್ನು ಒಂದು ಗಳಿಗೆಯೂ ಮಾಡ. ಅದನ್ನೆಲ್ಲ ನೋಡಬೇಕಾದವನು ಭಗವಂತ. ಆದುದರಿಂದ ದಾರಿಯಲ್ಲಿ ದೊರೆತುದನ್ನೆಲ್ಲ ಅವನು ಪರಿಗ್ರಹಿಸ; ಎಷ್ಟು ಬೇಕೋ ಅದನ್ನೇ, ಉಳಿದುದನ್ನು ತ್ಯಜಿಸುತ್ತಾನೆ. ಅವನು ಪರಮಶಾಂತ, ಕ್ರೋಧಮುಕ್ತ. ಸಂಕಟ ಬಂದರೂ ಸ್ಥೈರಣೆ ಕಳೆದುಕೊಳ್ಳಲಾರ. ಪುಣ್ಯಕ್ಕೆ ಪುಣ್ಯವೇ ಫಲ. ಹಾಗೆ ಸೇವೆಗೆ ಸೇವೆಯೆ ಫಲ ಎಂದರಿತು ಅವನು ಸಂತುಷ್ಟನಾಗಿರುತ್ತಾನೆ.

ಸೇವೆಯಲ್ಲಿ ಅಶ್ರದ್ಧೆ, ಆಲಸ್ಯ ಕೂಡದು. ತನ್ನ ಸ್ವಂತ ಕೆಲಸವಾದರೆ ಶ್ರದ್ಧೆಯಿಂದ ಮಾಡಬೇಕು ; ಸ್ವಲಾಭವಿಲ್ಲದ ಸಾರ್ವಜನಿಕ ಕೆಲಸವನ್ನು ಹೇಗೆ ಮಾಡಿದರೂ ಸರಿಯೆ, ಯಾವಾಗ ಮಾಡಿದರೂ ಸರಿಯೆ ಎನ್ನುವವನಿಗೆ ಯಜ್ಞ ಶಾಸ್ತ್ರದ ಓನಾಮವೇ ಗೊತ್ತಿಲ್ಲ. ಪರಾರ್ಥವಾಗಿ ಮಾಡಿದ ಸ್ವಯಂ ಸೇವೆ ಸ್ವಂತ ಕಾರ್ಯಕ್ಕಿಂತ ಹೆಚ್ಚಿನದು. ತನ್ನ ಅತ್ಯುತ್ತಮ ಶಕ್ತಿ ಸಾಮರ್ಥ್ಯದಿಂದ ಅದನ್ನು ಮಾಡಬೇಕು. ಶುದ್ಧ ಭಕ್ತ ಯಾವ ಬಗೆಯ ಊನವೂ ಇಲ್ಲದೆ ಮಾನವಸೇವೆಗಾಗಿ ಸಮರ್ಪಣೆ ಮಾಡುತ್ತಾನೆ. ಅವನೇ ಶುದ್ಧ ಭಕ್ತ.

ವ್ರತಶ್ಲೋಕ

ಅಹಿಂಸಾ ಸತ್ಯ ಅಸ್ತೇಯ ಬ್ರಹ್ಮಚರ್ಯ ಅಸಂಗ್ರಹ ।
ಶರೀರಶ್ರಮ ಅಸ್ವಾದ ಸರ್ವತ್ರ ಭಯವರ್ಜನ ॥
ಸರ್ವಧರ್ಮೀ ಸಮಾನತ್ವ ಸ್ವದೇಶೀ ಸ್ಪರ್ಶಭಾವನಾ ।
ಹೀ ಏಕಾದಶ ಸೇವಾವೀಂ ನಮ್ರತ್ವೇ ವ್ರತನಿಶ್ಚಯೇ ॥

ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿ

ವಲ್ಲಭನಿಕೇತನ, ಕುಮಾರ ಪಾರ್ಕ್ ಪೂರ್ವ,

ಬೆಂಗಳೂರು–560 001

ನಮ್ಮಲ್ಲಿ ದೊರೆಯುವ ಪುಸ್ತಕಗಳು

1.	ಗೀತಾಪ್ರವಚನ	25–00
2.	ವಿನೋಬಾ ಜೀವನ ದರ್ಶನ	8–50
3.	ಲೋಕನೀತಿ	8–00
4.	ಮಹಾತ್ಮಾಗಾಂಧೀ (1920-48)	18–00
5.	ಬಹುರೂಪಿ ಗಾಂಧೀ	12–00
6.	ವಿನೋಬಾ ದೃಷ್ಟಾಂತ ಕಥೆಗಳು	6–00
7.	ಆತ್ಮಜ್ಞಾನ–ವಿಜ್ಞಾನ	5–00
8.	ವೇದ ಧರ್ಮ ಭಾಗ–1	4–00
9.	ವೇದ ಧರ್ಮ ಭಾಗ–2	4–00
10.	ಜೈನಧರ್ಮ	4–00
11.	ಸ್ತ್ರೀ ಶಕ್ತಿ	4–00
12.	ಜೆ.ಸಿ. ಕುಮಾರಪ್ಪ	5–00
13.	ಗೀತಾ ಪ್ರವಚನ–ಸರ್ವೋದಯ	1–50
14.	ಸರ್ವೋದಯ ಪದ್ಯಾವಳಿ	1–00
15.	ಆಶ್ರಮ ಪ್ರಾರ್ಥನೆ	1–00
16.	ಗಾಂಧೀಜಿ ಕಥೆ	3–00
17.	ನಾಮಮಾಲ	4–00
18.	ಭಾರತ ಎತ್ತ ಸಾಗಿದೆ	6–00
19.	ಸರ್ವೋದಯ	4–00
20.	Talks on Total Revolution	2–00
21.	ಸಾಮ್ಯ ಸೂತ್ರಗಳು	7–50
22.	ಅಧ್ಯಾತ್ಮ ವಿಚಾರ	35–00
23.	ಸ್ಥಿತಪ್ರಜ್ಞ ದರ್ಶನ	18-00
24.	ವಲ್ಲಭ ಸ್ವಾಮಿ	3–00

ಮುದ್ರಣ : ರಾಜ್‌ಕಮಲ್ ಪ್ರೆಸ್, 205, ಅರಳೇಪೇಟೆ, ಬೆಂಗಳೂರು-53